# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮಾರ್ಚ್, ೨೦೧೩ (‘ನವ **ಮಾನವ** ಮಾಸಿಕ’ದ ನೋಂದಿತ ಆವೃತ್ತಿ) ಸಂಪುಟ: ೨ ಸಂಚಿಕೆ: ೮

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ ವಿವರ:** ವಾರ್ಷಿಕ: ರೂ. ೧೨೫/-(ವ್ಯಕ್ತಿಗಳಿಗೆ) ರೂ. ೨೦೦/-(ಸಂಸ್ಥೆ/ಗ್ರಂಥಾಲಯಗಳಿಗೆ)

**ವಿಳಾಸ:** ಎಚ್.ಐ.ಜಿ-೫, ‘ನುಡಿ’, ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

**ಹೈ**ದರಾಬಾದ್‌ನಲ್ಲಿ ರಜಾಕಾರರ ಉತ್ತರಾಧಿಕಾರಿಗಳ ಓವೈಸಿ ಕುಟುಂಬದ ಕಿರಿಯ ಓವೈಸಿ ತಲೆಕೆಟ್ಟವನಂತೆ ರಾಷ್ಟ್ರ, ಧರ್ಮ ಇತ್ಯಾದಿಗಳ ಬಗ್ಗೆ ಅಪಾಯಕಾರಿ ಮಾತುಗಳನ್ನಾಡಿ ಗುಲ್ಲೆಬ್ಬಿಸಿದ್ದಾನೆ.. ಇದಕ್ಕೆ ಪ್ರತಿಕ್ರಿಯೆಯೆಂಬಂತೆ ಈದೇಶದಲ್ಲಿ ಇನ್ನೂ ಉಳಿದಿರುವ ಗಾಂಧಿ ಕೊಲೆ ತಾತ್ವಿಕತೆಯ ಸದ್ಯದ ವಕ್ತಾರ ತೊಗಾಡಿಯಾ ಇನ್ನಷ್ಟು ಅಪಾಯಕಾರಿಯಾಗಿ ಮಾತಾಡಿ ಪರಿಸ್ಥಿತಿಯ ಕಾವೇರಿಸಿದ್ದಾನೆ. ಅದಾದ ಕೆಲವೇ ದಿನಗಳಲ್ಲಿ ಸರ್ಕಾರ ಅಫ್ಜಲ್ ಗುರುವನ್ನು ಗುಟ್ಟಾಗಿ ಗಲ್ಲಿಗೇರಿಸಿದೆ. ಇನ್ನು ಇದಾದ ಹದಿನೈದು ದಿನಗಳಲ್ಲಿ ಹೈದಾರಾಬಾದ್‌ನಲ್ಲಿ ಬಾಂಬ್ ಸ್ಫೋಟಿಸಿ ೧೬ ಜನ ಅಸು ನೀಗಿದ್ದಾರೆ. ಘಟನೆಗಳ ಚಕ್ರ ಇಲ್ಲಿಗೆ ಪೂರ್ಣವಾದಂತೆ ತೋರುತ್ತಿದ್ದರೂ ಅವು ತಿರುಗಿಸಿ ಬಿಟ್ಟಿರುವ ಹಿಂಸೆ ಚಕ್ರ ಇಲ್ಲಿಗೇ ನಿಲ್ಲುವುದೋ ಇಲ್ಲವೋ ಯಾರಿಗೂ ತಿಳಿಯದಾಗಿದೆ.

ಮಿಕ್ಕವರು ಬಿಡಿ;ಅವರು ವ್ಯಕ್ತಿಗಳು. ರಾಷ್ಟ್ರೀಯ ಜವಾಬ್ದಾರಿ ಇಲ್ಲದ ಅಯೋಗ್ಯರು. ಆದರೆ ಈ ಅಯೋಗ್ಯರನ್ನು ನಿಯಂತ್ರಿಸಲಾಗದ, ಬಗ್ಗು ಬಡಿಯಲಾಗದ ಅಸಮರ್ಥ ಸರ್ಕಾರ ತನ್ನ ಈ ಪರಮ ಹೇಡಿತನವನ್ನು ಮುಚ್ಚಿಕೊಳ್ಳುವ ಅಪಾಯಕಾರಿ ರಾಜಕೀಯ ಆಟ ಆರಂಭಿಸಿದರೆ ಈ ಹಿಂಸೆಯ ಚಕ್ರ ನಿಲ್ಲುವುದಾದರೂ ಹೇಗೆ? ಒಂಭತ್ತು ವರ್ಷಗಳ ಕಾಲ ಯಾವುದೇ ನಿರ್ದಿಷ್ಟ ಕಾರಣಗಳಿಲ್ಲದೆ ಮೀನ ಮೇಷ ಎಣಿಸುತ್ತಾ ನಿಷ್ಕ್ರಿಯವಾಗಿದ್ದ ಸರ್ಕಾರ ಇದ್ದಕ್ಕಿದ್ದಂತೆ ರಾಷ್ಟ್ರಪತಿಗಳ ಮೇಜಿನ ಮೇಲೆ ಕೊಳೆಯುತ್ತಿದ್ದ ಅಫ್ಜಲನ ಕ್ಷಮಾದಾನ ಪತ್ರವನ್ನು ನಿಕಾಲೆ ಮಾಡಿಸಿ ಒಂದು ಬೆಳಿಗ್ಗೆ ಗುಟ್ಟಾಗಿ ಅವನನ್ನು ನೇಣಿಗೇರಿಸುವ ದರ್ದಾದರೂ ಈಗ ಏನಿತ್ತು?

ನಿಜ, ಅಫ್ಜಲ್ ರಾಷ್ಟ್ರದ ಪರಮೋಚ್ಚ ಅಧಿಕಾರ ಕೇಂದ್ರವಾದ ಸಂಸತ್ತಿನ ಮೇಲೆ ಉಗ್ರಗಾಮಿಗಳಿಂದ ನಡೆದ ವಿಫಲ ದಾಳಿಯ ’ ಆಯೋಜನೆಯಲ್ಲಿ ಸಹಾಯಕನಾಗಿ ಪಾತ್ರ ವಹಿಸಿದ್ದ ಎಂದು ಸರ್ವೋಚ್ಚ ನ್ಯಾಯಾಲಯ ಆತನಿಗೆ ಮರಣ ದಂಡನಯ ಶಿಕ್ಷೆ ವಿಧಿಸಿ ತೀರ್ಪಿತ್ತಿತ್ತು. ಆದರೆ ಅಂತಹ ಶಿಕ್ಷೆಯ ತೀರ್ಪು ಪಡೆದಿರುವ ಅನೇಕರು ಹಲವು ನೆಲೆಗಳಲ್ಲಿನ ಪರಿಹಾರದ ನಿರೀಕ್ಷೆಗಳಲ್ಲಿ ಇನ್ನೂ ಗಲ್ಲಿಗೇರದೆ ಪ್ರಾಣ ಉಳಿಸಿಕೊಂಡು ನಮ್ಮ ಜೈಲುಗಳಲ್ಲಿದ್ದಾರೆ. ಉದಾಹರಣೆಗೆ ಅಫ್ಜಲನಿಗಿಂತ ಬಹುಮುನ್ನ ಗಲ್ಲು ಶಿಕ್ಷೆಗೆ ಒಳಗಾದ ರಾಜೀವ್ ಗಾಂಧಿ ಹತ್ಯೆಯ ಆರೋಪಿಗಳು. ಹಾಗೆ ನೋಡಿದರೆ ಅಫ್ಜಲ್ ಗುರುವಿನ ಪ್ರಕರಣ ನಮ್ಮ ಸಂವಿಧಾನದ ಪ್ರಕಾರ ಇನ್ನೂ ಲಭ್ಯವಿದ್ದ ವಿಶೇಷ ಪುನರ್ಪರಿಶೀಲನೆಗೆ ಅರ್ಹತೆ ಪಡೆದಿತ್ತು ಎಂದು ದೇಶದ ಹಲವು ಶ್ರೇಷ್ಠ ನ್ಯಾಯವೇತ್ತರು, ಪ್ರಮುಖ ಮಾನವ ಹಕ್ಕುಗಳ ವಕ್ತಾರರು ಮತ್ತು ಹಿರಿಯ ಪತ್ರಕರ್ತರು ಹೇಳುತ್ತಿದ್ದಾರೆ. ಇನ್ನಷ್ಟು ಸಮರ್ಥ ವಕೀಲರು ಅವನಿಗೆ ಲಭ್ಯವಾಗಿದ್ದಿದ್ದರೆ, ಸಹ ಆರೋಪಿಯಾಗಿದ್ದ ಗಿಲಾನಿಯಂತೆ ಈತ ಕೂಡಾ ಕನಿಷ್ಟ ಗಲ್ಲು ಶಿಕ್ಷೆಯಿಂದಲಾದರೂ ಪಾರಾಗುವ ಸಾಧ್ಯತೆಗಳಿದ್ದವು ಎಂದು ಇವರು ಹೇಳುತ್ತಾರೆ. ಆದರೆ ಸರ್ಕಾರ ಇದಾವುದಕ್ಕೂ ಅವಕಾಶ ಸಿಗದಂತೆ, ಆತನ ಮರಣ ದಂಡನೆಯ ಅನುಷ್ಠಾನ ಕುರಿತ ಮಾಹಿತಿ ಆತನ ಕುಟುಂಬಕ್ಕೆ ದೊರೆತಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಭ್ಯತೆಯನ್ನೂ ತೋರದೆ ಅತ್ಯಂತ ಹೇಯ ಅವಸರದಲ್ಲಿ ಆತನ ಪ್ರಾಣ ತೆಗೆದುಕೊಂಡಿದೆ. ಇದು ತನ್ನನ್ನು ಆಧುನಿಕ, ನಾಗರಿಕ ಎಂದು ಕರೆದುಕೊಳ್ಳುವ ಯಾವುದೇ ಸರ್ಕಾರಕ್ಕೆ ಸಲ್ಲದ ನಡೆ. ಯಾರಿಗೇ ಆಗಲಿ ಪ್ರಾಣ ಪ್ರದಾನ ಮಾಡಲಾಗದ ಸರ್ಕಾರಕ್ಕೆ ಅದರ ರಕ್ಷಣೆಯ ಎಲ್ಲ ಸಾಧ್ಯ ನಾಗರಿಕ ಹಕ್ಕುಗಳಿಗೆ ಅವಕಾಶ ನೀಡದೆ ಅದನ್ನು ತೆಗೆದುಕೊಳ್ಳುವ ಯಾವುದೇ ಅಧಿಕಾರವಿಲ್ಲ. ಕನಿಷ್ಟ ನೈತಿಕ ಅಧಿಕಾರವಾದರೂ.

ಈ ವಿಷಯಕ್ಕೆ ಇನ್ನೊಂದು ಆಯಾಮವೂ ಇದೆ. ಅಫ್ಜಲ್ ಗುರು ಕಾಶ್ಮೀರದ ನಾಗರಿಕ. ಅದರ ಸ್ವಾಯತ್ತತೆಯ ಪ್ರತಿಪಾದಕನಾಗಿದ್ದವ. ನಮ್ಮ ದೇಶಭಕ್ತಿಯ ಉತ್ಕಟತೆಯಲ್ಲಿ ನಾವು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಘೋಷಿಸಿಕೊಂಡಿದ್ದೇವೆ. ಆದರೆ ಅದು ಅಂತಾರಾಷ್ಟ್ರೀಯವಾಗಿ ಬಗೆಹರಿಯದ ಸಮಸ್ಯೆಯೇ ಆಗಿ ಉಳಿದಿದೆ ಎಂಬುದು ವಾಸ್ತವಾಂಶ. ಹೀಗಾಗಿ ಅಫ್ಜಲ್ ಗುರುವಿನ ಅಪರಾಧವನ್ನು-ಅದು ನೂರಕ್ಕೆ ನೂರರಷ್ಟು ಸಾಬೀತಾಗಲು ಅವಕಾಶವಿದ್ದ ಅಪರಾಧವೇ ಆಗಿದ್ದಲ್ಲಿ-ಕಾಶ್ಮೀರ ಸಮಸ್ಯೆಯನ್ನು ೬೫ ವರ್ಷಗಳ ನಂತರವೂ ಪರಿಹರಿಸಿಕೊಳ್ಳಲಾಗದ ನಮ್ಮ ಸಮಸ್ಯೆಯ ಭಾಗವಾಗಿಯೇ ಭಾರತ ಸರ್ಕಾರ ನೋಡಬೇಕಿತ್ತು.

ಅಫ್ಜಲ್‌ನಿಗೆ ನ್ಯಾಯಾಲಯದಿಂದ ಮರಣ ದಂಡನೆ ಖಚಿತವಾದ ಮೇಲೂ ಒಂಭತ್ತು ವರ್ಷಗಳ ಕಾಲ ಆತನನ್ನು ಏಕೆ ಜೈಲಿನಲ್ಲಿ ಇಟ್ಟುಕೊಳ್ಳಲಾಗಿತ್ತು? ಕಾಶ್ಮೀರದಲ್ಲಿ ಅಶಾಂತಿ ಭುಗಿಲೇಳುತ್ತದೆ ಎಂಬ ಆತಂಕದಲ್ಲಲ್ಲವೇ? ಆದರೆ ಈಗೇಕೆ ಸರ್ಕಾರ ಇದ್ದಕ್ಕಿದ್ದಂತೆ ಅವನನ್ನು ಗಲ್ಲಿಗೇರಿಸಿ ಕಾಶ್ಮೀರದಿಂದ ಸರ್ಕಾರಿ ಸುದ್ದಿಯ ಹೊರತಾಗಿ ಇನ್ನಾವ ಸುದ್ದಿಯೂ ಹೊರಬರದಂತೆ ಪ್ರತಿಬಂಧಗಳನ್ನು ಹೇರಿ ಕಾನೂನು ಪಾಲಿಸುವ ನಾಟಕವಾಡಿತು? ಚುನಾವಣೆಗಳು ಹತ್ತಿರ ಬಂದಿದ್ದು, ಅಫ್ಜಲ್ ಗುರುವಿನ ಪ್ರಾಣಕ್ಕಾಗಿ ಹಾತೊರೆಯುತ್ತಾ ರಾಷ್ಟ್ರೀಯತೆಯ ಮೇಲಿನ ತನ್ನ ಗುತ್ತೇದಾರಿಕೆಯನ್ನು ಸ್ಥಾಪಿಸಲು ಯತ್ನಿಸುತ್ತಿದ್ದ ಬಿಜೆಪಿಯ ಒಂದು ಚುನಾವಣಾ ವಿಷಯವನ್ನು ತಣ್ಣಗಾಗಿಸಿಲಿಕ್ಕೇ ಅಲ್ಲವೇ? ತನ್ನ ಕೊರಳನ್ನು ಬಿಗಿಯಾಗಿ ಸುತ್ತಿಕೊಳ್ಳುತ್ತಿರುವ ಹಲವಾರು ಬೃಹತ್ ಭ್ರಷ್ಟಾಚಾರದ ಹಗರಣಗಳ ಮಧ್ಯೆ ಸ್ವಲ್ಪ ಉಸಿರಾಡಲು ಅವಕಾಶ ಮಾಡಿಕೊಳ್ಳಲು ಅಲ್ಲವೇ?

ಇದು ಕ್ಷುಲ್ಲಕ;ಅಗ್ಗದ ರಾಜಕಾರಣ. ಇದರಿಂದ ಪಾರಾಗಲು, ಬೇರೆ ಆಯ್ಕೆಯೇ ಇಲ್ಲದಂತೆ ನಮ್ಮನ್ನು ಸುತ್ತುವರೆದುಕೊಂಡಿರುವ ಸಂಪೂರ್ಣ ಕುಲಗೆಟ್ಟು ಹೋಗಿರುವ ಈ ಕಾಂಗ್ರೆಸ್-ಬಿಜೆಪಿ ಯುಗಳ ರಾಜಕಾರಣದಿಂದ ದೇಶವನ್ನು ಮುಕ್ತಗೊಳಿಸುದೊಂದೇ ದಾರಿ ಎಂದು ಕಾಣುತ್ತದೆ.

ಯಾರಿಗಾದರೂ ಈ ಬಗ್ಗೆ ಅನುಮಾನವಿದ್ದರೆ ಇಂದು ಕರ್ನಾಟಕದ ರಾಜಕಾರಣ ಮುಟ್ಟಿರುವ ದುಃಸ್ಥಿತಿಯನ್ನು ನೋಡಬಹುದು. ಈ ಎರಡೂ ಪಕ್ಷಗಳ ನಡುವೆ(ಅಥವಾ ಇವುಗಳ ಟಿಸಿಲುಗಳಂತಿರುವ ಇತರ ಯಾವುದೇ ಪಕ್ಷಗಳ ನಡುವೆ) ಏನಾದರೂ ವ್ಯತ್ಯಾಸ ಕಾಣುತ್ತದೆಯೇ? ಯಾರು ಯಾವಾಗಬೇಕಾದರೂ ಯಾವುದೇ ಪಕ್ಷದಲ್ಲಿರಬಹುದು! ಸಂಸದೀಯ ರಾಜಕಾರಣ ಇದಕ್ಕಿಂತ ಲಜ್ಜೆಗೆಡಲು, ಹೊಲಸಾಗಲು ಸಾಧ್ಯವೇ?

**-ಸಂಪಾದಕ**

## ನಿಮ್ಮ ಮಾತು

**ಪ್ರಿ**ಯ ಸಂಪಾದಕರೇ,

ನಾನು ಈ ಮೊದಲು ಸಮಾಜವಾದದ ಪ್ರಾಥಮಿಕ ಪರಿಚಯವಷ್ಟೇ ಇತ್ತು. ಲೋಹಿಯಾ, ಜೆಪಿ, ಗೋಪಾಲಗೌಡ, ಜೆ.ಎಚ್ ಪಟೇಲರ ಹೆಸರುಗಳನ್ನು ಕೇಳಿದ್ದೆ. ಆದರೆ 'ಹೊಸ ಮನುಷ್ಯ' ನನಗೆ ಸಮಾಜವಾದದ ವಿವಿಧ ಮಗ್ಗುಲುಗಳನ್ನು ಕರ್ನಾಟಕದಲ್ಲಿ ಮಾತ್ರವಲ್ಲ, ರಾಷ್ಟ್ರ ಮತ್ತು ಜಾಗತಿಕ ಮಟ್ಟದಲ್ಲಿನ ಪ್ರಚಲಿತ ವಿದ್ಯಮಾನಗಳ ಬಗ್ಗೆ ಸಮಾಜವಾದಿ ನೆಲೆಯ ವಿಶ್ಲೇಷಣೆಗಳನ್ನು ನಡೆಸುವ ಮೂಲಕ ಪರಿಚಯ ಮಾಡಿಕೊಡುತ್ತಿದೆ. ಇದರ ಪರಿಣಾಮವಾಗಿ ಇಂದು ನಮಗೆ ಸಮಾಜವಾದ ಅಗತ್ಯವೆನ್ನಿಸತೊಡಗಿದೆ. ನಿಮಗೆ ಧನ್ಯವಾದಗಳು.

**–ಸಿ.ಎಂ. ಅಂಗಡಿ,** ಹೊಸದೇಹಳಿ

ಫೆಬ್ರುವರಿ ಸಂಚಿಕೆಯ ೨೦ ಪುಟಗಳಲ್ಲಿ ೧೦ ಪುಟಗಳನ್ನು ಎರಡೇ ಲೇಖನಗಳು ಕಬಳಿಸಿವೆ. ಇದು ಸರಿಯಲ್ಲ. ಕಾಶ್ಮೀರ ಕುರಿತ ಎಂಟು ಪುಟಗಳ ಲೇಖನದಲ್ಲಿ ಹೊಸದೇನೂ ಇಲ್ಲ. ಇನ್ನು ದೇಮ ಅವರ ಪುಸ್ತಕ ಕುರಿತ ಸಮೀಕ್ಷೆ ಅಷ್ಟು ದೀರ್ಘವಾಗಿರುವ ದರ್ದೇನೂ ಇದ್ದಿಲ್ಲ. ಸಮಾಜವಾದಿ ಪತ್ರಿಕೆ ವೈವಿಧ್ಯಮಯವಾದ ಹಲವು ಲೇಖನಗಳ ಮೂಲಕ ಮಲಗಿರುವ ಯುವಜನರನ್ನು ಎಚ್ಚರಿಸುವಂತಿರಬೇಕು.

**–ಎಂ. ಸುದರ್ಶನ ರಾಜ,** ಧಾರವಾಡ

ಕಾಶ್ಮೀರ ಕುರಿತ ಲೇಖನ ಹಲವಾರು ಹೊಸ ಸಂಗತಿಗಳನ್ನು ತಿಳಿಸುತ್ತದೆ. ಅದರ ಈ ಚರಿತ್ರೆಯನ್ನು ನೋಡಿದರೆ ಕಾಶ್ಮೀರ ಇಂದು ಹೀಗಿರಲು ಅಲ್ಲಿನ ಮತೀಯ ರಾಜಕಾರಣವೇ ಕಾರಣವೆಂದು ತೋರುತ್ತದೆ.

ಇನ್ನು ಮಹಿಳೆ ಮೇಲಿನ ದೌರ್ಜನ್ಯವನ್ನು ಕಾನೂನುಗಳಿಂದ ತಡೆಯಲು ಸಾಧ್ಯವಿಲ್ಲವೆಂದು ದಿನನಿತ್ಯದ ಘಟನೆಗಳಿಂದ ಗೊತ್ತಾಗುತ್ತಿದೆ. ಭೂಮಿಯ ಮೇಲೆ ಗಂಡಸರಿರುವವರೆಗೂ ಹೆಂಗಸರು ಹುಷಾರಾಗಿರಬೇಕೇನೋ!

**–ವೆಂಕಟೇಶ ಮಾಚಕನೂರು,** ಧಾರವಾಡ

ಮದನಾ ಶಿವ ಅವರ ಲೇಖನ ಲೇಖನ ನಮ್ಮ ದೇಶದ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟಿದಂತೆ ಹೇಳಿದೆ. 'ನಮ್ಮ ಸಮಾಜವಾದಿಗಳು' ಅಂಕಣ ಕೂಡ ನನಗೆ ಬಹಳ ಇಷ್ಟವಾಗಿದೆ ಅದರಲ್ಲೂ ಕಳೆದ ಸಂಚಿಕೆಯ 'ಜನ ಸೇವಕ' ದಿನಕರ ದೇಸಾಯಿ ಯವರ ಲೇಖನ ನನ್ನ ಮನಮುಟ್ಟಿತು. ಇನ್ನು ಮುಂದೆ ಸಾಮಾಜಿಕ ನ್ಯಾಯ ಹಾಗೂ ಮಹಿಳಾ ಸಂವೇದಿ ಲೇಖನಗಳು ಹೆಚ್ಚಾಗಿ ಮೂಡಿಬರಲಿ ಈ ಪತ್ರಿಕೆಯಲ್ಲಿ.

**–ಅಖಿಲಾ,** ವಿದ್ಯಾಸಂದ್ರ

ಜನವರಿ ಸಂಚಿಕೆಯಲ್ಲಿನ ದಿನಕರ ದೇಸಾಯಿ ಕುರಿತ ಪರಿಚಯ ಗಮನ ಸೆಳೆಯಿತು. ಕಿಡಿಗೇಡಿಯ ಕಾಮೆಂಟುಗಳು ಬಲು ಪರಿಣಾಮಕಾರಿಯಾಗಿವೆ.

**–ಸುರೇಶ ಅಂಗಡಿ,** ಹೂವಿನಹಡಗಲಿ

## ಒಂದು ಪ್ರತಿಕ್ರಿಯೆ : ಪವಿತ್ರ ಗೋವು V/s ಹಸಿದ ವ್ಯಾಘ್ರ

**ದೇ**ವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಕನ್ನಡದ ಬಹುಪಾಲು ಚಿಂತಕ, ವಿಮರ್ಶಕ, ಓದುಗರಿಗೆ 'ದಾರ್ಶನಿಕ ಕೃತಿ'ಯಾಗಿ, 'ಪವಿತ್ರ ಗೋವಿ'ನಂತೆ ಕಾಣಿಸುತ್ತಿದ್ದರೆ ಈ ಪುಸ್ತಕಕ್ಕೆ ಕೆ.ಬಿ.ಸಿದ್ಧಯ್ಯನವರು ಬರೆದ ವಿಮರ್ಶೆ('ಹೊಸ ಮನುಷ್ಯ', ಫೆಬ್ರುವರಿ, ೨೦೧೩) ವಿಗ್ರಹ 'ಭಂಜಕವಾಗಿ ಕಂಡು ಅಲ್ಲಲ್ಲಿ ಕೋಲಾಹಲ, ಕ್ರೋಧ ಉಂಟುಮಾಡಿದಂತಿದೆ.

ಸಿದ್ಧಯ್ಯನವರ ಬರಹದ ಧಾಟಿ, 'ಯಾಸ', ಧೋರಣೆಗಳು ಮೊದಲ ಓದಿಗೆ ಅಸಹನೆಯಿಂದ ಸಿಟ್ಟಿಗೇಳುವಂತೆ ಮಾಡುತ್ತದೆ. ಒಗಟಿನಂತಹ ಭಾಷೆ, ಉಡಾಫೆಯ ಶೈಲಿ, ಮುಚ್ಚುಮರೆಯ ತಂತ್ರ... ಯಾಕಿವೆಲ್ಲ ಅನ್ನಿಸಿತು. ಹೀಗೆ ನನ್ನ ಉರಿವ ಸಿಟ್ಟು ಉರಿದಿಳಿದು ತಣ್ಣಗಾದ ನಂತರ ಈ ಬರಹದ ಮೇಲು ಸ್ತರದ ದೋಷಗಳ ಆಳದಲ್ಲಿ ಅಡಗಿರುವ ಸತ್ಯದ, ಸಂಕಟದ ನಿರೂಪಣೆ ತನ್ನತ್ತ ಹೀಗೆ ಸೆಳೆಯಲಾರಂಭಿಸಿತು:

೧) ಕೆ.ಬಿ. ಸಿದ್ಧಯ್ಯನವರು ಬರೆದ ಈ ವಿಮರ್ಶಾ ಲೇಖನದ ಸದ್ಯದ ಸ್ವರೂಪವನ್ನು ನಿರ್ಧರಿಸಿರುವುದೇ 'ಅಭಿನವ' ಪ್ರಕಾಶನದ ಈ ಪುಸ್ತಕ ಹೊರಬಂದ ಚಾರಿತ್ರಿಕ ಸಂದರ್ಭ. ಇದೀಗ ತಾನೆ ನ್ಯಾ॥ ಸದಾಶಿವ ಆಯೋಗದ ಒಳಮೀಸಲಾತಿ ಶಿಫಾರ್ಸುಗಳು ಹೊರಬಿದ್ದು, ಕರ್ನಾಟಕದ ಅಸ್ಪೃಶ್ಯ 'ಎಡಗೈ' ಸಮುದಾಯದಲ್ಲಿ ಸಂಘಟನೆಯ ಹೊಸ ಸಂಚಲನವೊಂದು ಧಿಗ್ಗನೆದ್ದಿರುವಾಗ, ಈ ಸಂಚಲನದ ಕಾರಣಕರ್ತರಲ್ಲಿ ಕೆ.ಬಿ.ಕೂಡ ಒಬ್ಬರಾಗಿರುವ ಕಾರಣ ಒಂದು 'ಅಪಘಾತ'ದಂತೆ ಈ 'ಬರಹ' ಸಂಭವಿಸಿದೆ.

೨) ರಾಷ್ಟ್ರದಲ್ಲಿ ದಲಿತ ಮೀಸಲಾತಿ ಜಾರಿಗೆ ಬಂದ ಲಾಗಾಯ್ತು ಇಲ್ಲೀವರೆಗೆ ಸಹಜ ನ್ಯಾಯದಲ್ಲಿ ನಂಬಿಕೆಯಿಟ್ಟು ಕೂತ 'ಎಡಗೈ' ಸಮುದಾಯ ತನ್ನ ಒಡಹುಟ್ಟೇ ಎಲ್ಲ ಕಡೆ ತನ್ನ ಪಾಲನ್ನು ಕಸಿದುಕೊಂಡ ಅರಿವಿನ ಸ್ಫೋಟದಲ್ಲಿ ಈಗ ಎಚ್ಚೆತ್ತುಕೊಂಡಿದೆ. ಈ 'ಎಚ್ಚರ'ದ ಸಂಕೇತವನ್ನಷ್ಟೇ ಕೆ.ಬಿ. ಸಿದ್ದಯ್ಯ ತಮ್ಮ 'ಬರಹ'ದ ಮುಖೇನ ತಮ್ಮ 'ಬಲ' ಭಾಗದಲ್ಲಿರುವ ಮಹಾದೇವ ಅವರ ಕಡೆಗೆ ರವಾನಿಸಿದ್ದಾರೆ. ಅದೀಗ 'ಪವಿತ್ರ ಗೋವು' ಪುಣ್ಯಕೋಟಿ ಎದುರು ಹಸಿದ ವ್ಯಾಘ್ರ 'ಅರ್ಬುತ' ನಿಂತಂತಾಗಿದೆ.

೩) ಸಿದ್ದಯ್ಯನವರು ಎತ್ತಿರುವ ಇದುವರೆಗೆ ಕರ್ನಾಟಕದ ಬೇರೆ ಬೇರೆ ಕಡೆ ಸಾವಿರ ಸಾವಿರ ಸಂಖ್ಯೆಯುಲ್ಲಿ ಆದ ಬೌದ್ಧ ಧರ್ಮಾಂತರಗಳಲ್ಲಿ ಬಹುಪಾಲು 'ಬಲಗೈ' ಸಮುದಾಯವೇ ಮುಂದಿರುವುದು ಮತ್ತು ಕರ್ನಾಟಕದುದ್ದಕ್ಕೂ ಇರುವ ಬೌದ್ಧಾಲಯಗಳು 'ಬಲಗೈ' ಬಂಟರ(ಅಂದರೆ 'ಉಳ್ಳವರ') ಸುಪರ್ದಿನಲ್ಲಿ ಯಾಕೆ? ಎಂಬ ಪ್ರಶ್ನೆಗಳು ಸ್ಪೃಶ್ಯ ಸಾಮಾಜಿಕ ವಲಯದ ಚಿಂತಕರೂ ಸ್ವಲ್ಪ ಈ ಬಗ್ಗೆ ತಲೆ ಕೆಡಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಸೃಷ್ಟಿಸಿದೆ.

೪) ಇನ್ನು ಕಳೆದೈವತ್ತು ವರ್ಷಗಳ ಕರ್ನಾಟಕದ ದಲಿತ ರಾಜಕಾರಣದ ಚರಿತ್ರೆಯಲ್ಲಿ ಬೆರಳೆಣಿಕೆಯ ಜನರನ್ನು ಬಿಟ್ಟರೆ 'ಬಲಗೈ' ರಾಜಕಾರಣಿಗಳೇ ಸತತವಾಗಿ ಪ್ರಾತಿನಿಧ್ಯ ಮೆರೆದದ್ದರಲ್ಲಿ 'ಎಡಗೈ' ಸಮುದಾಯದ 'ತುಳಿತ'ದ ಕಾರಣವಿದೆ ಎಂಬ ಅಂಶವನ್ನು ಕೆ.ಬಿ. ಒಡೆದು ಹೇಳದೆ ಮೌನವಾಗಿ ಸೂಚಿಸುತ್ತಿದ್ದಾರೆ.

೫) ಸ್ವಯಂ ತಮ್ಮ 'ಕಣ್ಣು ತೆರೆಸಿದ ಲೇಖಕ' ಎಂದು ಮಹಾದೇವ ಅವರನ್ನು ಗುರುತಿಸುವ ಕೇಬಿ, ತನ್ನೈವರು 'ಪಂಚ ಪಾಂಡವ'ರಷ್ಟನ್ನೇ' ಸದಾ ಕಣ್ಣಾಗವಲು, ಮೈಗಾವಲು ಕಾಯುತ್ತಾ ಇನ್ನೊಂದು ಕರುಳ ಕುಡಿ 'ಕರ್ಣ'ನ ಬಗ್ಗೆ ಬಾಯಿ ಬಿಡದ 'ಎಡಗೈ' ಸಮುದಾಯದ ಬಗ್ಗೆ ನಿರ್ದಯ 'ಕುಂತೀ ಭಾವ' ತಾಳಿರುವ ಮಹಾದೇವ ಬಗ್ಗೆ ಕೆ.ಬಿ. ಪ್ರಕಟಿಸುವ ಆಘಾತವೇ ಈ ವಿಮರ್ಶಾ ಬರಹವಾಗಿ ವಿಸ್ತರಿಸಲ್ಪಟ್ಟಿದೆ.

೬) ಆದರೆ ಈ ಆಘಾತವನ್ನು ತಪ್ಪಿಯೂ ಕೂಡ ಅಳುಮುಂಜಿಯಂತೆ ವ್ಯಕ್ತಪಡಿಸದ ಕೇಬಿ ಬರಹ, ತನ್ನ ಲೀಲಾವ್ಯೆನೋದಿಕ ಧಾಟಿಯಲ್ಲಿ ತನ್ನನ್ನು ತಾನು ನೆಲೆಗೊಳಿಸಿಕೊಳ್ಳುತ್ತಾ ತನ್ನ ಸಮುದಾಯದ ಸಂಕಟಗ್ರಸ್ತ ಗಂಭೀರ ಸ್ಥಿತಿಯನ್ನು ನಿವೇದಿಸಲು ಮುಂದಾಗಿದೆ.

೭) ವಿಮರ್ಶೆಯ ದ್ವಿತೀಯಾರ್ಥವು ದೇವನೂರರ ಬರಹ ಕೂಡಾ ಹೇಗೆ 'ಕುಶಲಕರ್ಮ'ವಾಗಿ ಪರಿಣಮಿಸಿ ತನ್ನ 'ಸೃಜನಶೀಲತೆ'ಯನ್ನು ಕಳೆದುಕೊಂಡಿರಬಹುದೆಂಬ ಸಂದೇಹವನ್ನು ಸೂಚಿಸುತ್ತದೆ. ಇದನ್ನೇ 'ಬೋನ್ಸಾಯ್'(ಇದರ ವಿವರಣೆ ಅತಿಯಾಯಿತಾದರೂ!) ಮಾದರಿಯ 'ಅಂದಾಜೀಕರಣ'ವೆಂದು ಹೇಳುವ ಲೇಖಕರು ಈ 'ಬರಹಗಾರಿಕೆ'ಗೆ ಇರಬಹುದಾದ 'ಪ್ರದರ್ಶನ ಪ್ರಿಯ'ತೆ ಅಥವಾ 'ಮಹತ್ವಾಕಾಂಕ್ಷೆ'ಯ ಬಗ್ಗೆ ಪ್ರಸ್ತಾಪಿಸಿ, ದೇವನೂರರಂತಹ ದೊಡ್ಡ ಬರಹಗಾರನಲ್ಲೂ ಇದ್ದು ಬಿಟ್ಟಿರಬಹುದಾದ ಅಪಾಯಕಾರಿ ಅಂಶದ ಬಗ್ಗೆ ಗಮನ ಸೆಳೆಯುತ್ತಾರೆ.

ಈ ಎಲ್ಲ ಕಾರಣಗಳಿಗಾಗಿಯೇ, 'ದಾರ್ಶನಿಕ ಕೃತಿ', 'ದಲಿತ್ ಸ್ವರಾಜ್' ಎಂದೆಲ್ಲ ಪ್ರಶಂಸೆಗೆ, ಉತ್ಸವಕ್ಕೆ ಕಾರಣವಾಗುತ್ತಿರುವ ದೇವನೂರರ 'ಎದೆಗೆ ಬಿದ್ದ ಅಕ್ಷರ' ಸಿದ್ದಯ್ಯನವರಿಗೆ 'ಎದೆಗೆ ಬಿದ್ದ ಬೆಂಕಿ'ಯಂತೆ ಕಂಡುಬಂದ ವಿಲಕ್ಷಣ ಘಟನೆ ಸಂಭವಿಸಿಬಿಟ್ಟಿದೆ.

**–ಕೆ.ಪಿ.ನಟರಾಜ,** ತುಮಕೂರು

# 'ಚರಕೋತ್ಸವ'ದ ಸಂಭ್ರಮದಲ್ಲಿ 'ಗಾಂಧಿ ಶಾಲೆ'ಯ ವಿಚಾರ ಮಂಥನ





**ಶಿ**ವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಹೆಗ್ಗೋಡಿನ ಬಳಿಯ ಭೀಮನಕೋಣೆಯಲ್ಲಿರುವ ಚರಕ ಮಹಿಳಾ ವಿವಿಧೋದ್ದೇಶ ಮಹಿಳಾ ಸಹಕಾರ ಸಂಘದ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಫೆಬ್ರುವರಿ ೧೫, ೧೬ ಹಾಗೂ ೧೭ರಂದು ಚರಕೋತ್ಸವವನ್ನು ಏರ್ಪಡಿಸಲಾಗಿತ್ತು. ಈ ಉತ್ಸವದ ಅಂಗವಾಗಿ ಹೊನ್ನೇಸರದ ಪರಿಸರದಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿರುವ ಶ್ರಮಜೀವಿ ಆಶ್ರಮದ ಆವರಣದಲ್ಲಿ ಗಾಂಧಿ ವಿಚಾರಗಳನ್ನು ಕುರಿತ 'ಗಾಂಧಿ ಶಾಲೆ' ಎಂಬ ಅಧ್ಯಯನ ಶಿಬಿರವನ್ನು ಆಯೋಜಿಸಲಾಗಿತ್ತು.

೧೪ರಂದು ಚರಕೋತ್ಸವವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಪತ್ರಕರ್ತ ಸುಗತಾ ಶ್ರೀನಿವಾಸರಾಜು ಅವರು, ಚರಕ ಸಂಸ್ಥೆ ಗಾಂಧಿ ಪ್ರತಿಪಾದಿಸಿದ 'ಅಭಿವೃದ್ಧಿ' ಮಾದರಿಯ ಯಶಸ್ವಿ ಪ್ರಾತ್ಯಕ್ಷಿಕೆಯಾಗಿದ್ದು ಗ್ರಾಮೀಣ ಹೆಣ್ಣುಮಕ್ಕಳ ಸಬಲೀಕರಣದ ಕೆಲಸ ಎಲ್ಲ ಅರ್ಥಗಳಲ್ಲಿ ಇಲ್ಲಿ ನಡೆಯುತ್ತಿದೆದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಹಿರಿಯ ಸರ್ವೋದಯ ಮುಖಂಡ ಸುರೇಂದ್ರ ಕೌಲಗಿಯವರು, ದೇಶ ಇಂದು ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಗಳಲ್ಲಿ ಎಷ್ಟೇ ಮುಂದುವರೆದಿದ್ದರೂ ಅದರ ಅಭಿವೃದ್ಧಿ ಫಲ ಹೆಚ್ಚೆಚ್ಚು ಅಶಾಂತಿ, ಹಿಂಸೆ, ಆತ್ಮಹತ್ಯೆಗಳ ರೂಪದಲ್ಲಿ ಕಾಣಲಾರಂಬಿಸಿದ್ದು, ಗಾಂಧಿ ಪ್ರತಿಪಾದಿಸಿದ ಶ್ರಮ ಸಂಸ್ಕೃತಿ ಆಧಾರಿತ ಕಸುಬು–ಕೈಗಾರಿಕೆಗಳು ಮಾತ್ರ ಭಾರತವನ್ನು ಕಾಪಾಡಬಲ್ಲುದು ಎಂದರು.

'ಗಾಂಧಿ ಶಾಲೆ'ಯ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ 'ಚರಕ'ದ ಮುಂದಾಳು ಪ್ರಸನ್ನ ಅವರು ಚರಕ ಬಡತನ ನಿವಾರಣೆಯ ಅಸ್ತ್ರವಾಗಿದ್ದು ಈ ಅಸ್ತ್ರ ಸಾಕಷ್ಟು ಯಶಸ್ವಿಯಾಗಿದೆ ಎಂಬುದು ಚರಕ ಸಂಸ್ಥೆಯ ಈವರೆಗಿನ ಕಾರ್ಯನಿರ್ವಹಣೆಯ ಅನುಭವದಿಂದ ನಮಗೆ ಗೊತ್ತಾಗಿದೆ ಎಂದರು. ಮುಂದುವರೆದು ಮಾತನಾಡಿದ ಅವರು ಬಡತನವನ್ನು ಮೀರುವುದು ಎಂದರೆ, ಆಸ್ತಿ ಮಾಡುವುದು, ಇತರರ ಮೇಲೆ ಸವಾರಿ ಮಾಡಲು ತಯರಾಗುವುದು ಎಂದಲ್ಲ; ಬದಲಿಗೆ, ಸಹಕಾರ ತಂತ್ರದಿಂದ ನಮ್ಮ ಬದುಕನ್ನು ನಾವೇ ನಡೆಸಿಕೊಳ್ಳುವುದಷ್ಟೇ ಅಲ್ಲ, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವುದೂ ಎಂದರ್ಥ ಎಂದು ವಿವರಿಸಿದರು.

ಗಾಂಧಿ ಶಾಲೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಚರಕದ ಸದಸ್ಯರಿಗೆ ಕರೆ ನೀಡಿದ ಪ್ರಸನ್ನ, ಏನನ್ನೇ ಆಗಲಿ ಮಾಡುವ ಮೊದಲು ಕಟ್ಟಕಡೆಯ ಮನುಷ್ಯನ ಬಗ್ಗೆ ಯೋಚಿಸುತ್ತಿದ್ದ ಗಾಂಧೀಜಿಯನ್ನು ಅವರ ಸರಳ ಬದುಕು, ಶ್ರಮಕ್ಕೆ ಆದ್ಯತೆ ಮತ್ತು ಸುಳ್ಳು ಹೇಳದಿರುವುದು, ಸಹನೆ–ತಾಳ್ಮೆಗಳನ್ನು ರೂಢಿಸಿಕೊಳ್ಳುವುದು, ಜಾತಿ ಮತ್ತು ಅಸ್ಪೃಶ್ಯತೆಯನ್ನು ಆಚರಿಸದಿರುವುದು –ಈ ಸರಳ ತತ್ವಗಳ ನೆಲೆಯಲ್ಲಿ ಅರ್ಥ ಮಡಿಕೊಳ್ಳಬೇಕಾಗಿದೆ ಎಂದು ಸೂಚಿಸಿದರು.

ಅಧ್ಯಯನ ಶಿಬಿರದಲ್ಲಿ ಕಡಿದಾಳು ಶಾಮಣ್ಣ, ಅಗ್ರಹಾರ ಕೃಷ್ಣಮೂರ್ತಿ, ಕೆ.ಪಿ. ಸುರೇಶ, ಪ್ರಮೋದ್ ಶಿಗ್ಗಾಂವ್, ಪ್ರಕಾಶ್ ಭಟ್, ಮನು ಮೈಸೂರು, ಉಮಾಶಂಕರ ಪೆರಿಯಾಡಿ, ಡಿ.ಎಸ್. ನಾಗಭೂಷಣ, ವಿ.ಎಸ್. ಶ್ರೀಧರ್, ಶ್ರೀಪಾದ ಭಟ್, ಪಾಂಡುರಂಗ ಹೆಗ್ಗಡೆ, ಚಂದನಗೌಡ, ಸಂತೋಷ ಕೌಲಗಿ, ಕೆ. ಫಣಿರಾಜ್, ಶ್ರೀಕುಮಾರ್, ಮಮತಾ ಜಿ.ಸಾಗರ, ಕೃಪಾ, ಅಖಿಲಾ, ಮುದ್ದುಕೃಷ್ಣ, ಸವಿತಾ ನಾಗಭೂಷಣ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಗೋಷ್ಠಿಗಳು ಮುಖ್ಯವಾಗಿ ಗಾಂಧಿಯವರ 'ಹಿಂದ್ ಸ್ವರಾಜ್', 'ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ' ಕೃತಿಗಳ ಮತ್ತು 'ಗಾಂಧಿ–ಅಂಬೇಡ್ಕರ್ ಮುಖಾಮುಖಿ' ವಿಚಾರಗಳನ್ನು ಕುರಿತಾಗಿದ್ದರೂ, ಒಟ್ಟಾರೆ ಕೃಷಿ, ಕೈಗಾರಿಕೆ, ಶಿಕ್ಷಣ, ಪರಿಸರ ಹಾಗೂ ದಲಿತ ಮತ್ತು ಮಹಿಳೆಯರ ಸ್ಥಾನಮಾನ ಕುರಿತ ಗಾಂಧಿ ವಿಚಾರಗಳನ್ನೂ ಚರ್ಚಿಸಲಾಯಿತು.

ಮುಖ್ಯ ಗೋಷ್ಠಿಗಳ ನಂತರ ಶಿಬಿರಾರ್ಥಿಗಳನ್ನು ಐದು ಗುಂಪುಗಳನ್ನಾಗಿ ವಿಂಗಡಿಸಿ ಗುಂಪು ಚರ್ಚೆಗೂ ಅವಕಾಶ ಮಾಡಿಕೊಡಲಗಿತ್ತು. 'ಚರಕ'ದ ಮುನ್ನೂರು ಸದಸ್ಯರಲ್ಲದೆ ಬೆಂಗಳೂರಿನ ಗಾರ್ಮೆಂಟ್ ವಲಯದ ಕಾರ್ಮಿಕರು, ರಾಜ್ಯದ ವಿವಿಧ ಭಾಗಗಳಿಂದ ಬಂದ ನೇಕಾರರು ಮತ್ತು ಸುತ್ತಮುತ್ತಲಿನ ಹಳ್ಳಿಗಳ ಸಾರ್ವಜನಿಕರೂ 'ಗಾಂಧೀ ಶಾಲೆ;ಯ ಚರ್ಚೆಗಳಲ್ಲಿ ಭಾಗವಹಿಸಿದ್ದರು.

ಪ್ರತಿ ವರ್ಷ ಚರಕದ ವಿವಿಧ ವಿಭಾಗಗಳ ಅತ್ಯುತ್ತಮ ಕೆಲಸಗಾರರಿಗೆ ನೀಡುವ ಕಾಯಕ ಪ್ರಶಸ್ತಿಗಳನ್ನು ಮತ್ತು ಚರಕೋತ್ಸವದ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸುವ ಸಮಾರೋಪದೊಂದಿಗೆ ೧೭ರ ಸಂಜೆ ಉತ್ಸವ ಮುಕ್ತಾಯ ಕಂಡಿತು. ಮೂರೂ ದಿನ ಸಂಜೆ ಜನಪದ ಹಾಡು, ಕುಣಿತ, ನಾಟಕ, ಯಕ್ಷಗಾನ ಮುಂತಾದ ಸಾಂಸ್ಕೃತಿಕ ಕರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಒಟ್ಟಿನಲ್ಲಿ ಗಾಂಧಿ ಹೆಸರಿನಲ್ಲಿ ನಡೆದ ಈ ಹಬ್ಬ ಗ್ರಾಮೀಣರಲ್ಲಿ ಗಾಂಧಿ ವಿಚಾರಗಳ ಬಗ್ಗೆ ಹೊಸ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತೆಂದೇ ಹೇಳಬೇಕು.

(ವರದಿ: **ಪ್ರಭಾಕರ ಸಾಂಶಿ**)

**'ಹೊಸ ಮನುಷ್ಯ' ಪತ್ರಿಕೆ ಮುಖ್ಯವಾಗಿ ಆಹ್ವಾನಿತ ಲೇಖನಗಳಿಗೆ ಮೀಸಲಾಗಿದೆ. ಹಾಗಿದ್ದೂ, ಓದುಗರು ಲೇಖನ ಕಳಿಸುವುದಿದ್ದರೆ, ಅವು ಚಿಕ್ಕದಾಗಿ, ೪೫೦ ಶಬ್ದಗಳನ್ನು ಮೀರದಂತಿರಬೇಕು. ಲೇಖನ ಪತ್ರಿಕೆಯ ಚೌಕಟ್ಟಿಗೆ ಹೊಂದುವಂತಿದ್ದರೆ ಪ್ರಕಟಿಸಲಾಗುವುದು. 'ನಿಮ್ಮ ಮಾತು' ಅಂಕಣಕ್ಕೆ ಅಭಿಪ್ರಾಯ ಬರೆಯ ಬಯಸುವವರು ಅದನ್ನು ೫೦–೬೦ ಶಬ್ದಗಳಿಗೆ ಮೀರದಂತೆ, ಪ್ರತಿ ತಿಂಗಳ ೨೦ರೊಳಗಾಗಿ ನಮಗೆ ತಲುಪುವಂತೆ ಕಳಿಸಬೇಕು. ಇನ್ನು ಲೇಖನಗಳಿಗೆ ಪ್ರತಿಕ್ರಿಯೆ ೨೦೦–೨೫೦ ಶಬ್ದಗಳನ್ನು ಮೀರದಂತಿರಲಿ.**

**–ಸಂಪಾದಕ**



# ಕಾಡಂಚಿನ ಅಮೃತಭೂಮಿಯಲ್ಲಿ ರೈತಮಕ್ಕಳ ಕಲರವ

**–ಅಪೂರ್ವ ಡಿ'ಸಿಲ್ವ**



**ಚಾ**ಮರಾಜನಗರದ ಹೊಂಡರಬಾಳು ಎಂಬ ಕಾಡಂಚಿನ ಪ್ರದೇಶದಲ್ಲಿ ಸಿದ್ಧಗೊಂಡಿರುವ ರೈತ ನಾಯಕ ಎಂ.ಡಿ. ನಂಜುಂಡಸ್ವಾಮಿಯವರ ಸ್ಮಾರಕ 'ಅಮೃತ ಭೂಮಿ'ಯಲ್ಲಿ ಕಳೆದ ತಿಂಗಳ ೧೩ ರಿಂದ ೧೬ರವರೆಗೆ 'ರೈತೋತ್ಸವ' ಜರುಗಿತು. ಗಾಂಧಿ, ಲೋಹಿಯ, ಅಂಬೇಡ್ಕರ್‌ರವರ ಭಾವಚಿತ್ರಗಳ ಅನಾವರಣದೊಂದಿಗೆ 'ಗ್ರಾಮ ಸ್ವರಾಜ್ಯ ಕೇಂದ್ರ'ದಲ್ಲಿ 'ನಂಜುಂಡಸ್ವಾಮಿ ಜೀವನ ಶಾಲೆ' ಮತ್ತು 'ಟಿಕಾಯತ್ ಹೋರಾಟದ ನೆಲೆ' ಉದ್ಘಾಟನೆಗೊಂಡವು. ಈ ರೈತೋತ್ಸವ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವಾಗಿ ಆಯೋಜಿತಗೊಂಡಿದ್ದು, ಉತ್ತರ ಮತ್ತು ದಕ್ಷಿಣ ಭಾರತದ ವೈವಿಧ್ಯಮಯ ಸಂಸ್ಕೃತಿಯ ಮುಖಗಳು ಅಲ್ಲಿ ಅಡ್ಡಾಡುತ್ತಿರುವುದನ್ನು ನೋಡುವುದೇ ಒಂದು ಸಂಭ್ರಮವಾಗಿತ್ತು. ನಮ್ಮ ಕಿಷನ್ ಪಟ್ನಾಯಕರ ಶಿಷ್ಯ ಕನ್ನಯ್ಯನ್, ಟಿಕಾಯತ್‌ರ ಮಗ ರಾಕೇಶ್ ಟಿಕಾಯತ್, ಕೇರಳದ ಜಾನು ಎಂಬ ಮಹಿಳೆ, ಆಂ ಆದ್ಮಿ ಪಕ್ಷದ ಯೋಗೇಂದ್ರ ಯಾದವ್, ನಮ್ಮವರೇ ಆದ ದೇವನೂರು ಮಹದೇವ ಹೀಗೆ ಹಲವು ಹತ್ತು ಹಳೆಯ ಹಾಗೂ ಹೊಸ ಮುಖಗಳು ೧೩ರ ಇಡೀ ದಿನದ ಕಾರ್ಯಕ್ರಮದಲ್ಲಿ ಪರ್ಯಾಯ ರಾಜಕಾರಣದ ಹುಡುಕಾಟದಲ್ಲಿ ಜೊತೆಯಾಗಿದ್ದವು. ಅಲ್ಲಿ ಸಭೆಯಲ್ಲಿ ನೆರೆದಿದ್ದ ರೈತ ಸಮೂಹ ಭರವಸೆ ನೀಡುವ, ಸಾಂತ್ವನ ಹೇಳುವ ಜೀವಕ್ಕಾಗಿ ಪರಿತಪಿಸುತ್ತಿತ್ತಂತಿತ್ತು. ಅಷ್ಟರಲ್ಲಿ ಮೇಧಪಾಟ್ಕರ್ ಬಂದರು. ಭಾರತದ ಈ ವೈವಿಧ್ಯತೆಗೆ ಇನ್ನೊಂದು ಗರಿ ಸೇರಿಸುವ ಹಾಗೆ ಜೊತೆಗೆ ಸೇರಿಕೊಂಡರು. ಅವರನ್ನು ನೋಡುತ್ತಿದ್ದಂತೆ ನನ್ನೊಳಗೆ ಪ್ರಶ್ನೆಗಳು ಹುಟ್ಟಿಕೊಂಡವು. ಅವರನ್ನು ಯಾರೂ ಬಿಡಲೊಲ್ಲರು. ಯುವಕ–ಯುವತಿಯರು, ಹಿರಿಯರು, ಪತ್ರಿಕೆಯವರು, ಕಡೆಗೆ ವೇದಿಕೆ!

ಆದರೂ ನಾನು 'ಹೊಸ ಮನುಷ್ಯ' ಎಂಬ ಸಮಾಜವಾದಿ ಪತ್ರಿಕೆಗೆ ಸಂದರ್ಶನ ಮಾಡುವ ಬಗ್ಗೆ ಕೇಳಿಕೊಂಡಾಗ ಒಪ್ಪಿಕೊಂಡರು. ಅಷ್ಟರಲ್ಲಿ ಕತ್ತಲಾಗಿತ್ತು. ಇನ್ನೇನು ಸಂದರ್ಶನ ಪ್ರಾರಂಭಿಸಬೇಕು ಎನ್ನುವಷ್ಟರಲ್ಲಿ ದೇವನೂರು ಮಹದೇವ ಅವರು ಬಂದು ಮೇಧಾ ಪಾಟ್ಕರ್‌ರನ್ನು ಮಾತನಾಡಿಸುತ್ತಾ "ಆಮ್ ಆದ್ಮಿ" ಎಂದರು. ಮೇಧಾ ಪಾಟ್ಕರ್, "ಆಪ್ ಆಮ್ ಆದ್ಮಿ" ಎಂದರು. "ಹಮ್ ಆಮ್ ಆದ್ಮಿ" ಎಂದರು ಮಹದೇವ. "ನಹಿ ನಹಿ ಆಪ್ ಆಮ್ ಆದ್ಮಿ ಟೀಕ್ ಹೈ. ಪರ್ ಪಾರ್ಟಿ?!' ಅಂತ ಹೇಳುವಷ್ಟರಲ್ಲಿ 'ಏಕ್ ಮಿನಿಟ್' ಎಂದು ಮಹದೇವರ ಜೊತೆ ಮಾತಾಡಲು ಹೋದರು. ನಂತರ ನನ್ನ ಮೊದಲ ಪ್ರಶ್ನೆಗೆ ದೇವನೂರರ ಜೊತೆ ಇದೇ ಮಾತಾಡ್ತಿದ್ದೆ ಅಂದರು. ಪ್ರಶ್ನೋತ್ತರ ಹೀಗಿತ್ತು. :



**ನಿಮ್ಮ ಆಂದೋಲನವನ್ನು ಪರ್ಯಾಯ ರಾಜಕಾರಣವಾಗಿ ಹೇಗೆ ನೋಡುತ್ತೀರಿ? ನೀವೇಕೆ ನೇರ ಚುನಾವಣೆ ಎದುರಿಸುವುದಿಲ್ಲ?**

ಚುನಾವಣೆ ನಿಯಮಗಳನ್ನು ಪಾಲಿಸ್ತಾ, ಗೆಲ್ಲೋದಿಕ್ಕೆ ಹಲವು ರೀತಿಯ ರಾಜಿ, ಹೊಂದಾಣಿಕೆ ಮಾಡ್ಕೋಬೇಕು. ಇದೆಲ್ಲ ನಮಗೆ ಆಗೊಲ್ಲ. ಇವೆಲ್ಲ ಬದಲಾಗಬೇಕಾದ್ರೆ ಇನ್ನೂ ದೀರ್ಘವಾದ ಚರ್ಚೆ, ರಣ ನೀತಿಗಳು ನಿರ್ಧಾರ ಆಗಬೇಕು. ಹಾಗೆ ನೋಡಿದರೆ, ನಮ್ಮ ಚಳವಳಿ ಕಾರಣದಿಂದಲೇ ಅರಣ್ಯ ಹಕ್ಕು, ಮಾಹಿತಿ ಹಕ್ಕು, ಜಾರಿಗೆ ಬಂದದ್ದು. ಇದೇ ನಮ್ಮ ಮಟ್ಟಿಗೆ ಸದ್ಯಕ್ಕೆ ಪರ್ಯಾಯವಾದ ಒಂದು ನಡೆ. ನಮ್ಮ ರಾಷ್ಟ್ರೀಯ ಜನಾಂದೋಲನ ಸಮಿತಿ ಪರ್ಯಾಯ ರಾಜಕೀಯ ಪಕ್ಷವಾಗಲು ಯತ್ನಿಸ್ತಿರೋ ಆಮ್ ಆದ್ಮಿ ಪಾರ್ಟಿಯ ವಿರೋಧಿಯಲ್ಲ. ಪಾರ್ಟಿಗೆ ಸೇರಲ್ಲ ಎನ್ನುವುದನ್ನು ಬಿಟ್ಟರೆ ನಾನವರ ಜೊತೆಗೇ ಇದ್ದೇನೆ.

**ಅಣ್ಣಾ ಆಂದೋಲನದ ಮುಂದಿನ ದಾರಿ ಹೇಗಿರಬಹುದು?**

ಅಣ್ಣಾ ಆಂದೋಲನ ದೊಡ್ಡ ಮಟ್ಟದಲ್ಲಿ ಶುರುವಾಯಿತು. ಆದರೆ ಅದು ಉಳಿಸಿಕೊಳ್ಳೋಕೆ ಆಗಲಿಲ್ಲ. ಆದಿವಾಸಿ, ದಲಿತ ರೈತವರ್ಗಗಳು ಅಷ್ಟಾಗಿ ಇಲ್ಲಿ ಕಾಣಿಸಿಕೊಳ್ಳಲಿಲ್ಲ. ಮಧ್ಯಮವರ್ಗ ಬರ್ತಾಯಿದೆ. ಇದನ್ನು ದಮನಿತರ ಆಂದೋಲನವಾಗಿ ವಿಸ್ತರಿಸಲು ಐಡಿಯಾಲಜಿಯ ಕೊರತೆಯಿದೆ.

**ನೈಸರ್ಗಿಕ ಸಂಪನ್ಮೂಲ ರಕ್ಷಣೆಗೆ ಸರ್ಕಾರ ಏನು ಕ್ರಮ ಕೈಗೊಳ್ಳಬೇಕು?**

ನೈಸರ್ಗಿಕ ಸಂಪನ್ಮೂಲ ಆಯಾ ಗ್ರಾಮದ ಗ್ರಾಮ ಸಭೆಯ ಹಿಡಿತದಲ್ಲಿರಬೇಕು. ವಿಕೇಂದ್ರಿಕರಣಗೊಳ್ಳಬೇಕು. ಇದನ್ನು ಯೋಜನಾ ಆಯೋಗ ಕೂಡ ಒಪ್ಪಿತ್ತು. ಆದರೆ ಏನೂ ಪ್ರಯೋಜನ ಆಗಲಿಲ್ಲ.

**ಆಮ್ ಆದ್ಮಿ ಪಕ್ಷದ ಬಗ್ಗೆ ನಿಮ್ಮ ನಿಲುವೇನು?**

ಸೀರಿಯಸ್ಸಾಗಿ ಮಾಡ್ತಿದ್ದಾರೆ. ನಾವು ಅದರ ಸಂಪರ್ಕದಲ್ಲಿ ಇರ್ತೇವೆ. ಈಗ್ಲೆ ಚುನಾವಣೆ ರಾಜಕೀಯಕ್ಕೆ ನಾವು ಹೋಗಲ್ಲ. ಎಲ್ಲವನ್ನೂ ಗಮನಿಸ್ತಿದೀವಿ

**ಕಿಶನ್ ಪಟ್ನಾಯಕರ ರಾಷ್ಟ್ರೀಯ ಜನಾಂದೋಲನದ ಸಮನ್ವಯ ಸಮಿತಿಯ ಕನಸು ಏನಾಗಿದೆ?**

ಅದು ನಡಿತಿದೆ, ಅದರ ಆಂದೋಲನ ಇನ್ನೂ ವ್ಯಾಪಕಗೊಳ್ಳಬೇಕು. ೧೮ ವರ್ಷದಿಂದ ನಡೀತಿದೆ. ಒರಿಸ್ಸಾದ ಆದಿವಾಸಿ, ಬಿಹಾರದ ರೈತ, ಛತ್ತೀಸ್‌ಗಡ ಹೀಗೆ ಬೇರೆ ಬೇರೆ ರಾಜ್ಯಗಳಲ್ಲಿ ಕೆಲಸ ಮಾಡ್ತಿದ್ದೇನೆ

–ಅಂತ ಹೇಳುವಷ್ಟರಲ್ಲಿ ಸಭೆ ಆರಂಭವಾಗಿ 'ನಡಿರಿ ಸಭೆಗೆ ಹೋಗೋಣ' ಅಂದ್ರು.

ಸಭೆಯಲ್ಲಿ ಕನ್ನಯ್ಯನ್ ಎಂದಿನ ಕಳಕಳಿಯಲ್ಲಿ, 'ನಾವೆಲ್ಲ ಜೊತೆ ಸೇರಬೇಕು, ಒಂದು ಕಾಮನ್ ಇಶ್ಶ್ಯು ಇಟ್ಕೊಂಡಾದ್ರು ನಾವು ಒಂದಾಗಬೇಕು. ನಿಮ್ಮೆಲ್ಲರ ಅಭಿಪ್ರಾಯ ತಿಳಿಸಿ' ಎಂದರು. ಆಮ್ ಆದ್ಮಿ ಪಕ್ಷದ ಯೋಗೇಂದ್ರ ಯಾದವ್ ಎದ್ದು ನಿಂತು ಭೂಸ್ವಾದೀನ ಕಾಯ್ದೆ ಏಪ್ರಿಲ್‌ಗೆ ಜಾರಿಯಾಗಬಹುದು. ಇದನ್ನು ಪ್ರಶ್ನಿಸಿ ನಾವೆಲ್ಲ ಒಂದಾಗೋದಾದ್ರೆ ಇಡೀ ಭಾರತವನ್ನು ಒಗ್ಗಟ್ಟು ಮಾಡಬಹುದು ಎಂದರು. ಮೇಧಾ ಪಾಟ್ಕರ್, ಬೇರೆ ಬೇರೆ ಪಕ್ಷಗಳು ಇದಕ್ಕೆ ತೋರಿಸಬಹುದಾದ ವಿರೋಧ, ಉದ್ಯಮಿಗಳು ಇದಕ್ಕೆ ಒಡ್ಡಬಹುದಾದ ಪ್ರತಿರೋದ ವಿವರಿಸಿದರು. ನಮ್ಮ ಸಂವೇದನೆ ವ್ಯಕ್ತಿಗತವಾಗದೆ ವ್ಯಾಪಕವಾಗಿ ಎಲ್ಲರೊಳೊಂದಾಗುವ ಸಾಧ್ಯತೆ ಕಡಿಮೆ ಎಂದ ದೇವನೂರರು ಒಂದು ಘಟನೆ ವಿವರಿಸಿದರು. 'ದಲಿತ ಸಾಹಿತ್ಯ ಬಗೆಗಿನ ಒಂದು ಮಾತುಕತೆಯಲ್ಲಿ ಒಬರ್ಬು ನನಗೆ ದಲಿತ ಅಂದ್ರೆ ಏನು ಅನ್ನೊಲ್ಲಾ... ಮಾದಿಗ ಅಂದಾಗ ಕಂಪನ ಆಗುತ್ತೆ' ಅಂದರು. ಇದು ವ್ಯಕ್ತಿಗತ. ಇದನ್ನೇ ಕಲೆಯಾಗಿ ಆತ ಮಾಡಬಹುದಾದರೆ ಆತನ

ಸಂವೇದನೆ ಎಲ್ಲರ ಸಂವೇದನೆಯಾಗಿ ರೂಪುಗೊಳ್ಳಬಹುದಾದರೆ ನಾವು ಒಟ್ಟಾಗಿ ಇಂತಹ ಸಮಸ್ಯೆಯನ್ನು ಎದುರಿಸಬಹುದು ಎಂದರು.

ಒಟ್ಟಿನಲ್ಲಿ ಎಂ.ಡಿ.ಎನ್. ನೆನಪಲ್ಲಿ ರಾಷ್ಟ್ರದ ಪ್ರಮುಖ ನಾಯಕರ ಈ ಸಭೆ ಒಂದು ಭರವಸೆ ಹುಟ್ಟಿಸಿತ್ತು. ರೈತರ ಪ್ರೀತಿ ಮತ್ತು ಕಾರ್ಯಕ್ರಮದ ದಣಿವಿನಿಂದ ಸಮಾರಂಭದ ಆಯೋಜಿಕಿಯು ಎಂ.ಡಿ.ಎನ್‌ರ ಮಗಳೂ ಆದ ಚುಕ್ಕಿ ಭಾವುಕರಾಗಿದ್ದರು. ಮಾರ್ಚ್ ೧೮ರ ಭೂಸ್ವಾಧೀನ ಕಾಯ್ದೆ ವಿರೋಧಿ ಚಳುವಳಿಗೆ ದೆಹಲಿಗೆ ಹೋಗಲು ಮಾನಸಿಕವಾಗಿ ಎಲ್ಲರು ಸಜ್ಜಾದಂತೆ ಕಾಣುತಿತ್ತು.

# ರೈತರಿಗೆ ಪಕ್ಷ ರಾಜಕಾರಣವೊಂದೇ ದಾರಿ: 'ಅಮೃತಭೂಮಿ'ಯಲ್ಲಿ ಯೋಗೇಂದ್ರ ಯಾದವ್



೧೯೮೦ರಲ್ಲಿ ರೈತರ ಆಂದೋಲನ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ರೈತನಾಯಕ ಮಹೇಂದ್ರ ಸಿಂಗ್ ಟಿಕಾಯತ್ ದೆಹಲಿ ಗದ್ದುಗೆಯನ್ನೇ ನಡುಗಿಸಿದ್ದರು. ಕರ್ನಾಟಕದಲ್ಲಿ ಪ್ರೊ॥ ಎಂ.ಡಿ. ನಂಜುಂಡಸ್ವಾಮಿ ರೈತ ಚಳುವಳಿಯ ಮೂಲಕ ಸಂಚಲನ ಉಂಟು ಮಾಡಿದ್ದರು. ೧೯೯೦ರಷ್ಟೊತ್ತಿಗೆ ಇದು ತನ್ನ ಹಿಡಿತವನ್ನು ಕಳೆದುಕೊಂಡಿತು. ಇತ್ತೀಚಿನ ದಿನಗಳಲ್ಲಿ ರೈತ ಆಂದೋಲನ ಅವನತಿಯ ಹಾದಿ ಹಿಡಿದಿದೆ. ಅತ್ಯಂತ ತಳಮಟ್ಟಕ್ಕೆ ಕುಸಿದಿದೆ. ಆಗ ಯಾಕೆ ರೈತ ಚಳುವಳಿ ಪ್ರಭುತ್ವವನ್ನು ನಡುಗಿಸಿತ್ತು ಎಂದರೆ ಆಗ ರೈತರು ಪಕ್ಷ, ವರ್ಗ, ಜಾತಿ ಯಾವುದೇ ಭೇದವಿಲ್ಲದೆ ಚಳುವಳಿಗೆ ಧುಮುಕಿದ್ದರು. ದಲಿತ ಚಳುವಳಿಯೊಂದಿಗೆ ರೈತ ಚಳುವಳಿಯು ಹೆಜ್ಜೆ ಹಾಕಿತ್ತು. ಈಗ ರೈತ ಚಳುವಳಿಯನ್ನು ಪ್ರಭುತ್ವ ಜಾತಿ ವರ್ಗದ ಆಧಾರದಲ್ಲಿ ಛಿದ್ರಗೊಳಿಸಿದೆ. ಒಂದು ಕಾಲದಲ್ಲಿ ಪ್ರಭುತ್ವಕ್ಕೆ ನಡುಕ ಹುಟ್ಟಿಸಿದ್ದ ರೈತ ಚಳುವಳಿ ಈಗ ಕನಿಷ್ಟ ಬೆಂಬಲ ಏರಿಸಿ, ಕಬ್ಬಿನ ಬೆಲೆ ಏರಿಸಿ, ಭೂಮಿ ಬೆಲೆ ಸ್ವಲ್ಪ ಏರಿಸಿ ಎಂದು ಪ್ರಭುತ್ವದ ಮುಂದೆ ಅಂಗಲಾಚಿ ಕೇಳುವಷ್ಟರ ಮಟ್ಟಿಗೆ ಕುಸಿದಿದೆ. ಕೇವಲ ರಕ್ಷಣಾತ್ಮಕ, ನಕರಾತ್ಮಕ ರಾಜನೀತಿ ಮಾತ್ರ ಉಳಿದಿದೆ. ಯಾವುದೇ ದೊಡ್ಡ ನೀತಿ-ಕಾರ್ಯಕ್ರಮಗಳು ಉಳಿದಿಲ್ಲ.

ನೆಹರೂರವರ ದೊಡ್ಡ ಯೋಜನೆಗಳಿಂದ ರೈತರಿಗೆ ಯಾವುದೇ ಪ್ರಯೋಜನವಿಲ್ಲ. ಇಂತಹ ಯೋಜನೆಗಳಿಂದ ನಗರಗಳ ಉದ್ಧಾರವಾದೀತೆ ಹೊರತು ಗ್ರಾಮಗಳು ಕುಸಿಯುತ್ತವೆ ಎಂಬುದನ್ನು ಮೊಟ್ಟಮೊದಲಿಗೆ ರಾಷ್ಟ್ರಕ್ಕೆ ಮನವರಿಕೆ ಮಾಡಿಕೊಟ್ಟವರು ಚೌಧುರಿ ಚರಣ್ ಸಿಂಗ್. ಅಂತಹ ನಾಯಕರು ಈಗ ಉಳಿದಿಲ್ಲ. 'ಚರಣ್ ಸಿಂಗ್, ಟಿಕಾಯತ್, ನಂಜುಂಡಸ್ವಾಮಿ ಅವರ ಕಾಲದ ವೈಭವವನ್ನು ರೈತ ಚಳುವಳಿ ಕಳೆದುಕೊಂಡಿದ್ದರೂ ಸಹ ಎಲ್ಲವನ್ನು ಕಳೆದುಕೊಂಡಿಲ್ಲ. ರೈತನಿಗೆ ತಾನು ನಿಂತಿರುವ ಒಂದು ಎಕರೆಯೋ ಎರಡು ಎಕರೆಯೋ ಭೂಮಿ ಇದೆ. ಈ ದೇಶದ ಶೇ.೭೦ರಷ್ಟಿರುವ ರೈತರ, ರೈತ ಮಹಿಳೆಯರ ಕುಟುಂಬಗಳ ಬಹು ದೊಡ್ಡ ಓಟಿನ ಶಕ್ತಿ ಇದೆ. ಅನ್ನದಾತ ಎಂಬ ಗೌರವ ಪ್ರತಿಷ್ಠೆಗಳಿವೆ. ರೈತ ತನ್ನ ಆತ್ಮ ಮಾರಿಕೊಂಡಿಲ್ಲ. ಗ್ರಾಮೀಣ ಪ್ರದೇಶಗಳ ರೈತರಲ್ಲದೇ ಮಂಡ್ಯ, ಚಾಮರಾಜನಗರದಂತಹ ಸಣ್ಣ ನಗರ ಪಟ್ಟಣಗಳಲ್ಲಿ ರೈತ ಮನಸ್ಸಿನ ಜನರಿದ್ದಾರೆ. ಇಂದು ಒಂದು ಎಕರೆ ಜಮೀನಿನಿಂದ ಏನೂ ಸಾಧ್ಯವಿಲ್ಲ. ಆದರೆ ಒಂದು ಎಕರೆ ಜಮೀನಿರುವ ರೈತನೂ ರಾತ್ರಿ ಖಾಲಿ ಹೊಟ್ಟೆಯಲ್ಲಿ ಮಲಗಿದರೂ, ಮಕ್ಕಳಿಗೆ ಶಿಕ್ಷಣ ಕೊಡಲಾಗದಿದ್ದರೂ ಅನ್ನದಾತ ಎಂದಾಕ್ಷಣ ಬೀಗುತ್ತಾನೆ. ಜಮೀನ್ದಾರ ಎಂದು ಕರೆಸಿಕೊಳ್ಳಲು ಇಷ್ಟ ಪಡುತ್ತಾನೆ. ಮೀಸೆ ಹುರಿಗೊಳಿಸಿ ರುಮಾಲು ಸುತ್ತಿ ಗರ್ವದಿಂದ ತಿರುಗಾಡುತ್ತಾನೆ. ಇಂತಹ ರೈತ ಬದುಕಿ ಉಳಿಯಲು, ಗ್ರಾಮಗಳು ದೆವ್ವದ ಊರುಗಳಾಗದಂತೆ ಕಾಪಾಡಲು ಒಂದೇ ಒಂದು ದಾರಿ ಉಳಿದಿದೆ. ಅದು ರಾಜಕಾರಣ!

ಸರ್ಕಾರಿ ನೌಕರರಿಗೆ ಒಳ್ಳೆಯ ಸಂಬಳ ಸಿಗುತ್ತದೆ. ಅವರಿಗೆ ರಾಜಕಾರಣದ ಅವಶ್ಯಕತೆಯಿಲ್ಲ. ಅವರು ಕಾರ್ಮಿಕ ಸಂಘಟನೆಗಳ ಮೂಲಕ ತಮ್ಮ ಸಂಬಳ ಹೆಚ್ಚಳಕ್ಕೆ, ಭತ್ಯೆಗಳ ಹೆಚ್ಚಳಕ್ಕೆ ಹೋರಾಡುತ್ತಾರೆ. ಕಂಪನಿ ಪ್ರಭುಗಳಿಗೂ ರಾಜಕಾರಣ ಬೇಕಾಗಿಲ್ಲ. ರಾಜಕಾರಣಿಗಳನ್ನು ತಮ್ಮ ಜೇಬಿನಲ್ಲಿಟ್ಟುಕೊಳ್ಳುವ ಶಕ್ತಿಯುಳ್ಳ ಅವರು ತಾವೇ ಜೇಬಿಗೆ ಇಳಿಯಲು ಬಯಸುವುದಿಲ್ಲ. ಆದ್ದರಿಂದಲೇ ಅಂಬಾನಿ ರಾಜ್ಯಸಭೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಹೊರಬಂದರು. ರಾಜಕಾರಣಿಗಳನ್ನು ತಮ್ಮ ಇಷ್ಟ ಬಂದಂತೆ ಆಡಿಸುವ ಶಕ್ತಿ ಅವರಿಗೆ ಕರಗತವಾಗಿದೆ. ಆದರೆ ರೈತನಿಗೆ ರಾಜಕಾರಣ ಬಿಟ್ಟರೆ ಪರ್ಯಾಯ ಮಾರ್ಗವಿಲ್ಲ. ಆತ ತನ್ನ ಶಕ್ತಿ ತೋರಿಸಲು ಬೀದಿಗಿಳಿಯಲೇ ಬೇಕು. ಆಕ್ರಮಣಶೀಲನಾಗಲೇಬೇಕು. ಸಣ್ಣ ರಾಜಕಾರಣ ಮಾಡಿ ಪ್ರಯೋಜನವಿಲ್ಲ. ಬೃಹತ್ ರಾಜಕಾರಣವನ್ನೆ ಮಾಡಬೇಕು. ಜಾತಿ ಭೇದ, ಪಕ್ಷ ಭೇದ, ವರ್ಗ ಭೇದವಿಲ್ಲದೆ ರೈತರೆಲ್ಲಾ ಒಗ್ಗೂಡಬೇಕು. ತಮ್ಮ ಓಟಿನ ಶಕ್ತಿಯನ್ನು ಸಮರ್ಥವಾಗಿ ಬಳಸಬೇಕು. ಇದರಲ್ಲಿ ದೊಡ್ಡ ರೈತ, ಸಣ್ಣ ರೈತ ಮೇಲ್ಜಾತಿ ರೈತ ದಲಿತ ರೈತ ಎಂಬ ಭೇದ ಭಾವ ಸಲ್ಲದು. ರೈತ ಎಂದರೆ ಅದೊಂದೆ ಜಾತಿ, ಅದೊಂದೆ ಪಂಗಡ. ಆತ ಪಕ್ಷ ರಾಜಕಾರಣ ಮಾಡಿದರೆ ಮಾತ್ರ ಬದುಕಬಲ್ಲ. ಇಲ್ಲದಿದ್ದರೆ ಆತನ ಜಮೀನನ್ನು ಕಿತ್ತುಕೊಳ್ಳಲಾಗುತ್ತದೆ. ರೈತರನ್ನು ವ್ಯವಸ್ಥಿತವಾಗಿ ಗ್ರಾಮಗಳಿಂದ ಪಟ್ಟಣಗಳಿಗೆ ವಲಸೆ ಹೋಗುವಂತೆ ಮಾಡಲಾಗುತ್ತದೆ. ಇದು ಹೀಗೆ ಮುಂದುವರೆದರೆ ಗ್ರಾಮಗಳು, ಜನರು ಖಾಲಿಯಾಗಿ ದೆವ್ವದ ವಾಸಸ್ಥಾನಗಳಾಗುತ್ತವೆ. ಗ್ರಾಮಗಳನ್ನು ಉಳಿಸಲು ಸಶಕ್ತಗೊಳಿಸಲು ಅಲ್ಲಿಯು ನಿರುದ್ಯೋಗ ಇಲ್ಲದಂತೆ ಮಾಡಲು ರಚನಾತ್ಮಕ ಸಕಾರಾತ್ಮಕ, ಗಟ್ಟಿ ರಾಜಕಾರಣ ಬೇಕು. ಇದು ಇಂದಿನ, ಈಗಿನ ಅವಶ್ಯಕತೆ. ಇಲ್ಲದಿದ್ದರೆ ರೈತ ತಾನು ಹೆಮ್ಮೆಯಿಂದ ಬೀಗುವ ಒಂದು ಎರಡು ಎಕರೆ ಜಮೀನನ್ನು ಕಳೆದುಕೊಂಡು ಬೀದಿ ಭಿಕಾರಿಯಾಗುತ್ತಾನೆ.


ಕೇಂದ್ರ ಸರ್ಕಾರ ಕಾರ್ಪೋರೇಟ್ ಕಂಪನಿಗಳಿಗೆ ೫ ಲಕ್ಷ ಕೋಟಿ ರೂಪಾಯಿಗಳ ಸಬ್ಸಿಡಿ ನೀಡುತ್ತಿದೆ. ಹೆಲಿಕಾಪ್ಟರ್ ಖರೀದಿಸಲು ಮದ್ದು ಗುಂಡು ಬಂದೂಕು ಖರೀದಿಸಲು ಸಾವಿರ ಸಾವಿರ ಕೋಟಿ ವ್ಯಯಿಸುತ್ತಿದೆ. ಇಂತಹ ಸರ್ಕಾರಕ್ಕೆ ದೇಶದ ಶೇ. ೬೦ರಷ್ಟು ರೈತರಿಗೆ ಒಬ್ಬ ೪ನೇ ದರ್ಜೆ ಸರ್ಕಾರಿ ನೌಕರನಿಗೆ ಸಿಗುವಷ್ಟು ಕನಿಷ್ಟ ಗ್ಯಾರಂಟಿ ಆದಾಯ ಕೊಡುವುದು ಕಷ್ಟವಾಗಲಾರದು. ಇದನ್ನು ಲೆಕ್ಕ ಹಾಕಿದರೆ ೧ ಲಕ್ಷ ೨೦ ಸಾವಿರ ಕೋಟಿ ರೂಪಾಯಿಗಳಾಗುತ್ತದೆ. ಪ್ರತಿ ತಿಂಗಳು ಒಬ್ಬ ರೈತನಿಗೆ ೧ ಸಾವಿರ ರೂ.ಗಳ ಕನಿಷ್ಠ ಆದಾಯ ಸಿಗಬೇಕು. ಹಸಿರು ಕ್ರಾಂತಿ ಈಗ ನಿಂತುಹೋಗಿದೆ. ವ್ಯವಸಾಯದಲ್ಲಿ ಪರ್ಯಾಯ ಮಾರ್ಗಗಳನ್ನು, ಸುರಕ್ಷಾತಾ ಮತ್ತು ಆರೋಗ್ಯ ಪೂರ್ಣ ಮಾರ್ಗಗಳನ್ನು ಹುಡುಕುವ ಅನಿವಾರ್ಯತೆ ಎದುರಾಗಿದೆ. ಗ್ರಾಮಗಳಲ್ಲಿ ಕೃಷಿ ಜೊತೆ ಉದ್ಯೋಗ ಸೃಷ್ಠಿಯಾಗಬೇಕು. ಆಗ ಗ್ರಾಮಗಳು ಉಳಿಯುತ್ತವೆ. ಇದೆಲ್ಲಾ ಆಗಲು ರೈತ ಬೀದಿಗೆ ಬರಬೇಕು. ರೈತನಿಗೆ ಒಂದು ಹಸುರು ಪಕ್ಷ ಬೇಕು. ದೊಡ್ಡ ಕನಸಿಟ್ಟು ಅದನ್ನು ನನಸು ಮಾಡಲು ಆಕ್ರಮಣಶೀಲ ಮಾರ್ಗವೊಂದೇ ದಾರಿ. ನೀವು ಪಕ್ಷ ಕಟ್ಟಿ ರಾಜಕಾರಣ ಮಾಡಿ. ಚುನಾವಣೆಯಲ್ಲಿ ಸೋತರೂ ಸರಿ. ಆಗ ಇತರ ಪಕ್ಷಗಳು ನಿಮ್ಮನ್ನು ಸೋಲಿಸಲು ನಿಮ್ಮ ಪ್ರಣಾಳಿಕೆಯಲ್ಲಿರುವ ಅಂಶಗಳನ್ನು ತಮ್ಮದರಲ್ಲಿ ಅಳವಡಿಸುತ್ತಾರೆ. ಒಟ್ಟಿನಲ್ಲಿ ನಮ್ಮ ಕನಸುಗಳು ನನಸಾಗಬೇಕು. ಇದೆಲ್ಲಾ ಮಾಡಲು ಇನ್ನು ೫-೬ ವರ್ಷಗಳು ಮಾತ್ರ ಉಳಿದಿವೆ. ಕಲ್ಲಿನ ಮೇಲೆ ಇತಿಹಾಸ ಬರೆಯಬಹುದು ಇಲ್ಲವೇ ಕಲ್ಲಿನ ರಾಶಿಯೊಳಗೆ ನಿಮ್ಮ ಇತಿಹಾಸ ಸಮಾಧಿಯಾಗಬಹುದು. ಅದುದರಿಂದ ರೈತರೇ ಎಚ್ಚರಗೊಳ್ಳಿ! ಒಗ್ಗಟ್ಟಾಗಿ! ಅಮೃತಭೂಮಿ ಇಂತಹ ಒಂದು ಪರ್ಯಾಯ ಮಾರ್ಗಕ್ಕೆ ನಾಂದಿ ಹಾಡಲಿ.

**(ಕನ್ನಡಕ್ಕೆ : ಅಬ್ರಾಹಂ ಡಿ'ಸಿಲ್ವ)**

# ಪ್ರೊ||ಬಿ.ಕೃಷ್ಣಪ್ಪ ನೆನಪಿನ ಮಾಲೆ-೪

–ಇಂದಿರಾ ಬಿ. ಕೃಷ್ಣಪ್ಪ

## ಅತ್ತೆ ಮನೆಯಲ್ಲಿ ಹೋಳಿಗೆ ಊಟ!





**ಕೃಷ್ಣಪ್ಪನವರ ಸೋದರಿಯರು**

**ನಾ**ವು ಸುಮಾರು ಹನ್ನೊಂದು ಗಂಟೆಗೆ ಭದ್ರಾವತಿಯ ಮನೆಯಿಂದ ಹೊರಟು ಶಿವಮೊಗ್ಗಕ್ಕೆ ಬಂದು ಹರಿಹರದ ಬಸ್ಸು ಹಿಡಿದು ಊರು ತಲುಪಿದಾಗ ಮುಸ್ಸಂಜೆ ನಿಧಾನವಾಗಿ ಹೆಜ್ಜೆಯಿರಿಸುತ್ತಿತ್ತು. ಹರಿಹರದ ಬಸ್‌ಸ್ಟ್ಯಾಂಡ್‌ನಿಂದ ಅವರ ಮನೆಯಿದ್ದ ಯಂತ್ರಾಪುರಕ್ಕೆ ಆಟೋದಲ್ಲಿ ಹೋದೆವು. ಆಟೋ ಯಂತ್ರಾಪುರದಲ್ಲಿ ಕರಿ ಹೆಂಚಿನ ಮನೆ ಮುಂದೆ ನಿಂತಿತು. ಆಟೋ ಶುಲ್ಕ ಪಾವತಿಸುತ್ತಿದ್ದ ಕೃಷ್ಣಪ್ಪನ ಮೇರೆಯಲ್ಲಿ ನಾನು ಆ ಮನೆಯ ಕಡೆಗೆ ದೃಷ್ಟಿ ಹಾಯಿಸಿದೆ. ಅಂಗಳದಲ್ಲಿ ಎರಡು ತೆಂಗಿನಮರ. ರಸ್ತೆಗೆ ಒಂದು ಎತ್ತಿನಗಾಡಿ. ಎರಡು ಕಡೆ ಜಗುಲಿ ಮೇಲೆ ಹತ್ತಾರು ಮಂದಿ ಕುಳಿತು ಪರಸ್ಪರ ಮಾತನಾಡುತ್ತಿದ್ದಾರೆ. ಜಗುಲಿ ಮಧ್ಯದ ಬಾಗಿಲಿಂದ ನಾಲ್ಕಾರು ಮಕ್ಕಳು ಒಳಹೊರಗು ಓಡಾಡುತ್ತಿವೆ. ಸೆರಗು ತಲೆಮೇಲೆ ಹೊದ್ದು ಅಗಲ ಕುಂಕುಮ ಹಚ್ಚಿದ ಚೌಕುಳಿ ಸೀರೆಯ ಎತ್ತರ ನಿಲುವಿನ ಮಹಿಳೆಯೊಬ್ಬಳು ಅದೇ ಬಾಗಿಲಿಂದ ಬಗ್ಗಿ ಹೊರ ಬಂದರು.

ನಾನು ಕೃಷ್ಣಪ್ಪನ ಹಿಂದೆ ಹಿಂದೆ ಹೆಜ್ಜೆಯಿರಿಸಿದ್ದೆ. ಹೊಸಮನೆ, ಹೊಸ ಜನ, ಹೊಸ ಸಂಸ್ಕೃತಿ, ಹೊಸ ಸಂಬಂಧದ ದುಗುಡಗಳು ಮನದಲ್ಲಿ ಭತ್ತ ಕುಟ್ಟುತ್ತಿತ್ತು. ಕೃಷ್ಣಪ್ಪನನ್ನು ಕಂಡ ಆಕೆ "ಕೃಷ್ಣಪ್ಪ ಬಂದ ಹಾಲವ್ವ, ಗಂಗವ್ವ, ಶೇಷಾ, ಬರ್ರೋ" ಎಂದು ಧ್ವನಿ ಏರಿಸಿದರು. ಜಗುಲಿಯಲ್ಲಿದ್ದವರೆಲ್ಲಾ ಒಮ್ಮೆಗೆ ರಸ್ತೆ ಕಡೆ ತಿರುಗಿದರು. ಮನೆ ಮಂದಿಯೆಲ್ಲಾ ಅಂಗಳಕ್ಕೆ ಓಡೋಡಿ ಬಂದರು. ನಾವು ಅಂಗಳಕ್ಕೆ ಬರುತ್ತಿದ್ದಂತೆ ಕೃಷ್ಣಪ್ಪ "ಅವ್ವ ಚನ್ನಾಗಿದ್ಯೇನವ್ವ" ಎಂದರು. "ಚನ್ನಾಗಿದ್ದೀನಿ ಬಾರಪ್ಪ" ಎಂದ ಅವರ ಅವ್ವ ಬಾಗಿಲಲ್ಲೇ ನಮ್ಮನ್ನು ತಡೆದು ನಿಲ್ಲಿಸಿದರು.

ಮನೆಯ ಹೆಣ್ಣುಮಕ್ಕಳು ಮಿರಮಿರ ಮಿಂಚುವ ತಟ್ಟೆಯಲ್ಲಿ ಕೆಂಪಾರತಿ ತಂದು ಹೊಸ್ತಿಲ ಬಳಿ ಆರತಿ ಬೆಳಗಿ ಹಣೆಗೆ ಎಡಗೈಯಿಂದ ತಿಲಕವಿರಿಸಿ ಒಳಗೆ ಬರಮಾಡಿಕೊಂಡರು. 'ಜಗುಲಿ ನೀರು ಮೂರು ರಸ್ತೆ ಕೂಡುವಲ್ಲಿ ಚೆಲ್ಲಿಬಾರವ್ವ' ಎಂದು ಆಕೆ ಹೇಳುತ್ತಿದ್ದಂತೆ ಒಳಗೆ ಹೆಜ್ಜೆ ಇಟ್ಟ ನನಗೆ ಜಂಘಾಬಲವೇ ಉಡುಗಿದಂತಾಯಿತು. ಹಜಾರವೆಂಬ ಜಾಗದಲ್ಲಿ ಒಂದು ದೊಡ್ಡ ಎತ್ತು, ಎರಡು ಹಸು ಕಟ್ಟಿದ್ದರು. ಸಗಣಿ–ಗಂಜಲದ ವಾಸನೆ ಮನೆಯೆಲ್ಲಾ ತುಂಬಿತ್ತು ಎತ್ತರದ ಮಾಡಿನಲ್ಲಿದ್ದ ಒಂದು ಬಲ್ಬ್ ಇಡೀ ಹಜಾರ ಮತ್ತು ಅದರ ಎದುರಿನ ಎರಡು ಚಿಕ್ಕ ಕೋಣೆಗಳನ್ನು ಬೆಳಗಿತ್ತು! ಕೃಷ್ಣಪ್ಪ ಬಂಧು ಬಳಗದವರೊಡನೆ ಮಾತನಾಡುತ್ತಾ ಜಗುಲಿಗೆ ನಡೆದಿದ್ದರು. ಇಡೀ ದಿನ ಕೃಷ್ಣಪ್ಪನವರ ಅಕ್ಕ–ತಂಗಿಯರು ಅವರ ಮಕ್ಕಳು ಅಕ್ಕಪಕ್ಕದ ಮನೆಯವರು ಬಂದು ನನ್ನನ್ನು ನೋಡುವುದು ಮಾತನಾಡಿಸುವುದು ನಡೆದಿತ್ತು.

ಆ ದಿನ ರಾತ್ರಿ ಮೊತ್ತ ಮೊದಲಬಾರಿಗೆ ಆ ಮನೆಯಲ್ಲಿ ಜೋಳದ ರೊಟ್ಟಿ ತಿಂದೆ. ಅದು ನನ್ನ ಜೀವನಪರ್ಯಂತ ಪ್ರಧಾನ ಆಹಾರವಾಗಲು ಅದು ನಾಂದಿಯಾಯಿತು. ಬೆಳಗಾಯಿತು. ದೈನಂದಿನ ಚಟುವಟಿಕೆ ಪ್ರಾರಂಭ. ಮುಖಮಾರ್ಜನವಾಯಿತು. ಬರ್ಹಿದೆಸೆಗೆ ಎಲ್ಲಿಗೆ ಹೋಗುವುದು? ಸ್ನಾನ ಎಲ್ಲಿ ಮಾಡುವುದು? ಎಂಬ ಪ್ರಶ್ನೆಗಳು ನನ್ನನ್ನು ಕಾಡಲಾರಂಭಿಸಿದವು. ಯಾರಲ್ಲೂ ಸಲಿಗೆಗಳಿಲ್ಲದ ನಾನು ಕೃಷ್ಣಪ್ಪನವರನ್ನೇ ಕೇಳುವ ಸ್ಥಿತಿ. ಅವರು ಪಕ್ಕದಲ್ಲೇ ಇದ್ದ ಅವರ ಚಿಕ್ಕಪ್ಪನ ಮನೆಗೆ ಹಿಂಬಾಗಿಲಿನಂದ ಕರೆದುಕೊಂಡು ಹೋಗಿ ಅಲ್ಲಿ ನನ್ನನ್ನು ಪರಿಚಯಿಸಿದರು. ನನ್ನ ಮುಂದಿನ ಕೆಲಸ ಸಲೀಸಾಯಿತು.

ಕೃಷ್ಣಪ್ಪ ತಮ್ಮ ನಿತ್ಯಕರ್ಮಗಳನ್ನು ಅದೆಲ್ಲಿ ಮುಗಿಸಿದರೋ ತಿಳಿಯದು. ನಂತರ ನಾನು ಅಡುಗೆ ಮನೆಗೆ ತೆರಳಿ ಅಲ್ಲಿ ರೊಟ್ಟಿ ಹಿಟ್ಟು ಕಲೆಸುವುದು, ತಟ್ಟುವುದು, ಮತ್ತು ಸುಡುವುದನ್ನು ನೋಡುತ್ತಾ ಕೃಷ್ಣಪ್ಪನವರ ತಮ್ಮನ ಮಕ್ಕಳಾದ ತಿಪ್ಪೇಶ ಮಹಂತೇಶ, ರುದ್ರಮ್ಮ ಹಾಗೂ ತಂಗಿ ಮಕ್ಕಳಾದ ಮೈತ್ರೇಯಿ, ಶಿವು, ಗುರುಸಿದ್ದ ಹಾಗೂ ಇನ್ನೊಬ್ಬ ತಂಗಿ ಮಕ್ಕಳಾದ ಯಶೋಧ, ಮಂಜು, ಆನಂದ ಮತ್ತು ಆರನೇ ತರಗತಿ ಓದುತ್ತಿದ್ದ ತಂಗಿ ರೇಣುಕರೊಂದಿಗೆ ಉಭಯ ಕುಶಲೋಪರಿ ಹಂಚಿಕೊಳ್ಳುತ್ತಾ ಕುಳಿತೆ. ಇದರ ನಡುವೆ ರೊಟ್ಟಿ ತಟ್ಟುವ ದುಸ್ಸಾಸಕ್ಕೂ ಕೈಹಾಕಿದೆ. ಅಂಚೆಲ್ಲಾ ಖಡಕಲಾದ ಬಿರುಕು ಬಿಟ್ಟ ದಪ್ಪವಾದ ಎರಡು ರೊಟ್ಟಿ ತಟ್ಟಲು ಮಾತ್ರ ನನಗೆ ಸಾಧ್ಯವಾಯಿತು. ಇಂಥ ರೊಟ್ಟಿ ಮಾಡಲು ನನಗೆ ಹೇಳಿ ಕೊಡುತ್ತಾ ಅವರೆಲ್ಲಾ ಮುಸಿಮುಸಿ ನಗುತ್ತಿದ್ದರು. ನಾನು ಮಾಡಿದ ರೊಟ್ಟಿ ನನ್ನ ಮುಂದೆ ಹಲ್ಲು ಬಿಟ್ಟುಕೊಂಡು ಆಸ್ಟ್ರೇಲಿಯಾ, ರಷ್ಯಾ, ಭೂಪಟವನ್ನು ನೆನಪಿಸುತ್ತಿದುದನ್ನು ಕಂಡು ನನಗೂ ನಗು ಉಕ್ಕುಕ್ಕಿ ಬಂದಿತ್ತು. ರೊಟ್ಟಿ ಮಾಡುವ ನನ್ನ ಮೊದಲ ಪ್ರಾಕ್ಟಿಕಲ್ ಲೆಸನ್ ಅದಾಗಿತ್ತು. ನಮ್ಮ ಸಮುದಾಯದಲ್ಲಿ ಇಂಥಹ ಜೋಳದ ರೊಟ್ಟಿ ಮಾಡುವ, ಅದೇ ಮುಖ್ಯ ಆಹಾರವಾಗಿರುವ ರೂಢಿಗಳಿಲ್ಲದ ನನಗೆ ರೊಟ್ಟಿ, ಉದಕ, ರಾಗಿ ಮುದ್ದೆ, ಎಣ್ಣೆಗಾಯಿ, ಹುಚ್ಚೆಳ್ಳು ಪುಡಿ, ಶೇಂಗಾ ಪುಡಿ ಹೀಗೆ ಬಲು ರುಚಿಕಟ್ಟಾದ ಈ ಆಹಾರ ಪದ್ಧತಿ ನಮ್ಮ ಇತರೆ ಜನಾಂಗದವರೇಕೆ ರೂಢಿಸಿಕೊಳ್ಳುತ್ತಿಲ್ಲವಲ್ಲ ಎಂದು ಆಶ್ಚರ್ಯವೂ ಆಯಿತು. ಇವುಗಳ ಅರಿವೂ ಇಲ್ಲದೆ ಅಕ್ಕಿಯೇ ಮುಖ್ಯ ಆಹಾರವಾಗಿರುವ ಸಮುದಾಯದವರು ಸಕ್ಕರೆ ಕಾಯಿಲೆ, ಬಿ.ಪಿ., ಕೊಲೆಸ್ಟ್ರಾಲ್ ಬಂದಾಗ ರಾಗಿ–ಜೋಳದ ಮುದ್ದೆಗೆ ಶರಣಾಗುವರಲ್ಲ ಎಂಬ ಯೋಚನೆಯೂ ಸುಳಿಯಿತು.

ಮಧ್ಯಾಹ್ನ ೧೨ ಗಂಟೆ ಸುಮಾರಿಗೆ ಶಿವಚಾರದ ಶರಣಮ್ಮ ಮತ್ತು ಶರಣಪ್ಪ ಬಂದರು. ಲೋಕಾಭಿರಾಮ ಮಾತನಾಡುತ್ತ ಮನೆಯವರಿಗೆಲ್ಲಾ ಆಶೀರ್ವಾದ ಮಾಡಿದರು. ನಮ್ಮ ಮಾವನವರು ಅದಾಗಲೇ ಸ್ನಾನಮಾಡಿ ಊದುಗಡ್ಡಿ ಹಚ್ಚಿ ಮನೆಯ ದಶದಿಕ್ಕುಗಳಿಗೂ ಹಾಗೂ ಸೂರ್ಯನಿಗೂ ಬೆಳಗುತ್ತಿದ್ದರು. ನಮ್ಮ ಅತ್ತೆ ಚೌಡಮ್ಮ ಹಾಗೂ ನಾದಿನಿ ಹಾಲಮ್ಮ ಸ್ನಾನ ಮಾಡಿ ಢಾಳಾಗಿ ವಿಭೂತಿ ಕಟ್ಟು ಹಚ್ಚಿಕೊಂಡು, ಪುಟ್ಟ ದೇವರ ಕೋಣೆಯಲ್ಲಿದ್ದ ನೂರೆಂಟು ದೇವರಿಗೆ ಪೂಜೆ ಮಾಡಿದ್ದರು. ಶರಣರು ಪ್ರಸಾದ, ಚಹಾ ಸೇವನೆ ನಂತರ ನಾನು ಮತ್ತು ಕೃಷ್ಣಪ್ಪನವರೂ ಅವರಿಗೆ ನಮಸ್ಕರಿಸಿದೆವು.

ಮಧ್ಯಾಹ್ನ ಹೋಳಿಗೆ ಊಟ. ಆ ಮನೆಯಲ್ಲಿ ಹೋಳಿಗೆಯನ್ನು ರೊಟ್ಟಿ ಮಾಡುವಷ್ಟೇ ಸುಲಭದಲ್ಲಿ ಮಾಡುತ್ತಿದ್ದುದನ್ನು ನಾನು ಇದುವರೆವಿಗೂ ಕಲಿಯಲಿಕ್ಕಾಗಿಲ್ಲ. ನನಗೆ ಪ್ರಿಯವಾದ ಹೋಳಿಗೆಯನ್ನು ಆ ಕುಟುಂಬದ ಶುಭ ಸಂದರ್ಭ–ಸಮಾರಂಭ; ಹಬ್ಬ–ಹುಣ್ಣಿಮೆಗಳಲ್ಲಿ ಸರ್ವೆ ಸಾಮಾನ್ಯವೆಂಬಂತೆ ಮಾಡುವ ಆ ಮನೆಯೇ ನನ್ನ ತೌರುಮನೆಯಂತಾದುದು ನನ್ನ ಜೀವನದಲ್ಲಾದ ಮಹತ್ತರ ಪರಿವರ್ತನೆ.

ಅದೇ ದಿನ ಸಂಜೆ ಆರತಕ್ಷತೆ ಇಟ್ಕೊಳ್ಳಬೇಕು, ಕೇರಿಯಲ್ಲಿ ಮೆರವಣಿಗೆ ಮಾಡಬೇಕು ಎಂಬ ಮಾತುಕತೆಗಳು ನಡೆಯುತ್ತಿತ್ತು. ಕೃಷ್ಣಪ್ಪ ಇದ್ಯಾವುದಕ್ಕೂ ಬಿಲ್‌ಕುಲ್ ಒಪ್ಪಲೇ ಇಲ್ಲ. ಸಂಜೆ ನನ್ನನ್ನು ಹರಿಹರೇಶ್ವರ ದೇವಸ್ಥಾನ ಹಾಗೂ ಹರಿಹರ ಟೌನ್ ನೋಡಲು ಕರೆದುಕೊಂಡು ಹೋಗಿದ್ದರು.

ಮರುದಿನ ಮಧ್ಯಾಹ್ನ ಹಾಲಮ್ಮ ನನ್ನೊಡನೆ ಅವರ ವೈಯಕ್ತಿಕ ದುಃಖ ದುಮ್ಮಾನಗಳನ್ನು ಹಂಚಿಕೊಳ್ಳತೊಡಗಿದರು. ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿದ್ದು ಎರಡು ಮಕ್ಕಳು ಇನ್ನೂ ಹೆಜ್ಜೆಯಿಡಲು ಕಲಿಯುತ್ತಿರುವಾಗಲೇ ಹೊಟ್ಟೆಯಲ್ಲಿ ಮತ್ತೊಂದು ಉಸಿರು ಹೊತ್ತ ಹೊತ್ತಲ್ಲೇ, ಗಂಡನನ್ನು ಕಳೆದುಕೊಂಡಿದ್ದು, ಅತ್ತೆ ಮನೆಯವರ ನಿರ್ದಯತೆ ಮತ್ತು ಕೆಲಸದ ಹೊರೆಗಳನ್ನು ಕಂಡು ಅಣ್ಣ ತನ್ನನ್ನು ಮಕ್ಕಳೊಂದಿಗೆ ತೌರುಮನೆಗೆ ಕರೆತಂದು, ತನ್ನ ಬಾಳಿಗೊಂದು ದಾರಿ ಮಾಡಿದ್ದನು ಜ್ಞಾಪಿಸಿಕೊಂಡು ಕಣ್ಣೀರುಗರೆದರು. "ನೀವು ಮಗಳು ಮೈತ್ರೇಯಿಯೊಂದಿಗೆ ಭದ್ರಾವತಿಯಲ್ಲಿ ಸ್ವಲ್ಪದಿನ ಕೃಷ್ಣಪ್ಪನವರೊಂದಿಗೆ ಇದ್ದಿರಲ್ಲಾ, ನಾನೊಮ್ಮೆ ಆಗ ಆ ಮನೆಗೆ ಬಂದಾಗ ನಿಮ್ಮನ್ನು ಮಾತನಾಡಿಸಿದೆನಲ್ಲಾ" ಎಂದು ದುಃಖದ ಮಾತುಗಳನ್ನು ಮರೆಸಲು ಹಳೆಯ ನೆನಪೊಂದನ್ನು ಬಿಚ್ಚಿಟ್ಟೆ.

ಆಗ ಹಾಲಮ್ಮ ಆ ದಿನದ ನೆನಪಿನ ಬುತ್ತಿ ಬಿಚ್ಚಿಟ್ಟರು: "ಅತ್ತೆ ನೀವು ಗಣಪತಿ ಹಬ್ಬದ ಮರುದಿನ ಬಂದಿದ್ರಿ . ಹಬ್ಬದ ಸಿಹಿತಿಂಡಿಗಳನ್ನು ತಂದಿದ್ರಿ. ಕೃಷ್ಣಪ್ಪ ಇರಲಿಲ್ಲ ನನಗೆ ಅವುಗಳನ್ನು ಕೊಟ್ಟು, ಮೈತ್ರಾ ಆಗಿನ್ನೂ ಸಣ್ಣಬಾಲೆ. ಅವಳನ್ನು ಮಾತನಾಡಿಸಿ ಹೊರಟೆಬಿಟ್ರಿ. ಆದ್ರೆ ಅಣ್ಣ ಬಂದು ಊಟವಾದ ನಂತರ ನೀವು ಬಂದಿದ್ದ ವಿಷಯ ತಿಳಿಸಿದೆ. ಒಮ್ಮೆಲೆ ಆತ 'ಮೊದಲೇ ಏಕೆ ಹೇಳಲಿಲ್ಲ?' ಎಂದು ರೇಗಿದ. ನೀವು ತಂದ ತಿಂಡಿಗಳನ್ನು ಕೊಟ್ಟ ಕ್ಷಣ ಕೊಠಡಿಯೊಳಗೆ ತೆಗೆದುಕೊಂಡು ಹೋಗಿ ತಾನು ತಿಂದು, ನಮಗೂ ಕೊಟ್ಟ. ನೀವು ನಮ್ಮೊಡನೆ ಮಾತನಾಡಿದ್ದು, ನನ್ನ ಮಗಳನ್ನು ಮುದ್ದಿಸಿದ್ದು ಎಲ್ಲಾ ಹೇಳಿದೆ. ಬಹಳ ಕುತೂಹಲದಿಂದ ಕೇಳಿದ. ಇದನ್ನು ಕಂಡು ನಮ್ಮಣ್ಣ ನಿಮ್ಮನ್ನು ಇಷ್ಟಪಡುತ್ತಿದ್ದಾನೆಂದು ಆಗಲೇ ತಿಳಿಯಿತು. ಆದರೆ ಅದರ ಬಗ್ಗೆ ವಿಚಾರಿಸುವ ಧೈರ್ಯ ನನಗಿರಲಿಲ್ಲ"

ಅವಳು ಮಾತು ಮುಂದುವರೆಸಿ ಆ ದಿನದ ಚಿತ್ರವನ್ನು ಕಟ್ಟಿಕೊಟ್ಟದ್ದು ಹೀಗೆ: "ನಮ್ಮ ಮನೆಯಲ್ಲಿ ಅವನೆದುರು ನಿಂತು ಮಾತನಾಡುವಷ್ಟು ಧೈರ್ಯ ಯಾರಿಗೂ ಇಲ್ಲ. ಏಕೆಂದ್ರೆ ಆತ ಸತ್ಯ, ನ್ಯಾಯದ ದಾರಿಯಲ್ಲಿ ನಡೆವಾತ, ಸುಳ್ಳು, ಕಪಟ, ವಂಚನೆ, ಕಂಡ ಕ್ಷಣ ಕೋಪದಿಂದ ಉರಿಯುತ್ತಿದ್ದ. ನನ್ನ ಮಗಳು ಅವನ ತೊಡೆ ಮೇಲೆ ಕೂತು, 'ಮಾಮ ಮಾಮ ಅವರು ತುಂಬಾ ಬೆಳ್ಳಗಿದ್ರು. ಉದ್ದ ಜಡೆ ಇತ್ತು. ಅವರು ಹಿಂಗ್ ನಡಕೊಂಡು ಹೋದ್ರು' ಅಂತ ನೀವು ನಡೆದು ಹೋದ ರೀತಿಯನ್ನು ತೋರಿಸುತಾ ್ತಹೇಳುತ್ತಿದ್ದರೆ ಅಣ್ಣನ ಮುಖ ಮೊರದಗಲ ಅರಳಿತ್ತು! ಸಿಟ್ಟು ಇಳಿದಿತ್ತು ನಮ್ಮ ಅಣ್ಣ ಮದುವೇನೇ ಆಗಲ್ಲ ಅಂತ ನಾವೆಲ್ಲ ಬೇಜಾರು ಮಾಡಿಕೊಂಡಿದ್ದ ಸಂದರ್ಭದಲ್ಲಿ ನಿಮ್ಮನ್ನು ನೋಡಿದಾಕ್ಷಣ ಇಂಥ ಹುಡುಗಿ ನಮ್ಮಣ್ಣನ್ನ ಮದುವೆಯಾದ್ರೆ ನಮ್ಮ ಮನೆ ತುಂಬಿದಂಗಾಗುತ್ತೆ ಅಂತ ನಾನು ಅಂದ್ಕೊಂಡೆ" ವಿವಾಹಪೂರ್ವದ ಈ ಒಂದು ಘಟನೆಯ ನೆನಪು ಕೃಷ್ಣಪ್ಪ ನನ್ನನ್ನು ಎಷ್ಟು ಹಚ್ಚಿಕೊಂಡಿದ್ದರು ಎಂಬುದನ್ನು ತಿಳಿದು ಮನಸ್ಸು ಆರ್ದ್ರಗೊಂಡಿತ್ತು.

**(ಮುಂದುವರೆಯುವುದು)**

---

## ಇದು ಭಾರತ! ಇದು ಭಾರತ!!

೧೯೯೧ರಲ್ಲಿ ಪಿ.ವಿ. ನರಸಿಂಹರಾವ್ ಮತ್ತು ಮನಮೋಹನ ಸಿಂಗ್ ಜೋಡಿ ಅರಂಭಿಸಿದ ಆರ್ಥಿಕ ಪುನಾರಚನೆ ೨೦ ವರ್ಷಗಳ ನಂತರ ಮಾಡಿರುವ ಒಂದು ದೊಡ್ಡ ಸಾಧನೆಯೆಂದರೆ, ಜಗತ್ತಿನ ಶತ ಕೋಟ್ಯಾಧಿಪತಿಗಳ ಸಂಖ್ಯೆಯಲ್ಲಿ ಭಾರತದ ಪಾಲನ್ನು ಗಮನಾರ್ಹವಾಗಿ ಏರಿಸಿರುವುದು! ಫೋರ್ಬ್ಸ್ ಸಂಸ್ಥೆಯ ಅಂಕಿ ಅಂಶಗಳು ಹೀಗಿವೆ:

೨೦೧೨ರಲ್ಲಿ ಜಗತ್ತಿನಲ್ಲಿ ೧೧೫೩ ಜನ ಶತಕೋಟ್ಯಾಧಿಪತಿಗಳಿದ್ದು, ಈ ಪೈಕಿ ೪೮ ಜನ ಭಾರತೀಯರು. ಅಂದರೆ ಶೇ.೪ರಷ್ಟು. ೧೯೯೬ರಲ್ಲಿ ಈ ಪಾಲು ಶೇ.೧ರಷ್ಟಿದ್ದದ್ದು ೨೦೦೮ರ ಹೊತ್ತಿಗೆ ಶೇ.೨೨ಕ್ಕೆ ಏರಿತ್ತು!

ಇನ್ನು ದೇಶದ ಒಟ್ಟು ಉತ್ಪನ್ನದಲ್ಲಿನ ಈ ಶತಕೋಟ್ಯಾಧಿಪತಿಗಳ ಪಾಲನ್ನು ಗಮನಿಸಿದರೆ, ನಮ್ಮ ದೇಶದ ಒಟ್ಟು ಉತ್ಪನ್ನದ ಶೇ ೧೦ರಷ್ಟು ಈ ೪೮ ಜನರ ಬಳಿ ಇದೆ. ಇದು ಅಮೆರಿಕಾ ಮತ್ತು ಮೆಕ್ಸಿಕೋಗಳ ಪಾಲಿನಷ್ಟೇ ಆಗಿದೆ. ಆದರೆ ಚೀನಾ, ಬ್ರೆಜಿಲ್ ಮುಂತಾದ ಭಾರತಕ್ಕಿಂತ ಬಹುವೇಗದ ದರದಲ್ಲಿ ಬೆಳೆಯುತ್ತಿರುವ ದೇಶಗಳಲ್ಲಿನ ಅಂಕಿಸಂಖ್ಯೆಗೆ ಹೋಲಿಸಿದರೆ ನಮ್ಮ ದೇಶದ ಈ ಪಾಲು ಅವುಗಳ ದುಪ್ಪಟ್ಟಿನಷ್ಟಿದೆ. ಅಂದರೆ ಭಾರತದಲ್ಲಿ ಸಮಾನತೆಯ ಸೂಚ್ಯಂಕ ಅತ್ಯಂತ ಅಸಮಾನತೆಯ ದೇಶಗಳೆನಿಸಿದ ಅಮೆರಿಕಾ ಮತ್ತು ಮೆಕ್ಸಿಕೋಗಳ ಸೂಚ್ಯಂಕಕ್ಕೆ ಸಮನಾಗಿದ್ದು, ಭಾರತದಲ್ಲಿ ಚೀನಾ ಮತ್ತು ಬ್ರೆಜಿಲ್ ದೇಶಗಳಿಗೆ ಹೋಲಿಸಿದರೆ ಅಲ್ಲಿನ ಎರಡರಷ್ಟು ಅಸಮಾನತೆ ಇದೆ.

ಭಾರತ, ಅಮೆರಿಕಾ ಆಗುತ್ತಿರುವುದು ಹೀಗೆ!

ಇನ್ನು ಆರ್ಥಿಕ ಉದಾರೀಕರಣದ ತಜ್ಞರೆನಿಸಿದ ಮನಮೋಹನಸಿಂಗ್ ಪ್ರಧಾನಿಯಾಗಿ ರಾಷ್ಟ್ರದ ಚುಕ್ಕಾಣಿ ಹಿಡಿದ ೨೦೦೪–೦೫ರಿಂದೀಚೆಗಿನ ಈ ಕೆಳಗಿನ ಅಂಕಿ ಅಂಶಗಳು ಗಮನಿಸುವಂತಿವೆ:

ಆಗ ಸಾಲ ೮೦, ೩೫೦ ಕೋಟಿ ರೂಪಾಯಿಗಳಷ್ಟಿದ್ದದು ಈಗ ೫.೭೯ ಲಕ್ಷ ಕೋಟಿ ರೂಪಾಯಿಗಳನ್ನು ತಲುಪಿದೆ. ಸಾರ್ವಜನಿಕ ವಲಯದ ಋಣಭಾರ ೧೪ ಲಕ್ಷ ಕೋಟಿ ರೂಪಾಯಿಗಳಿದ್ದುದು ಈಗ ೭೯ ಲಕ್ಷ ಕೋಟಿ ರೂಪಾಯಿಗಳನ್ನು ಮುಟ್ಟಿದೆ. ಸಹಾಯಧನ ೪೫ ಸಾವಿರ ಕೋಟಿ ರೂಪಾಯಿಗಳಿದ್ದುದು ಈಗ ೨.೫ ಲಕ್ಷ ಕೋಟಿ ರೂಪಾಯಿಗಳನ್ನು ಮುಟ್ಟಿದೆ. ಮುಂಗಡ ಪತ್ರದಲ್ಲಿನ ಆದಾಯ ಕೊರತೆ ೭೫ ಸಾವಿರ ಕೋಟಿ ರೂಪಾಯಿಗಳಿದ್ದುದು ಈಗ ೪.೪೬ ಲಕ್ಷ ಕೋಟಿ ರೂಪಾಯಿಗಳನ್ನು ಮುಟ್ಟಿದೆ. ಈಗ ಸರ್ಕಾರ ಖರ್ಚು ಮಾಡುವ ಪ್ರತಿಯೊಂದು ರೂಪಾಯಿಯ ೮೬ ಪೈಸೆ ಸರ್ಕಾರ ನಡೆಸಲೆಂದೇ ಖರ್ಚಾಗುತ್ತಿದೆ. ಶಾಶ್ವತ ರಾಷ್ಟ್ರೀಯ ಆಸ್ತಿ ನಿರ್ಮಾಣ ಬಾಬ್ತಿಗೆ ಹೋಗುತ್ತಿರುವುದು ೧೩ ಪೈಸೆ ಮಾತ್ರ

ಇದೆಲ್ಲದರ ಪರಿಣಾಮವೆಂದರೆ ವಾರ್ಷಿಕ ಬೆಳವಣಿಗೆಯ ದರ ಇವರೇ ಈ ಹಿಂದೆ 'ಸಮಾಜವಾದಿ ಬೆಳವಣಿಗೆ ದರ' ಎಂದು ಹಂಗಿಸುತ್ತಿದ್ದ ಅಂಕಿಯ ಹತ್ತಿರಕ್ಕೇ ಬಂದು ಮುಟ್ಟಿದೆ–ಶೇ.೫ಕ್ಕೂ ಕೆಳಗೆ!

**(ಮೂಲ:ಇಂಡಿಯನ್ ಎಕ್ಸ್‌ಪ್ರೆಸ್: ೨೪.೨.೩೦೧೩)**

### ಒಂದು ನ್ಯಾಯಂಗ ದಾಖಲೆ:


ಉತ್ತರ ಪ್ರದೇಶದ ರಾಜಾಕಾ ಗಾಂವ್‌ನ ಯೋಗಿನಿ ದೇವಿ ಎಂಬ ಮಹಿಳೆ ೧೯೩೬ರಲ್ಲಿ ಲಕ್ಕನ್ ಸಿಂಗ್ ಹಾಗೂ ಅವರ ಸಹಚರರ ಮೇಲೆ ಭೂವಿವಾದವೊಂದರ ಸಂಬಂಧವಾಗಿ ಹೂಡಿದ್ದ ಮೊಕದ್ದಮೆಯ ಬಗ್ಗೆ ಬಲ್ಲಿಯಾದ ಸಿವಿಲ್ ನ್ಯಾಯಲಯ ೭೬ ವರ್ಷಗಳ ನಂತರ ಈಗ ಯೋಗಿನಿ ದೇವಿ ಪರವಾಗಿ ತೀರ್ಪು ನೀಡಿದೆ. ಆದರೆ ಈಗ ಯೋಗಿನಿ ದೇವಿಯಾಗಲೀ ಅಥವಾ ಲಕ್ಕನ್ ಸಿಂಗ್ ಆಗಲೀ ಬದುಕಿಲ್ಲ ಎಂದು ೨೪.೨.೨೦೧೩ರ 'ವಿಜಯ ಕರ್ನಾಟಕ' ಪತ್ರಿಕೆ ವರದಿ ಮಾಡಿದೆ.

### ನಿಮ್ಮ ಮನರಂಜನೆಗಾಗಿ:

'ಮೂರು ತಿಂಗಳಲ್ಲಿ ಶೇ.೧೦೦ ಕನ್ನಡೀಕರಣವಾಗದಿದ್ದಲ್ಲಿ ಕಠಿಣ ಕ್ರಮ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು.'

**(ಒಂದು ಪತ್ರಿಕಾ ವರದಿಯ ಶೀರ್ಷಿಕೆ)**

# ನಮ್ಮ ಸಮಾಜವಾದಿಗಳು | ಮೊರಬದ ಮುತ್ತು ರಾಚಪ್ಪ ಬೆಟಸೂರ



**ರಾ**ಚಪ್ಪ ಬೆಟಸೂರು ಬಗ್ಗೆ ಬರೆಯುವ ಸಂಬಂಧವಾಗಿ ಅವರೂರಾದ ಮೊರಬಕ್ಕೆ ಹೋಗಿ ಬರೋಣವೆಂದು ಹೇಳಿದಾಗಿನಿಂದ ಹಿರಿಯರಾದ ಬಡೇಮಿಯಾ ಒಂದೇ ಸಮನೆ ದೂರವಾಣಿ ಮಾಡುತ್ತಿದ್ದರು. ೬೩ ವರ್ಷಗಳ ಇಳಿ ವಯಸ್ಸಿನ ಬಡೇಮಿಯಾರಿಗೆ ತನ್ನ ಅಣ್ಣ ರಾಚಪ್ಪಣ್ಣ ಅಂದರೆ ಪಂಚ ಪ್ರಾಣ. ಒಬ್ಬ ಮುಸ್ಲಿಂ ಒಬ್ಬ ಲಿಂಗಾಯತನನ್ನು ಅಣ್ಣತಮ್ಮ ಎಂಬ ಭಾವುಕ ಶಬ್ದಗಳಲ್ಲಿ ಬಂಧಿಸಿದ್ದು ಹಳ್ಳಿಯ ಭ್ರಾತೃತ್ವದ ಬೇರಾಗಿದ್ದರೂ, ಅದಕ್ಕೆ ನೀರೆರೆದು ಪೋಷಿಸಿದ್ದು ಸಮಾಜವಾದಿ ಚಳುವಳಿ. ರಾಚಪ್ಪಣ್ಣ ಬಡೇಮಿಯಾರನ್ನು ಕೊನೆವರೆಗೂ ತಮ್ಮನಂತೆ ನೆಡೆಸಿಕೊಂಡು ಅವರು ಕಾರ್ಯದರ್ಶಿಯಾಗಿದ್ದ ವನಿತಾ ಸೇವಾ ಸಮಾಜದ ಪ್ರಾಥಮಿಕ ಶಾಲೆಯಲ್ಲಿ ನೌಕರಿ ಕೊಡಿಸಿ ಅವರ ಜೀವನೋಪಾಯಕ್ಕೆ ಕಾರಣರಾದರು.

ಮೋರಬ ಬಂದಿತು. ಒಂದು ಮಣ್ಣಿನ ಮನೆಯ ಮುಂದೆ ಬಂದು ನಿಂತಿದ್ದೆವು. ಅದೇ ರಾಚಪ್ಪ ಬೆಟಸೂರರ ಮನೆ. ಒಳಗಿನಿಂದ ಬಂದ ರಾಚಪ್ಪ ಅವರ ಮಕ್ಕಳಾದ ಹೊಳೆ ಬಸವ ಮತ್ತು ಸಂಗಪ್ಪ ಬಡೇಮಿಯಾರನ್ನು ನೋಡಿ ಸಂತೋಷಗೊಂಡು ನಮ್ಮನ್ನು ಒಳ ಕರದೊಯ್ದರು. ಕುಸಿದು ಬೀಳುವಂತಿದ್ದ ಆ ಮನೆ ನಿಜವಾದ ಸಮಾಜವಾದಿಗಳ ಇತಿಹಾಸವನ್ನು ಸಾರಿ ಸಾರಿ ಹೇಳುತ್ತಲಿದ್ದವು. ಮನೆಯ ಮುಂದೆ ಮುದುಕರು ಮಧ್ಯ ವಯಸ್ಕರು ರಾಚಪ್ಪಣ್ಣನ ಸಲುವಾಗಿ ಯಾರೋ ಬಂದಿದ್ದಾರೆಂದು ಇಣುಕಿ ನೋಡುತ್ತಿದ್ದರು. ಕರ್ಮಠ ಲಿಂಗಾಯತರ ಊರಿನಲ್ಲಿ ಒಂದು ಜಾತ್ಯಾತೀತ ವಲಯವನ್ನು ಸ್ಥಾಪಿಸಿದ ರಾಚಪ್ಪಣ್ಣನನ್ನು ನೆನೆದು ಕಣ್ಣು ತೇವಗೊಂಡವು.

ಕರ್ನಾಟಕದ ಸಮಾಜವಾದಿ ಚಳುವಳಿಯು ಮಾಡಿದ ಪರಿಣಾಮ ಬಡವರ ದೀನ ದಲಿತರ ಮನೆ ಮನಗಳಲ್ಲಿ ಭವಿಷ್ಯದ ಬಗ್ಗೆ ಭರವಸೆಗಳನ್ನು ಮೂಡಿಸಿದ್ದವು. ಆ ಹಿನ್ನಲೆಯಲ್ಲಿ ಕರ್ನಾಟಕದ ಸಮಾಜವಾದಿ ಚಳುವಳಿಯು ಮೂಸೆಯಿಂದ ಅನೇಕರು ಪುಟವಿಟ್ಟುಕೊಂಡು ಹೊರಬಂದರು. ಕೆಲವರು ಸಾಯುವವರಿಗೂ ಸಮಾಜವಾದಿಗಳಾಗಿಯೇ ಬದುಕಿದರು. ಕೆಲವರು ಸಮಾಜವಾದ ಸಿದ್ಧಾಂತವನ್ನು ವಯಕ್ತಿಕ ಪ್ರಗತಿಗಾಗಿ ಬಳಸಿಕೊಂಡರು. ಅಂತಹವರಲ್ಲಿ ಮೊದಲನೆ ವರ್ಗಕ್ಕೆ ಸೇರಿದವರು ರಾಚಪ್ಪ ಬೆಟಸೂರು.

ಇವರು ಓದಿದ್ದು ಏಳನೇ ತರಗತಿಯವರಿಗೆ. ನಂತರ ತಂದೆಯ ಸ್ಫೂರ್ತಿಯಲ್ಲಿ ಸ್ವಾತಂತ್ರ್ಯ ಹೋರಾಟದ ಬದುಕು. ಆದರೆ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡುವ ಮಾಸಾಶನಗಳಿಂದ ರಾಚಪ್ಪಣ್ಣ ದೂರ ಉಳಿದ್ದಷ್ಟೇ ಅಲ್ಲ, ಅದನ್ನು ತೆಗೆದುಕೊಂಡವರ ವಿರುದ್ಧ ಸಮರವನ್ನೇ ಸಾರಿದರು. ಮಾರ್ಕ್ಸ್, ಲೋಹಿಯಾ, ನಿರಂಜನ, ಕುವೆಂಪು ಅವರನ್ನು ಓದುತ್ತಲೇ ಬೆಳೆದ ರಾಚಪ್ಪವನರ ಮೊದಲ ಗುರು ಅವರ ತಂದೆ ಗುರುಪಾದಪ್ಪನವರು. ಆಗಿನ ಕಾಲದಲ್ಲಿ ಹನ್ನೆರಡನೇ ಇಯತ್ತೆ ಓದಿದ್ದ ಇವರು ಪ್ರಖರ ಮಾರ್ಕ್ಸವಾದಿಗಳಾಗಿದ್ದರು. ಮುಂದೆ ಅಬ್ಬಿಗೇರಿ ವಿರುಪಾಕ್ಷಪ್ಪ ಅಂದಾನಪ್ಪ ದೊಡ್ಡಮೇಟಿ ಹಾಗು ಈ ಭಾಗದ ಸಮಾಜವಾದಿ ಶಾಸಕರಾಗಿದ್ದ ನೀಲಗಂಗಯ್ಯ ಪೂಜಾರ್ ಅವರಿಂದ ಸಮಾಜವಾದಿ ಕುಟುಂಬಕ್ಕೆ ಸೇರಿದ ರಾಚಪ್ಪ ಮೋರಬ್‌ನ್ನು ಒಂದು ಸಮಾಜವಾದಿ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದರು. ಅಬ್ಬಿಗೇರಿ ವಿರುಪಾಕ್ಷಪ್ಪ ಅವರ ಜೊತೆ ಸೇರಿ ಲೋಹಿಯಾರನ್ನು ಎತ್ತಿನ ಬಂಡಿಯಲ್ಲಿ ಕೂಡ್ರಿಸಿಕೊಂಡು ಊರೂರು ತಿರುಗಿ ರೈತರು, ಬಡವರನ್ನು ಸಂಘಟಿಸಿದರು. ಅಷ್ಟೆ ಅಲ್ಲ, ಕಾಗೋಡು ಸಯ್ಯಾಗ್ರಹದ ತದನಂತರದಲ್ಲೇ ಅದೇ ಮಾದರಿಯ ಒಂದು ಹೋರಾಟವನ್ನು ಹೆಬ್ಬಳ್ಳಿ ಗೇಣಿದಾರರ ಪರವಾಗಿ ಸಂಘಟಿಸಿದರು. ಇದರಿಂದ ಇವರ ಕುಟುಂಬಕ್ಕೆ ಜೋಳದ ಹಿಟ್ಟಿನಲ್ಲಿ ವಿಷಪ್ರಾಶನ ಮಾಡಲಾಯಿತು. ಆದರೆ ಅದರಿಂದ ಚೇತರಿಸಿಕೊಂಡ ರಾಚಪ್ಪಣ್ಣನ ಕುಟುಂಬ ೩೦೦೦ ಎಕರೆ ಭೂಮಿ ಬಡವರಿಗೆ ದಲಿತರಿಗೆ ದಕ್ಕಿದ್ದನ್ನು ಕಂಡಿ ಕೃತಾರ್ಥ ಭಾವ ಅನುಭವಿಸಿತು. ಇದರ ಯಶಸ್ಸಿನ ಸ್ಫೂರ್ತಿಯಿಂದಾಗಿ ರಾಜ್ಯದಲ್ಲಿನ ಮುಂದಿನ ಬಹುತೇಕ ರೈತ ಚಳುವಳಿಯ ಯೋಜನೆ ಕಾರ್ಯಕ್ರಮ. ಅನುಷ್ಠಾನದ ರೂಪರೇಶಗಳಿಗೆ ಮೋರಬ್ ಎಂಬ ನೆಲ ತಳಹದಿಯಾಯಿತು. ಇದರ ಫಲವಾಗಿ ಕೃಪಲಾನಿಯವರಂತಹ ಹಿರಿಯರಿಂದ ಹಿಡಿದು ಜಾರ್ಜ್ ಫರ್ನಾಂಡಿಸ್, ಗೋಪಾಲಗೌಡರಾದಿಯಾಗಿ ಇಲ್ಲಿಗೆ ಬಂದು ಹೋಗುವಂತೆ ಆಯಿತು.

ರಾಚಪ್ಪಣ್ಣನವರು ೭೭–೭೮–೭೯ ಈ ಮೂರು ವರ್ಷ ರೈತ ಚಳುವಳಿಗೆ ಪೂರಕವಾಗಿ ನರಗುಂದ ನವಲಗುಂದದ ಭೂಮಿಯನ್ನು ಹದಗೊಳಿಸಿದರು. ೧೯೮೦ರ ನರಗುಂದ ರೈತ ಚಳುವಳಿಯ ಮುಂದಿನ ಎಲ್ಲ ಯೋಜನೆಯ ಬೀಜ ಮೊಳೆತದ್ದು ಮೋರಬ್‌ದಲ್ಲೆ. ನರಗುಂದ ರೈತ ಬಂಡಾಯದಲ್ಲಿ ಭೂಗತರಾಗಿದ್ದುಕೊಂಡೆ ಇದ್ದ ರಾಚಪ್ಪಣ್ಣ ಬಂಡಾಯದ ನಂತರದ ಕಾಲ ಘಟ್ಟದಲ್ಲಿ ಚಳುವಳಿಯಲ್ಲಿ ಸಕ್ರಿಯರಾದರು. 'ಬೆಂಡಿಕಾಯಿ ಬೆಳೆದ ನಿನಗೆ ತಿನ್ನಾಕಿಲ್ಲೊ! ಗೆಂಡೆ ಮೆಣಸಿನಕಾಯಿ ಬೆಳೆದ ಶೂರ, ನಿನ್ ಕಣ್ಣಾಗ ಬಿತ್ತೊ ಖಾರ!' ಎಂದು ಊರೂರು ತಿರುಗುತ್ತ ರೈತರನ್ನು ಎಚ್ಚರಿಸುವ ಕೆಲಸದಲ್ಲಿ ನಿರತರಾದರು.

ಇವರು ಮುಂದೆ ನೀಲಗಂಗಯ್ಯ, ರಾಚಪ್ಪ ಹಡಪದ, ಗಂಗಾಧರ ಪದಕಿ, ನಾಗರಾಜ ಗುರಿಕಾರ ಮುಂತಾದ ಸಮಾಜವಾದಿ ಸಾಥಿಗಳೊಂದಿಗೆ ಸಂಘಟಿಸಿದ ನಿವೇಶನರಹಿತ ಬಡವರ ಹೋರಾಟದ ಪರಿಣಾಮವಾಗಿ ಹುಬ್ಬಳ್ಳಿ ಧಾರವಾಡದ ಮಧ್ಯ ರಾಮಮನೋಹರ ಲೋಹಿಯಾ ನಗರ ಹುಟ್ಟಿಕೊಂಡಿತು. ಆದರೆ ಈ ಎಲ್ಲ ಹೋರಾಟಗಳ ಪರಿಣಾಮವಾಗಿ ಆಗರ್ಭ ಶ್ರೀಮಂತಿಕೆಯ ಇವರ ಮನೆತನದ ಆರ್ಥಿಕ ಸೌಧ ಕುಸಿಯುತ್ತಲೇ ಇತ್ತು. ಸಮಾಜವಾದಿ ಚಳುವಳಿ ಮನೆಯಲ್ಲಿನ ಬಂಗಾರವನ್ನು, ಹೊಲವನ್ನು ನುಂಗಿ ಹಾಕಿತ್ತು. ಅವರಪ್ಪನ ಕಾಲದಲ್ಲಿದ್ದ ಸುಮಾರು ನೂರು ತೊಲೆ ಚಿನ್ನವೆಲ್ಲವನ್ನೂ ಅದು ಕರಗಿಸಿ ಹಾಕಿತ್ತು. ಮುಂದೆ ಇವರ ಪ್ರಸ್ತುತ ಆರ್ಥಿಕ ಪರಿಸ್ಥಿತಿ ಅರಿವಿದ್ದ ಹಳೆಯ ಸಮಾಜವಾದಿ ಒಡನಾಡಿ ಬಂಗಾರಪ್ಪ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಇವರನ್ನು ಬೆಂಗಳೂರಿಗೆ ಕರೆಯಿಸಿ ಯಾವದಾದರು ನಿಗಮ ಮಂಡಳಿಯಲ್ಲಿ ಅಧಿಕಾರ ಸ್ಥಾನ ಕೊಡಮಾಡಬೇಕೆಂದು ಎರಡು ದಿನ ಬೆಂಗಳೂರಲ್ಲೇ ಇರಲು ಕೇಳಿಕೊಂಡರು. ಆದರೆ 'ನಡೀಲೇ ಬಡೆಮಿಯಾ ಸಮಾಜವಾದದ ಕುಲ ಕೆಡಸಬೇಕಂತ ಮಾಡ್ಯಾರ ಇವರು...' ಎಂದು ಸಿಟ್ಟಾದ ಬೆಟ್ಸೂರ ರಾತ್ರೋರಾತ್ರಿ ಬಸ್ ಹತ್ತಿ ಧಾರವಾಡ ತಲುಪಿದ್ದರು. ಹಡಪದ ರಾಚಪ್ಪಣ್ಣನ ಧಾರವಾಡದ ಸಮತಾ ಕಟಿಂಗ್ ಸಲೂನ್ ಮತ್ತು ಬೆಟ್ಸೂರ ರಾಚಪ್ಪಣ್ಣನ ಮೊರಬದ ಮನೆ ಆ ಕಾಲದ ಅನೇಕ ಹಿರಿ–ಕಿರಿಯ ಸಮಾಜವಾದಿಗಳಿಗೆ ಅನುಭವ ಮಂಟಪವೇ ಆಗಿದ್ದವು.


ಮಗ ಹೊಳೆಬಸಪ್ಪ ಗದ್ಗಿದಿತನಾದ. 'ಅಪ್ಪ ಸಾಯುವ ರಾತ್ರಿ ಒಂದು ಮಾತು ಹೇಳಿದ ಸರ್. ಸಮಾಜವಾದ ಅಂದ್ರೆ ತ್ಯಾಗ. ತ್ಯಾಗ ಅಂದ್ರ ಸಮಾಜವಾದ ಕಣಲೇ... ನಾನು ನಿಮಗ ಏನು ಮಾಡಲಿಲ್ಲ ಅಂತ ತಿಳ್ಕೊಬೇಡ್ರಲೇ... ನಾನು ಸಮಾಜವಾದಕ್ಕಾಗಿ ಇಲ್ಲಿಗೆ ಬಂದಿದ್ದೆ, ಈಗ ಸಮಾಜವಾದದ ಜೊತ್ಯಾಗೇ ನಿರ್ಗಮಿಸ್ತೀನಿ... ಅಂತ ಕಣ್ಣಿರು ಹಾಕಿ ಮಲಗಿಕೊಂಡರು. ಅಂದು ಜನವರಿ ೧, ೧೯೯೫. ಮುಂಜಾನೆ ಅವರ ೬೦ ನೇ ಹುಟ್ಟು ಹಬ್ಬ ಮಾಡಬೇಕು ಅಂತ ಮಾಡಿದ್ವಿ ಸರ್ ಆದರೆ ಅಂದೆ ಶಾಶ್ವತವಾಗಿ ಕಣ್ಮುಚ್ಚಿದರು' ಎಂದು ಕಣ್ಣೀರು ಒರೆಸಿಕೊಂಡ.

**–ಮಹಂತೇಶ್ ನವಲಕಲ್**

# ಅಂದಹಾಗೆ: ಕಿಡಿಗೇಡಿಯೊಬ್ಬನ ಕಾಲಹರಣದ ಟಿಪ್ಪಣಿಗಳು




ಮುಳುಗುವ ಹಡಗಿನಿಂದ ಹಾರುವ ಹೆಗ್ಗಣಗಳಂತೆ ತಮ್ಮ ಶಾಸಕರು ಮತ್ತು ಮಂತ್ರಿಗಳು ಪಕ್ಷ ಬಿಡುತ್ತಿರುವುದನ್ನು ಕಂಡು ಹೌಹಾರಿರುವ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನವರು ಇವರನ್ನು ತಮ್ಮ ಪಕ್ಷದಲ್ಲಿ ಹಸಿದ ನಾಯಿಗಳೆಂದು ದಯೆ ತೋರಿ ಭರ್ಜರಿ ಕೂಳು ಹಾಕಿ ಸಾಕಿದ್ದೇ ತಪ್ಪಾಯಿತು ಎಂದು ಶಿವಮೊಗ್ಗಾದಲ್ಲಿ ಬಹಿರಂಗವಾಗಿ ಕೈಕೈ ಹಿಸುಕಿಕೊಳ್ಳುತ್ತಿರುವಾಗ ಸಮಯ ಸಂದರ್ಭ ತಿಳಿಯದ ಅವರ ಹೆಡ್ಡ ಅಭಿಮಾನಿ ಹೆಗ್ಗಣವೊಂದು ಬಂದು ತಮಗೆ ಆಪತ್ಕಾಲಕ್ಕೆ ಇರಲೆಂದು ರಾಜಸ್ಥಾನದ ಬಯಲಿನಲ್ಲಿ ಒಂದು ದೊಡ್ಡ ಬಿಲ ತೋಡಿಸಿರುವುದಾಗಿ ಇಷ್ಟಗಲ ಬಾಯಿ ಅಗಲಿಸಿ ಹೇಳಿದೊಡನೆ ಅವತರಿಸಿದ ತಮ್ಮ ಯಜಮಾನರ ಮಹಿಶಾಸುರ ವೇಷದ ಪ್ರಭೆಯನ್ನು ತಾಳಲಾರದೆ ಅಲ್ಲಿಂದ ಓಡಿ ಸವಳಂಗ ರಸ್ತೆಯಲ್ಲಿನ ತನ್ನ ಸಣ್ಣ ಬಿಲವೊಂದನ್ನು ಸೇರಿಕೊಂಡಿತಂತಲ್ಲಾ!



ಇನ್ನು ಅತ್ತ ಬೆಂಗಳೂರಿನಲ್ಲಿ ತಮ್ಮ ಆರು ತಿಂಗಳ ಕುರ್ಚಿಯಡಿಯ ನೆಲ ಇದ್ದಕ್ಕಿದ್ದಂತೆ ಕುಸಿಯುತ್ತಿರುವ ಅನುಭವವಾಗಿ ಗಾಬರಿಗೊಂಡು ಕೆಳಗಡೆ ನೋಡಲಾಗಿ ಅಲ್ಲಿ ಹೆಗ್ಗಣಗಳ ಸಂತೆಯೇ ನೆರೆದಿರುವುದನ್ನು ಕಂಡ ಜಗದೀಶ ಶೆಟ್ಟರ್ ಎಂಬ ಎಣ್ಣೆ ಮುಖದ ಆಸಾಮಿ ಇದೆಲ್ಲ ಕಾಂಗ್ರೆಸ್ಸಿನವರ ಕುತಂತ್ರ, ಅನೈತಿಕ ರಾಜಕಾರಣ, ತತ್ವಹೀನ ಪಕ್ಷಾಂತರ ಎಂದೆಲ್ಲ ಬಡಬಡಿಸುತ್ತಾ, 'ತಿಂದ ಮನೆಯ ಜಂತಿ ಎಣಿಸುವ ಈ ದ್ರೋಹಿ'ಗಳನ್ನೆಲ್ಲ ತಹಬಂದಿಗೆ ತರಲು ನಾಲ್ಕು ವರ್ಷಗಳ ಹಿಂದಷ್ಟೇ 'ಆಪರೇಷನ್ ಕಮಲ' ಎಂಬ ಪರಮ ನೈತಿಕ ಮತ್ತು ತತ್ವಬದ್ಧ ರಾಜಕಾರಣದಲ್ಲಿ ಪರಿಪೂರ್ಣ ಪರಿಣಿತಿ ಸಾಧಿಸಿದ್ದ ಜನಾರ್ಧನರೆಡ್ಡಿ ಎಂಬ ಗಣಿ ಗಿರಾಕಿಯಿಂದ ಸಲಹೆ ಪಡೆದು ಬರಲು ತಮ್ಮ ಬಂಟನೊಬ್ಬನಿಗೆ ವಿಭೂತಿ ಪಟ್ಟೆ ಹಾಕಿ ಇತ್ತೀಚೆಗೆ ತಾನೆ ತಮ್ಮ ಬಜೆಟ್‌ನಲ್ಲಿ ಕೋಟಿ ರೂಪಾಯಿಗಳ ದಾನ ಕೊಟ್ಟ ಯಾವುದೋ ಪಡಪೋಶಿ ಜಾತಿಯ ಮಠಾಧೀಶನೊಬ್ಬನ ವೇಷದಲ್ಲಿ ಕಾಚಿಗುಡ ಜೈಲಿಗೆ ರವಾನಿಸಿದ್ದಾರಂತಲ್ಲಾ!



ಇನ್ನು ಪುರಾತನ ಕಾಲದಿಂದಲೂ ತನ್ನ ಸಮಯಸಾಧಕ ರಾಜಕಾರಣದ ಭಾಗವಾಗಿ ರಾಷ್ಟ್ರಮಟ್ಟದಲ್ಲಿ ಪೋಷಿಸಿಕೊಂಡು ಬಂದಿದ್ದ ಪಕ್ಷಾಂತರವೆಂಬ ರಾಜಕೀಯ ತಂತ್ರವು ಕರ್ನಾಟಕದಲ್ಲಿ 'ಆಪರೇಷನ್ ಕಮಲ'ದ ರೂಪದಲ್ಲಿ ತನಗೇ ಮಾರಣಾಂತಿಕ ತಿರುಗುಬಾಣವಾಗಿ ಪರಿಣಮಿಸಿದ್ದನ್ನು ದಿಗ್ಭ್ರಮೆಯಿಂದ ನೋಡಿ 'ವೃದ್ಧನಾರಿ ಪಾತಿವ್ರತ್ಯ'ದ ನೈತಿಕ ಆಕ್ರೋಶದಲ್ಲಿ ಹಾರಾಡುತ್ತಿದ್ದ ಕಾಂಗ್ರೆಸ್ ಎಂಬ ಗುಜರಿಗೆ ಬಿದ್ದಿದ್ದ ಹಡಗಿನ ಬಾಗಿಲ ಮುಂದೆ ನೆರೆದಿದ್ದ ಜನಜಂಗುಳಿಯನ್ನು ಕಂಡ ಪರಮೇಶ್ವರನೆಂಬ ಆ ಹಡಗಿನ ಕ್ಯಾಪ್ಟನ್ ಹಿಗ್ಗಿ ಹೀರಾಕಾಯಿಯಾಗಿ, 'ಬನ್ನಿ ನನ್ನ ಹಳೆಯ ಬಂಧು ಹೆಗ್ಗಣಗಳೇ! ಇಲ್ಲಿ ಸಾಕಷ್ಟು ಬಿಲಗಳು ಖಾಲಿ ಇವೆ! ಅವಸರ ಬೇಡ, ಒಬ್ಬೊಬ್ಬರಾಗಿ ಬನ್ನಿ! ಚೆಕ್ ಮಾಡಿ ಒಳಗೆ ಬಿಡಲು ದೆಹಲಿಯಿಂದ ಆಜ್ಞೆಯಾಗಿದ್ದು, ಅಲ್ಲಿ ಎಷ್ಟು ತಿಂದು ಇಲ್ಲಿಗೆ ಎಷ್ಟು ಬಾಯಲ್ಲಿಟ್ಟುಕೊಂಡು ಮತ್ತು ಎಷ್ಟು ಬೆನ್ನ ಮೇಲೇ ಹೇರಿಕೊಂಡು ತಂದಿದ್ದೀರಿ ಎಂಬುದನ್ನು ನೋಡಿ ಒಳಗೆ ಬಿಡುತ್ತೇವೆ' ಎಂದು ಸಾಂತ್ವನಪೂರ್ವಕವಾಗಿ ಹೇಳುತ್ತಿದ್ದಂತೆ ಆ ಹೆಗ್ಗಣಗಳು ಬಾಯಲ್ಲಿದ್ದನ್ನೆಲ್ಲ ಕಕ್ಕಿ, ಬೆನ್ನ ಮೇಲಿನ ಮೂಟೆಗಳನ್ನು ಬಾಗಿಲ ಬಳಿ ಇಳಿಸಿ 'ಸದ್ಯ!' ಎಂದು ನಿಟ್ಟಿಸಿರಿಟ್ಟು ಸುಧಾರಿಸಿಕೊಂಡವಂತಲ್ಲಾ!




ಇನ್ನು ಇತ್ತ ಕುಮಾರಸ್ವಾಮಿ ಎಂಬ ದೇವೇಗೌಡ ಅಂಡ್ ಸನ್ಸ್ ಕಂಪನಿ ಲಿ. ನ ಮಾಲೀಕ ತಮ್ಮ ಹಡಗಿಗೆ 'ಆಪರೇಷನ್ ಕಮಲ' ಎಂಬ ಗುಣಮಟದ್ದ ಚಿಹ್ನೆಯನ್ನು ದಾಟಿ ಬರಬಲ್ಲವರಿಗೆ ಮಾತ್ರ ಪ್ರವೇಶ ಎಂದು ನೈತಿಕ ಪೋಸು ಕೊಡುತ್ತಾ ನಿಂತು, ಕೂತು ಮಲಗಿ 'ಟಿಕೆಟ್ ಟಿಕೆಟ್' ಯಾರಿಗ್ರೀ ಟಿಕೆಟ್!' ಎಂದು ಕೂಗಿಕೊಳ್ಳುತ್ತಿದ್ದರೂ ಕಂಪನಿಯೊಳಗಿನ ಕೌಟುಂಬಿಕ ಧಗೆ ತಾಳಲಾರದೆ ವಿಶ್ವನಾಥ, ಪುಟ್ಟೇಗೌಡ ಎಂಬ ಮನೆ ಕೊಟ್ಟಿಗೆ ದನಗಳೇ ಹೊರಕ್ಕೆ ದೌಡಾಯಿಸುತ್ತಿರುವುದನ್ನು ಕಂಡ ಬರಗಾಲ ಬಿದ್ದಿರುವ ಸೀಮೆಗಳಿಂದ ಓಡಿಬರುತ್ತಿರುವ ಜವಾರಿ ಎತ್ತು-ಹೋರಿಗಳೊಂದೂ ಇತ್ತ ತಿರುಗಿ ನೋಡಲೂ ನಿರಾಕರಿಸುತ್ತಿರಲು, ಕಂಪನಿಯ ಗೌರವಾಧ್ಯಕ್ಷ ದೇವೇಗೌಡರು, ಇದಕ್ಕೆ ದನದ ಜಾತ್ರೆಯೊಂದನ್ನು ಏರ್ಪಡಿಸಿ ಸಗಟು ವ್ಯಾಪಾರ ಏರ್ಪಡಿಸುವುದೇ ಮದ್ದೆಂದು ಲೆಕ್ಕಹಾಕಿ ಈ ಜಾತ್ರೆಯಲ್ಲಿ 'ವೀರಶೈವ ಕಾಫಿ ಕ್ಲಬ್'ವೊಂದನ್ನು ತೆರೆದರೆ ಒಳ್ಳೆಯ ಲಾಭ ದೊರೆಯುವುದು ಖಂಡಿತವೆಂದು 'ಆಪರೇಷನ್ ಕಮಲ'ದ ದುರಂತ ಫಲಾನುಭವಿ ಜಗದೀಶ ಶೆಟ್ಟರ್ ಬಳಿ ಮಾತುಕತೆ ನಡೆಸಲು ಹೋಗಿರುವರೆಂಬ ಸುದ್ದಿ ಹರಡಿದೆಯಲ್ಲಾ!





ಕರ್ನಾಟಕದ ರಾಜಕಾರಣ ಹೀಗೆ ದನದ ಜಾತ್ರೆಯ ಸಂಭ್ರಮದೊಂದಿಗೆ ಮುಂದುವರೆದಿರಲು ಇತ್ತ ಸಾಂಸ್ಕೃತಿಕ ಕ್ಷೇತ್ರದಲ್ಲೂ 'ಎಡವಿ ಬಿದ್ದ ಅಕ್ಷರ' ಎಂಬ ಕೃತಿಯ ತೇರುತ್ಸವ ನಡೆದಿದ್ದು, ಅದರಲ್ಲಿ ಈ ಕೃತಿಯ ಬಗ್ಗೆ ರಾಜಕೀಯ-ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ-ಲೌಕಿಕ-ಪಾರಮಾರ್ಥಿಕ-ದಾರ್ಶನಿಕ ಇತ್ಯಾದಿ ಕ-ಕಾರಗಳ ಮಂತ್ರ ಜಪವನ್ನು ಆರಂಭಿಸಲಾಗಿದ್ದು, ದೂರದಿಂದ ಕೇಳುವವರಿಗೆ ಇದು ಯಾವುದೋ ಊರಿನ ದೊಡ್ಡ ಸಾಹುಕಾರನ 'ಷಷ್ಠ್ಯಬ್ದಿ' ಸಮಾರಂಭದ ಪುರೋಹಿತರ ಸೇಸೆಯ ಮಂತ್ರಗಳಂತೆ ಕೇಳಿಸುತ್ತಿವೆಯಂತಲ್ಲಾ!



ಈ ಸೇಸೆಗಳ ಸಂಭ್ರಮದ ಮಧ್ಯೆ ತಲೆಹರಟೆ ಗಿರಾಕಿಯೊಬ್ಬ ನುಗ್ಗಿ ಬಂದು 'ಸ್ವರಾಜ್... ಸ್ವರಾಜ್...' ಎಂಬ ತನ್ನದೇ ಸೇಸೆಯೊಂದನ್ನು ಬಡಬಡಿ ಸುತ್ತಿರುವುದನ್ನು ಕಂಡ ಕೆಲ ಮುದಿ ಪುರೋಹಿತರು 'ಇದಾರೀತ! ಇಲ್ಲಿ ಆ ದಲಿತ ಕುಲಕಂಟಕನ ಭಾಷೆಯನ್ನಾಡಿ ಈ ಉತ್ಸವದ ಪಾವಿತ್ರ್ಯವನ್ನೇ ಹಾಳುಗೆಡಹುತ್ತಿದ್ದಾನಲ್ಲಾ !' ಎಂದು ತಕರಾರು ತೆಗೆಯಲು ಗಂಟಲು ಸರಿಮಾಡಿಕೊಳ್ಳುತ್ತಿರುವಲ್ಲಿ ಆ ಗಿರಾಕಿ ಯಾವುದೋ ಶಬ್ದವೊಂದನ್ನು ಉಚ್ಛರಿಸಿದರೆ ಗಲಾಟೆಯಾಗಬಹುದೆಂಬ ಭೀತಿಯಲ್ಲಿರುವವನಂತೆ. 'ಇದು ಆ... ಆ...ಅವರ... ಸ್ವರಾಜ್ ಅಲ್ಲ, 'ದಲಿತ ಸ್ವರಾಜ್!' ಎಂದೊಡನೆ 'ಆಹಾ! ಆಹಾ! ಇದು ಆ... ಆ... ಆತನ ಕಡೆ ಬಿಟ್ಟಿರುವ ಎಂತಹ ತಿರುಗುಬಾಣ!' ಎಂದು ಈ ನಮ್ಮ ಹೊಸ ಕುಲತಿಲಕನಾರೆಂದು ಹತ್ತಿರ ಬಂದು ನೋಡಲು ಆ ಗಿರಾಕಿ ಮತ್ತಾರೂ ಅಲ್ಲದೆ ತನ್ನ ತಲೆಹರಟೆಯಿಂದಾಗಿ ತಮ್ಮ ಕುಲದಿಂದ ಬಹಿಷ್ಕೃತನಾಗಿದ್ದ ಆ ಹಳೆಯ ಗಿರಾಕಿಯೇ ಎಂಬುದನ್ನು ಕಂಡುಕೊಂಡೊಡನೆ 'ದಲಿತ್ ಸ್ವರಾಜ್ ಜಿಂದಾಬಾದ್! ಆ... ಆ...ಸ್ವರಾಜ್ ಮುರ್ದಾಬಾದ್!' ಎಂಬ ಘೋಷಣೆಗಳು ಮುಗಿಲು ಮುಟ್ಟಿದುವಂತಲ್ಲಾ!

### ಕೊನೇ ಹನಿ!



ಇದು ನಮ್ಮ ದಲಿತ ಕವಿ ಸಿದ್ದಲಿಂಗಯ್ಯನವರ ಸುಪ್ರಸಿದ್ದ ಹಾಸ್ಯಪ್ರಜ್ಞೆಗೊಂದು ಉಜ್ವಲ ಉದಾಹರಣೆ. ಒಮ್ಮೆ ಈ ಕಿಡಿಗೇಡಿ ಈ ಜ್ಞಾನಭಾರತಿಯ ಆವರಣದಲ್ಲಿ ತನ್ನ ಕಿಡಿಗೇಡಿ ಗೆಳೆಯರನ್ನು ಹುಡುಕಿ ಹೊರಟಿದ್ದಾಗ ಎದುರಿಗೆ ದೂರದಲ್ಲಿ ಕವಿಗಳು ಆ ಕಿಡಿಗೇಡಿ ಗೆಳೆಯರೊಂದಿಗೆ ಕಾಣಿಸಿಕೊಂಡರು. ಈ ಕಿಡಿಗೇಡಿಯನ್ನು ಕಂಡೊಡನೆ ಅವರ ನಡಿಗೆಯ ಲಯವೇ ಬದಲಾಗಿ ರಸ್ತೆಯ ಎರಡೂ ಬದಿಗೆ ತೂರಾಡುತ್ತಾ ಬಳಿ ಸಾರಿದರು.

ಈ ಕಿಡಿಗೇಡಿ ಅವರೊಡನಿದ್ದ ಗೆಳೆಯರಿಗೆ 'ಏನ್ರೀ ಮಧ್ಯಾಹ್ನದ ಹೊತ್ತಿಗೆ ಕವಿಗೆ ಕುಡಿಸಿ ಹಾಳು ಮಾಡುತ್ತೀದ್ದರಲ್ಲಾ!' ಎಂದು ಆಕ್ಷೇಪಿಸಲು ಆ ಗೆಳೆಯರು 'ಛೇ ಛೇ! ಹಾಗೇನಿಲ್ಲ ಸ್ವಾಮೀ, ಈಗ ತಾನೇ ಕ್ಯಾಂಟೀನ್‌ನಲ್ಲಿ ಕವಿಗಳಿಗೆ ಫುಲ್ ಮೀಲ್ಸ್ ಹಾಕಿಸಿದ್ದೀವಷ್ಟೆ!' ಎಂದಾಗ ಈ ಕಿಡಿಗೇಡಿ ಎಲ್ಲರನ್ನೂ ಆಶ್ಚರ್ಯದಿಂದ ನೋಡುತ್ತಿರಲು ಕವಿಗಳು ತೊದತೊದಲುತ್ತಲೇ ಈ ಕಿಡಿಗೇಡಿಗೆ ಜ್ಞಾನೋದಯವನ್ನುಂಟುಮಾಡಿದರು:: 'ಗುರುಗಳೇ ದಲಿತರಿಗೆ ಫುಲ್ ಮೀಲ್ಸೇ ಕಿಕ್ ಕೊಡಲು ಸಾಕು!'

-ಕಿಡಿಗೇಡಿ

## ಸಮಕಾಲೀನ

# ಲೋಹಿಯಾ ನೆನಪು



ಮಾರ್ಚ್ ೨೩ ಲೋಹಿಯಾ ಜಯಂತಿ. ಇವರು ಈಗ ಬದುಕಿದ್ದರೆ ೧೦೩ ವರ್ಷ ತುಂಬುತ್ತಿತ್ತು. ಆದರೆ ಅವರು ತಮ್ಮ ೫೭ನೇ ವಯಸ್ಸಿನಲ್ಲೇ ಜನಸಾಮಾನ್ಯರ ಸರ್ಕಾರಿ ಆಸ್ಪತ್ರೆಗೇ ಸೇರಬೇಕೆಂದು ಹಠ ಮಾಡಿ ಬಹಳ ಜನ ಹೇಳುವಂತೆ ತಪ್ಪು ರೋಗ ನಿದಾನ ಮತ್ತು ಹಾಗಾಗಿ ತಪ್ಪು ಚಿಕಿತ್ಸೆಗೆ ಬಲಿಯಾಗಿ ಅಸು ನೀಗಿದರು. ಆದರೆ ಆ ಹೊತ್ತಿಗೆ ಅವರು ಭಾರತದ ಭವಿಷ್ಯದ ರಾಜಕಾರಣ ಮತ್ತು ಅದಕ್ಕೆ ಜೀವಸೆಲೆಯಾಗಿರಬೇಕೆಂದು ಅವರು ಬಯಸಿದ ಸಾಂಸ್ಕೃತಿಕ ಕರ್ಯಸೂಚಿಯೊದನ್ನು ನಿರ್ಧರಿಸಿಬಿಟ್ಟಿದ್ದರು. ಕಾಲದ ಜೊತೆ ಹೆಜ್ಜೆ ಹಾಕುವಾಗ ತಾವು ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದೇನೇನೋ ಎಂಬ ಆತಂಕ ಅವರನ್ನು ಒಮ್ಮೊಮ್ಮೆ ಕಾಡಿತ್ತಾದರೂ, ಮುಂದೊಂದು ದಿನ ಜನ ತಮ್ಮ ಕೇಳೇ ಕೇಳಬೇಕಗುತ್ತದೆ ಎಂಬ ವಿಶ್ವಾಸ ಅವರಿಗಿತ್ತು.

ಆ ದಿನಗಳು ಇಂದು ಬಂದು ನಮ್ಮ ಎದೆಯ ಬಾಗಿಲು ಬಡಿಯುತ್ತಿವೆ. ಮನುಷ್ಯನ ಆದಿ ತುಡಿತವೆಂದು ಕರೆಯಬಹುದಾದ ಸಮಾನತೆಯ ಪ್ರಶ್ನೆ ಇಂದು ಅವರ ಕಾಲದಲ್ಲಿದ್ದಷ್ಟು ಸರಳವಗಿರದೆ ಜಟಿಲಗೊಂಡು, ಅವರ ಕಾಲದ ಸಮಾಜವಾದಿ ರಾಜಕಾರಣವನ್ನು ಇಂದು ತದ್ವತ್ತಾಗಿ ಮುಂದುವರೆಸಿಕೊಂಡು ಹೋಗಲು ಸಾಧ್ಯವಿಲ್ಲವಾದರೂ, ಅವರು ರಾಜಕಾರಣಕ್ಕೆ ಒದಗಿಸಿದ ಸಾಂಸ್ಕೃತಿಕ ಆಧಾರಗಳು ಅವರ ರಾಜಕಾರಣದ ಮೂಲತತ್ವಗಳು ಇಂದಿನ ಜಾಗತೀಕರಣದ ರಾಜಕಾರಣವನ್ನು ಅರ್ಥ ಮಾಡಿಕೊಂಡು ಅದನ್ನು ಎದುರಿಸಿ ನಿಭಾಯಿಸಲು ನಮಗೆ ಸಹಾಯವಾಗಬಹುದು. ಮುಖ್ಯವಾಗಿ ಅವರು ಸಮನಾತೆ ಎಂಬುದನ್ನು ಅದರ ರೂಕ್ಷ ಆದಾಯ ಸಮಾನತೆ ಅಥವಾ ಅದರ ಸುಧಾರಿತ ರೂಪವೆನ್ನಿಸುವ ಅವಕಾಶಗಳ ಸಮಾನತೆ ಎಂಬ ಅರ್ಥಗಳಾಚೆಗೆ ವಿಸ್ತರಿಸಿ ಅದು 'ಬಾಹ್ಯ ಬಂಧುತ್ವ ಆಂತರಿಕ ಪ್ರಶಾಂತಿ' ಎಂದು ನಿರೂಪಿಸಿ ಹೊಸ ಸಮತೋಲನವೊಂದನ್ನು ಆಧರಿಸಿದ ನಾಗರೀಕತೆಯ ಹೊಳಹನ್ನು ಬಿಟ್ಟು ಹೋಗಿದ್ದಾರೆ. ಹಾಗೆಂದೇ ಅವರು ಸಮಕಾಲೀನ ರಾಜಕೀಯ ಚರ್ಚೆಗಳಲ್ಲಿ ಸಮಾಜವಾದದ ಆಶಯವನ್ನು ಜನಪ್ರಿಯವೂ ಕ್ಷೀಷೆಯ ಶಬ್ದವೂ ಆಗಿದ್ದ ಸಮಾನತೆಗೆ ಬದಲಾಗಿ ಸಮತೆ ಎಂಬ ಶಬ್ದವನ್ನು ಚಲಾವಣೆಗೆ ತಂದು ಬಳಸುತ್ತಿದ್ದರು.


ಮನುಷ್ಯನ ವಿವೇಕವನ್ನು ಅಂದರೆ ತನ್ನೊಳಗಿನ ಸಂಪತ್ತು ಮತ್ತು ಹೊರಗಿನ ಸಂಪತ್ತುಗಳ ನಡುವಣ ಸಮತೋಲನವನ್ನು ನಿರ್ಧರಿಸುವ 'ತನಗೆಷ್ಟು ಬೇಕು ಮತ್ತು ಎಷ್ಟು ಸಾಕು' ಎಂಬ ಸೂತ್ರದಲ್ಲಿನ 'ಸಾಕು' ಎಂಬ ಪರಿಕಲ್ಪನೆಯನ್ನೇ ಜಾಗತೀಕರಣವೆಂಬುದು ಅಸಂಬದ್ಧಗೊಳಿಸಿ ಅಪ್ರಸ್ತುತಗೊಳಿಸಿದೆ. ಅದು ಬಡವ–ಶ್ರೀಮಂತರೆನ್ನದೆ ಎಲ್ಲರಲ್ಲಿ ಹುಟ್ಟಿಸಿರುವ ಹಪಾಹಪಿಯನ್ನು ಬರೀ ಆರ್ಥಿಕ–ಸಾಮಾಜಿಕ ರಾಜಕಾರಣದಿಂದ ನಿಭಾಯಿಸಲು ಅಸಾಧ್ಯವೆನ್ನುವುದು ಹಿಂಸೆ ಎಂಬುದು ನಮ್ಮ ಸಾರ್ವಜನಿಕ ಮತ್ತು ವೈಯುಕ್ತಿಕ ಜೀವನದಲ್ಲಿ ದಿನೇ ದಿನೇ ಪಡೆಯುತ್ತಿರುವ ಹೊಸ ರೂಪ, ತೀವ್ರತೆ ಮತ್ತು ಅನಿವಾರ್ಯವೆನ್ನಿಸುತ್ತಿರುವ ಮಾನ್ಯತೆಗಳ ಮೂಲಕ ನಮಗೆ ಗೊತ್ತಾಗತೊಡಗಿದೆ. ಆಧುನಿಕ ನಾಗರೀಕತೆ ಎಂಬುದನ್ನೇ ಅಸಭ್ಯತೆ ಎಂದು ಕರೆದ ಯುಗಪುರುಷ ಗಾಂಧೀಜಿಯ ಭಿನ್ನಮತೀಯ ಶಿಷ್ಯರಾಗಿದ್ದ ಲೋಹಿಯಾ ತಮ್ಮ ಅಲ್ಪಾಯುಷ್ಯದಲ್ಲೇ ಬಾಳಿ ಹೋದ ತಮ್ಮ ತುಂಬು ವ್ಯಕ್ತಿತ್ವದ ಹಲವು ಕಂಪನಗಳ ಮೂಲಕವೇ ಇಂದಿನ ಈ ಬಿಕ್ಕಟ್ಟನ್ನು ಎದುರಿಸಲು ನಮಗೆ ಕೆಲವು ಹೊಳಹುಗಳನ್ನು ಬಿಟ್ಟು ಹೋಗಿದ್ದಾರೆ. ಅಂತಹ ವ್ಯಕ್ತಿತ್ವದ ಒಂದು ಸೆಳಕು ಇಲ್ಲಿದೆ. ಈ ವ್ಯಕ್ತಿ ಚಿತ್ರದ ಕರ್ತೃ ಲೋಹಿಯಾರ ಹಲವು ಬೌದ್ಧಿಕ ಮತ್ತು ಸಾಂಸ್ಕೃತಿಕ ಒಡನಾಡಿಗಳಲ್ಲೊಬ್ಬರಾಗಿದ್ದ ಆಧುನಿಕ ಮರಾಠಿ ಸಾಹಿತ್ಯದ ಅಧ್ವರ್ಯುಗಳಲ್ಲೊಬ್ಬರೂ, ಜ್ಞಾನಪೀಠ ಪುರಸ್ಕೃತರೂ ಆದ ಪು.ಲ. ದೇಶಪಾಂಡೆಯವರು. ಅವರು ಇದನ್ನು ಬರೆದಿರುವುದು ಲೋಹಿಯಾರ ಒಡನಾಡಿ ಶ್ರೀಮತಿ ಇಂದುಮತಿ ಕೇಳ್ಕರರು ಮರಾಠಿಯಲ್ಲಿ ಹೊರತಂದಿರುವ ಲೋಹಿಯಾ ಸಂಪುಟದ ಮುನ್ನುಡಿಯಾಗಿ.

ಲೋಹಿಯಾ ನೆನಪಿನ ಭಾಗವಾಗಿ ಈ ಸಂಚಿಕೆಯಲ್ಲಿ ಪ್ರಕಟವಾಗುತ್ತಿರುವ ಇನ್ನೊಂದು ಲೇಖನ, ಇಂದು ಜ್ಞಾನಜಿಜ್ಞಾಸಿಕ ನೆಲೆಯಲ್ಲೇ ಮೂಲಭೂತ ಸಂದಿಗ್ಧಗಳನ್ನು ಎದುರಿಸುತ್ತಿರುವ 'ಪ್ರಜಾಪ್ರಭುತ್ವ'ದ ಪರಿಕಲ್ಪನೆ ಕುರಿತ ಲೋಹಿಯಾ ವಿಚಾರಗಳನ್ನು ಕುರಿತ ಒಂದು ಪರಿಶಿಲನೆಯನ್ನು ಕುರಿತಾದ್ದು. ಇದನ್ನು ಬರೆದವರು ಲೋಹಿಯಾ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಡಾ॥ ರಾಜಾರಾಂ ತೋಳ್ಪಾಡಿಯವರು –ಸಂಪಾದಕ

# ಡಾ. ರಾಮಮನೋಹರ ಲೋಹಿಯಾಃ ಒಬ್ಬ ರಸಿಕ ರುದ್ರ ತಪಸ್ವಿ

**–ಪು.ಲ. ದೇಶಪಾಂಡೆ**

**ಈ** ಜಗತ್ತಿನಲ್ಲಿ ಸತ್ಯವನ್ನು ಅನುಸರಿಸಿ, ಧೈರ್ಯದಿಂದ ಬದುಕಬೇಕಾದರೆ, ಒಬ್ಬಂಟಿಗನಾಗಿ ಬಾಳುವ ಸಿದ್ಧತೆ ಬೇಕು. ಡಾ. ಲೋಹಿಂಯಾ ಅವರು ಹೀಗೆ ಒಬ್ಬಂಟಿಗನಾಗಿ ಹೊರಟ ಸಂನ್ಯಾಸಿಗಳಾಗಿದ್ದರು. ಜೀವನದಲ್ಲಿಯ 'ಸತ್' ಹುಡಕಲು ಹೊರಟವರು. ಜೊತೆಗಾರರಾಗಿ ಅವರೊಡನೆ ನೀವು ಬಂದರೊ ಸೈ, ಬರದಿದ್ದರೂ ಸೈ, ಈ ಮನೋಭಾವದಿಂದ ನಡೆಯುವವರು ಅವರು. ಸಲ್ಲದ ಪ್ರಸಂಗಗಳಲ್ಲಿ ಸತ್ಯವನ್ನಾಡುವ ಚಾಳಿಯಿದ್ದ ಈ ಮನುಷ್ಯ 'ನ ಬ್ರೂಯಾತ್ ಸತ್ಯಂ ಪ್ರಿಯರ್'ದಂತಹ ಸಂಭಾವಿತ ಮಾತುಗಳನ್ನು ಅರಿಯದವನು. ರಸಿಕನಾದರೂ ಒರಟ. ಆನಂದವನ್ನು ಸಂಚಯಿಸುವವನಾದರೂ ವಿರಕ್ತನು. ಜೀವನದಲ್ಲಿಯ ಸೌಂದರ್ಯವನ್ನು ಉತ್ಕಟತೆಯಿಂದ ಅಪ್ಪುವವನು, ಅಷ್ಟೇ ಅಲಿಪ್ತನು. ಅತ್ಯಂತ ಆಕರ್ಷಕ ಅಂತರಂಗದವನು, ಅಷ್ಟೇ ಭೀತಿದಾಯಕ ಬಹಿರಂಗದವನು. ಪ್ರೀತಿಯಿಂದ ಭೆಟ್ಟಿಯಾಗಲು ಬಂದರೂ ಪೆಟ್ಟು ಹಾಕಲು ಬಂದಂತೆ ಬರುವವನು. ಈ ಒಡ್ಡೊಡಾದ ಬಹು ಮಡಿಕೆಗಳ ವ್ಯಕ್ತಿತ್ವವು ವಾಸ್ತವಿಕವಾಗಿ ಡಾ. ಕೇತ್ಕರ್, ವಿಸೂಭಾವೊ ರಾಜವಾಡೇ, ಜ್ಯೋತಿಬಾ ಫುಲೇ ಇಂತಹವರ ಹಾಗೆ ಮರಾಠಿ ಮಣ್ಣಿನಲ್ಲಿಯೇ ಆಕಾರ ತಾಳಲು ಯೋಗ್ಯವಾಗಿತ್ತು. ಗಡಕಯವರು ಬಣ್ಣಿಸಿದ,



**ಗಡಸು ದೇಶವು, ಗಟ್ಟಿಗ ದೇಶವು,**
**ಕಲ್ಲಿನದೇ ಈ ದೇಶ !**
**ನಯನಾಜೂಕಿನ, ಕೋಮಲ ದೇಶವು, ಹೂವುಗಳದೂ ಈ ದೇಶ !!**

ಎಂಬ ವರ್ಣನೆ ಮಹಾರಾಷ್ಟ್ರದಷ್ಟಯೇ ಡಾಕ್ಟರ್ ಲೋಹಿಯಾ ಅವರ ವ್ಯಕ್ತಿತ್ವಕ್ಕೂ ಸರಿಹೊಂದಬಹುದಿತ್ತು.

ಲೋಹಿಯಾ ಅವರ ಒರಟುತನಕ್ಕೆ ಅತಿಯಾಗಿ ಪ್ರಸಿದ್ಧಿ ದೊರಕಿತು. 'ಹಣ ತೆತ್ತು ಗೋಳುಗರೆಯಲು' ಹಚ್ಚುವ ಸಂಪ್ರದಾಯದ ಪತ್ರಕರ್ತರು ಗೋಡೆಗಳ ನಂತರ ಗೋಡೆಗಳನ್ನು ನಿರ್ಮಿಸಿ–ನಿಜವಾಗಿ ಹೇಳಬೇಕಾದರೆ ಗೋಡೆಗಳ ಹಿಂದೆ ಅಡಗಿ – ಅವರ ಪ್ರತಿಮೆಯನ್ನು ವಿಕೃತಗೊಳಸುವ ಇಷ್ಟೋ ಸಂರ್ಭಗಳನ್ನು ಸಾಧಿಸಿಕೊಂಡರು. ಲೋಹಿಯಾ ಅವರು ಕೊಡ 'ಗಚ್ಛ ಸೂಕರ ಭದ್ರಂ ತೇ' ಎಂಬ ಠೀವಿಯಲ್ಲಿ ತಮ್ಮ ಮೇಲೆ ರಾಡಿಯನ್ನು ಚೆಲ್ಲಲು ಅವರಿಗೆ ಸಾಕಷ್ಟು ಸಂದರ್ಭಗಳನ್ನು ಒದಗಿಸಿಕೊಟ್ಟರು.

ಹೊಸ ಪೀಳಿಗೆಯ ಮುಂದೆ ಚಿತ್ರಿಸಲಾಗುತ್ತಿದ್ದುದು, ಪಾರ್ಲಿಮೆಂಟಿನಲ್ಲಿ ಸರಕಾರಕ್ಕೆ ವಿರೋಧಿಗಳಾಗಿ ನಿಂತ ಲೋಹಿಯಾ. ನಾಲ್ವತ್ತೆರಡರ ಚಳುವಳಿಯಲ್ಲಿ ಕಾರಾಗೃಹದಲ್ಲಿ ವಿಪರೀತ ಕಷ್ಟಗಳನ್ನು ಸಹಿಸಿದ ಲೋಹಿಯಾ ಮರೆಯಲಾಗಿದ್ದರು. ಅಮೆರಿಕೆಯಿಂದ ಆಯಾತವಾಗುವ ಆಧುನಿಕ ಸಂಸ್ಕೃತಿಯ ಮೇಲೆ ಶ್ರದ್ಧೆಯನ್ನಿಟ್ಟು ಬಾಳುವವರಿಗೆ ಲೋಹಿಯಾ ಅವರು 'ಕ್ರೂಡ್' ಆಗಿ ಕಾಣುತ್ತಿದ್ದರು. "ಅಂಗ್ರೇಜಿ ಹಟಾವ್' ಎಂದೆನ್ನುವ ಮನುಷ್ಯನಿಗೆ ಸುಸಂಸ್ಕೃತನೆಂದು ಹೇಗೆ ಕರೆಯವುದು? ಮಮ್ಮಿ–ಡ್ಯಾಡಿ–ಸಂಸ್ಕೃತಿಯ ಜನರಿಗೆ ಅವರು ಗ್ರಾಮ್ಯರಾಗಿ ತೋರುತ್ತಿದ್ದರು. ಭೋಜನದ ಬಳಿಕ ತಾಂಬೂಲಸೇವನೆಯನ್ನು ಮಾಡಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸವಿಯುವ ಸಾಂಸ್ಕೃತಿಕ ಸ್ವಾತಂತ್ರ್ಯವಾದಿಗಳಿಗೆ ಲೋಹಿಯಾ ಅರಸಿಕರಾಗಿ ಕಾಣುತ್ತಿದ್ದರು. ಲೆನಿನ್– ಮಾರ್ಕ್ಸ್‌ವಾದಿ ಪುರಾಣ ಪಂಥೀಯರಿಗೆ ಅವರು ವ್ಯಕ್ತಿವಾದಿಗಳಾಗಿ ಕಾಣುತ್ತಿದ್ದರು. ನವಶ್ರೀಮಂತ ಆಂಗ್ಲ ಭಾರತೀಯರಿಗಂತೂ ಅವರ ಮೇಲೆ ಅದೆಷ್ಟು ಕೋಪ! 'ರೀಡರ್ಸ್ ಡೈಜೆಸ್ಟ್'ನಲ್ಲಿಯ ಹಾಸ್ಯ ಚುಟುಕುಗಳು, 'ಲೈಫ್' ಪತ್ರಿಕೆಯಲ್ಲಿನ ಚಿತ್ರಗಳು, ಮತ್ತು 'ಟೈಮ್ಸ್'ನಲ್ಲಿಯ ತಲೆಬರಹಗಳು ಇವುಗಳ ಹೊರತಾಗಿಈ 'ಕಲ್ಚರ್ಡ್' ಜನರ ವಾಚನದ ಮೇರೆ ಮೀರಿರುವದಿಲ್ಲ. ಕ್ಲಬ್‌ಗಳಲ್ಲಿ ವ್ಹಿಸ್ಕಿಯ ಜೊತೆಗೆ ಬಾಯಿ ಚಪ್ಪರಿಸಲು ಇಷ್ಟು 'ಶಿಕ್ಷಣ'ವು ಸಾಕಾಗುತ್ತದೆ.ಮಿಸೆಸ್‌ಗೆ ಲೇಟೆಸ್ಟ್ ಫ್ಯಾಶನ್ನ ಬಗ್ಗೆ ಮಾಹಿತಿ ಪೂರೈಸಲು ಭಾರತದಲ್ಲಿಯ ಮತ್ತು ಇಂಗ್ಲಂಡ್–ಅಮೇರಿಕಾದಿಂದ ಬರುವ ಇಂಗ್ಲೀಷ್ ಮಾಸ ಪತ್ರಿಕೆಗಳಿರುತ್ತವೆ. ಪಿಂಕಿ ಮತ್ತು ಡಿಂಕಿಗೆ ಹಾರರ್ ಕಾಮಿಕ್ಸ್ ಮತ್ತು ಮರ್ಡರ್ ಸ್ಟೋರೀಜ್‌ಗಳ ಮೇವನ್ನು ಒಗೆದು ಬಿಟ್ಟರೆ ಆ ಪಾಳೆಯವು ಸದ್ದಿಲ್ಲದೆ ಕೂತುಕೊಳ್ಳುತ್ತದೆ. ಇಂತಹ ನಾಜೂಕಿನ ಜನರಿಗೆ 'ಅಂಗ್ರೇಜಿ ಹಟಾವ್' ಎಂದೆನ್ನುವ ಲೋಹಿಯಾ ಕ್ರ್ಯಾಕ್, ಬ್ಯಾಕ್‌ವರ್ಡ್, ಜಂಗ್ಲೀ, ಕ್ರೂಡ್ ಎಂದು ಅನಿಸುವದು ಅತ್ಯಂತ ಸ್ವಾಭಾವಿಕವೇ ಆಗಿತ್ತು.

ಸ್ವಾತಂತ್ರ್ಯ ಬಂದಾಯಿತು. ಆದರೆ ಇಂದಿಗೂ ಭಾರತವು ಭಾರತೀಯ ಭಾರತ ಮತ್ತು ಆಂಗ್ಲ ಭಾರತ ಎಂಬ ಅದೃಶ್ಯ ಭಾಗಗಳಲ್ಲಿ ಬೇರ್ಪಟ್ಟಿದೆ. ಭಾರತೀಯ ಭಾರತದಲ್ಲಿ ಭಾಷೆಗನುಗುಣವಾಗಿ ಪ್ರಾಂತ್ಯ ರಚನೆಯಾದುದರಿಂದ ಹೊಸ ತುಡಿತಗಳು ನಿರ್ಮಾಣಗೊಂಡಿವೆ. ಆಂಗ್ಲ ಭಾರತೀಯರಲ್ಲಿ ಹಾಗೆ ನೋಡಿದರೆ ಒಗ್ಗಟ್ಟಿದೆ. ಈ ದೇಶಿ ಜನರ ಕೈಯಲ್ಲಿ ಸತ್ತೆಯು ಹೋಗಬಾರದೆಂದು ಅವರಿಗೆ ಇಂಗ್ಲೀಷ್ ಭಾಷೆಯು ಬೇಕಾಗಿದೆ. ರಾಷ್ಟ್ರೀಯತ್ವದ, ಆತ್ಮಗೌರವದ ಬೆಲೆಯನ್ನು ತೆತ್ತು ಅವರು ತಮ್ಮ ಮಕ್ಕಳ್ನ ಒಳಹೊರಗನ್ನೆಲ್ಲ ಪಾಶ್ಚಾತ್ಯ ಬಣ್ಣದಿಂದ ಬಳಿದುಬಿಟ್ಟಿದ್ದಾರೆ. ಇಂಗ್ಲಿಷ್ ಬರುವವನು ತಮ್ಮವನು, ಬರದಿದ್ದವನು ಕೇವಲ 'ಕೂಲಿ'ಯಾಗುವ ಇಲ್ಲವೆ ಹೆಚ್ಚೆಂದರೆ ನಾಟಕದಲ್ಲಿ 'ಬೋರಾ' ಆಗುವ ಪಾತ್ರಧಾರಿಯಾಗುತ್ತಾನೆ ಎಂಬುದು ಆ ಮಕ್ಕಳಿಗೆ ಕಲಿಸಿದ ಪಾಠ. ನಾಳೆ ದೇಶಿ ಭಾಷೆಗಳಲ್ಲಿಯೇ ರಾಜ್ಯಕಾರ್ಯಭಾರವು ಆರಂಭವಾದರೆ ಮುಖ್ಯವಾಗಿ ಕ್ರಿಸ್ತೀ ಮತಶಾಲೆಗಳಲ್ಲಿ ಕಲಿತ, ರಾಮಕೃಷ್ಣರಿಗಿಂತ ಜೇಮ್ಸ್ ಬಾಂಡ್‌ನೊಡನೆ ಹೆಚ್ಚು ಸಲಿಗೆ ಇರುವ ಆಂಗ್ಲ ಭಾರತೀಯರ ಪಾಡೇನು? ತಿಂಗಳಿಗೆ ಮೂರುನೂರು ರೂಪಾಯಿಗಳನ್ನು ತೆರಬೇಕಾಗುವ ತುಟ್ಟಿಯಾದ ಶಾಲೆಗಳಲ್ಲಿ ಈ ಹೊಸ ರಾಜ್ಯಕರ್ತೃರನ್ನು ರೂಪಿಸಲು ಹಾಕಲಾಗಿದೆ. ಇಡಿಯ ಜ್ಞಾನಭಾಂಡಾರವು ಇಂಗ್ಲೀಷ್‌ನಲ್ಲಿದೆ. ಆದ್ದರಿಂದ ಇಂಗ್ಲಿಷ್ ಇಲ್ಲದಿದ್ದರೆ ಜ್ಞಾನವಿಲ್ಲ ಎಂಬುದು ಅವರ ಯುಕ್ತಿವಾದ. ಹೇಗಿದ್ದರೂ ಇಂಗ್ಲಿಷ್ ಜನರು ಇಂಗ್ಲಿಷ್‌ನ್ನು ಬಿತ್ತಿ ಹೋಗಿದ್ದಾರೆ. ಏಕೆ ಅದರ ಮರಗಳನ್ನು ಕಿತ್ತೆಸೆಯಬೇಕು? ಇಂಗ್ಲಿಷ್‌ರು ಕ್ರಿಸ್ತೀ ಧರ್ಮೋಪದೇಶಕರನ್ನೂ ತಂದಿದ್ದರು. ನಿಜವಾಗಿಯೂ ನಾವೆಲ್ಲರೂ ಕ್ರಿಸ್ತಿಗಳೇ ಏಕಾಗಬಾರದು? ಇದಕ್ಕಿಂತ ರಶೀಯಾ ಇಲ್ಲವೇ ಅಮೇರಿಕಾ, ಇಲ್ಲದಿದ್ದರೆ ಇತ್ತಿಚೆಗಿನ ಚೀನಾ ಇವುಗಳದೇ ಒಂದು ಭಾಗ ಎಂದೇಕೆ ನಾವು ಬದುಕಬಾರದು? ಈ ಭಾರತೀಯತ್ವದ ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ತೊಂದರೆ ಬೇಕಾದದ್ದಾದರೂ ಏಕೆ?

ದುರ್ದೈವವಿಷ್ಟೇ, ಈ ಇಂಗ್ಲಿಷ್‌ಪರರಲ್ಲಿ ಹೆಚ್ಚು ಜನರ ಇಂಗ್ಲಿಷ್ ಪ್ರೇಮವು ನೌಕರಿ ಪಡೆಯುವ ವ್ಯಾಪಕ ಸೌಲಭ್ಯದ ಕಾರಣದಿಂದಾಗಿಯೇ ಇರುತ್ತದೆ. ಹಾಗೆಯೇ ಹಿಂದೂ ಧರ್ಮವನ್ನು ಬಿಟ್ಟು ಅನ್ಯ ಧರ್ಮಗಳನ್ನು ಸ್ವೀಕರಿಸಿದವರ ಮತಾಂತರಗಳೂ ಪಾರಮಾರ್ಥಿಕ ಕಾರಣಗಳಿಗಿಂತ ಆಧೀಕವಾಗಿ ಐಹಿಕ ಅಭ್ಯುದಯಕ್ಕಾಗಿಯೇ ಆಗಿವೆ. ಕೆಲವು ಚಾಕರಿಗಾಗಿ, ಕೆಲವಂತೂ ಪುನರ್ಲಗ್ನ ಇಲ್ಲವೆ ವಿವಾಹವಿಚ್ಛೇದನೆಂಯ ಸೌಕರ್ಯಕ್ಕಾಗಿಯೂ! ಈ ಇಂಗ್ಲಿಷ್‌ವಾದಿಗಳಿಗೆ ಜ್ಞಾನದ ಬಗ್ಗೆ ಎಳ್ಳಷ್ಟೂ ತವಕವಿಲ್ಲ ಡಾ.ಲೋಹಿಯಾ ಅವರು ಇಂಗ್ಲಿಷ್ ಭಾಷೆಯ ಪಂಡಿತರಾಗಿದ್ದರೆಂಬದು ಅವರಿಗೆ ಗೊತ್ತೂ ಇಲ್ಲ. ಇಂಗ್ಲಿಷ್ ಲೇಖನದಲ್ಲಿಯ ಇಲ್ಲವೆ ಮಾತಿನಲ್ಲಿಯ ವ್ಯಾಕರಣಕ್ಕೆ ಸಂಬಂಧಿಸಿದ ಕ್ಷುಲ್ಲಕ ತಪ್ಪು ಕೂಡ ಅವರು ಒಡನೆಯೇ ಗ್ರಹಿಸುತ್ತಿದ್ದರು. ಯುರೋಪಿಯನ್ ಸಂಸ್ಕೃತಿಯನ್ನು ಮತ್ತು ಇತಿಹಾಸವನ್ನು ಅವರು ಆಳವಾಗಿ ಅಭ್ಯಸಿಸಿದ್ದರು. ಜರ್ಮನ್ ಭಾಷೆಯನ್ನು ಚೆನ್ನಾಗಿ ಅರಿತಿದ್ದರು. ಅನೇಕ ಭಾರತೀಯ ಭಾಷೆಗಳನ್ನು ಬಲ್ಲವರಿದ್ದರು. ಉತ್ತರ ಭಾರತದವರು ದಕ್ಷಿಣದ ಒಂದಾದರೂ ಭಾಷೆಯನ್ನು ಕಲಿಯಬೇಕು ಎಂದು ಅಗ್ರಹದಿಂದ ಅವರು ಪ್ರತಿಪಾದಿಸುತ್ತಿದ್ದರು.

ಲೋಹಿಯಾ ಇಂಗ್ಲಿಷ್ ಭಾಷೆಯ ವಿರೋಧಿಗಳಾಗಿರಲಿಲ್ಲ. ಆ ಭಾಷೆಯನ್ನು ಈ ದೇಶದ ರಾಜ್ಯಭಾರದ ಭಾಷೆಯನ್ನಾಗಿ ಮಾಡಬಾರದೆಂದು ಅವರ ಮತ. ದೇಶದಲ್ಲಿಯ ಶೇಕಡ ತೊಂಭತ್ತು ಜನರಿಗೆ ಯಾವ ಭಾಷೆಯ ಗಂಧಗಾಳಿ ಇಲ್ಲವೋ ಆ ಭಾಷೆಯಲ್ಲಿ ರಾಜ್ಯಕಾರಭಾರವನ್ನು ಮಾಡುವದೆಂದರೆ ಶೇಕಡ ಹತ್ತು ಜನರು ಇನ್ನುಳಿದ ಶೇಕಡ ತೊಂಭತ್ತು ಜನರನ್ನು ಆಳುವದು. ಅಂದರೆ ಇವರು ಹೊಸ ಮೊಗಲ್‌ರಂತೆ. ಇಂತಹ ಮೋಗಲ್‌ರ ವಿರುದ್ಧ ಲೋಹಿಯ ರೊಚ್ಚಿಗೇಳುತ್ತಿದ್ದರು. ಈ ರೊಚ್ಚು ಅನೇಕ ವಿಧದಿಂದ ಪ್ರಕಟವಾಗುತ್ತಿತ್ತು. ಇಂಗ್ಲಿಷ್ ಭಾಷೆಯ ಒತ್ತಾಯ ನಮಗೆ ತಪ್ಪಾಗಿ ಕಾಣುವದಿಲ್ಲ. ಆ ಅನ್ಯಾಯದ ವಿರುದ್ಧ ಮಾಡಿದ ಪ್ರತಿಭಟನೆ ತಪ್ಪಾಗಿ ಕಾಣುತ್ತದೆ. ವಾದಿ, ಪ್ರತಿವಾದಿ ಇಲ್ಲವೆ ಆರೋಪಿಗಳಿಗೆ ಎಳ್ಳಷ್ಟೂ ತಿಳಿಯದ ಅಂಗ್ರೇಜಿ ಭಾಷೆಯಲ್ಲಿ ಮೊಕದ್ದಮೆಗಳು ನಡೆಸಲಾಗುತ್ತವೆ. ನ್ಯಾಯದಾನವು ಅಂಗ್ರೇಜಿ ತಿಳಿಯುವ ವಕೀಲ ಮತ್ತು ನ್ಯಾಯಾಧೀಶ ಇವರ ನಡುವಿನ ಖಾಸಗಿ ವಿಷಯವಿದ್ದಂತೆ. ಮನುಷ್ಯನ ಜೀವನಮರಣದ ಪ್ರಶ್ನೆಯಾಗಿದ್ದರೂ ಅವನಿಗೆ ತಿಳಿಯದಂತೆ ನ್ಯಾಯಾಲಯದ ಕೆಲಸವನ್ನು ನಡೆಸುವುದು ನಮಗೆ ಅಮಾನುಷವಾಗಿ ಕಾಣುವದಿಲ್ಲ. ಆದರೆ ಇಂತಹ ಅಮಾನುಷ ವೃತ್ತಿಯನ್ನು ಖಂಡಿಸುವ ಲೋಹಿಯಾ ಅವರು ನಮಗೆ ಶಿಷ್ಟಾಚಾರ ವಿಹೀನರೆಂದು ಕಾಣುತ್ತಿದ್ದರು. ಅವರು ಪರಕೀಯ ಭಾಷೆಯ ಒತ್ತಡದಿಂದ ಮೂಕರಾದ, ಭೀತಿಗ್ರಸ್ತರಾದ, ಬಡತನದಿಂದ ಪೀಡಿತರಾದ, ಮಾನವತೆಯ ಪ್ರಾಥಮಿಕ ಅಧಿಕಾರಗಳಿಂದಲೂ ವಂಚಿತರಾದ ಸಾಮಾನ್ಯರ ಪ್ರತಿನಿಧಿಗಳಾಗಿದ್ದರು.

ರೇಗಿದಾಗ ಲೋಹಿಯಾ ಅವರು ಅಡ್ಡತಿಡ್ಡವಾಗಿ ಮಾತಾಡುತ್ತಿದ್ದರು. ಆಗ ಅವರು ಲೋಹಿಯಾ ಆಗಿ ಇರುತ್ತಿರಲಿಲ್ಲ – ಆ–ಬಳಲಿದ, ಉಪೇಕ್ಷಿತ, ಹಸಿದ, ಸಾಮಾನ್ಯ ಭಾರತೀಯನ ಜೀವ ಸಂಚಾರ ಅವರ ದೇಹದಲ್ಲಿ ಆಗುತ್ತಿದ್ದಿತು. ಹಸಿದ ಮನುಷ್ಯನ ಬಗೆಗಿರುವ ಕಳವಳವು ದೆವ್ವ ಬಡೆದಂತೆ ಅವರನ್ನು ಬಾಧಿಸುತ್ತಿತ್ತು. ಅವರ ಗಲಾಟೆ ಅವರದ್ದಾಗಿರಲಿಲ್ಲ.ಲೋಹಿಯಾ ಎಂಬ ಗಿಡವನ್ನೇರಿ ಕುಳಿತ ಈ ದೇಶದಲ್ಲಿಯ ಕೋಟ್ಯಾವಧಿ ಅರೆನಗ್ನ, ಅರೆಹೊಟ್ಟೆಯ, ಅರೆಮಾನವನ ಬದುಕನ್ನು ಬದುಕುವ, ಜೀವಂತ ಪಿಶಾಚಿಗಳು ಮಾಡುತ್ತಿದ್ದವು. ಹಸಿವೆಯಿಂದ ಬೆಂದ, ರೋಸಿದ ಪಿಶಚಿಗಳಿಗಾಗಿ ತನ್ನ ದೇಹದ ಆಲದ ಮರವನ್ನು ಒಡ್ಡುವ ಈ ಮನುಷ್ಯ ನಮ್ಮಿಂದ ಹೊರಟುಹೋಗಿದ್ದಾನೆ. ದಿಲ್ಲಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಅವರು ಕೊನೆಯುಸಿರೆಳದರು..



**ಜನಜಾಥಾವೊಂದರಲ್ಲಿ ಜೆಪಿಯೊಂದಿಗೆ ಲೋಹಿಯಾ**

ಸಾಮಾನ್ಯ ಜನರ ಬಗ್ಗೆ ಅತ್ಯಂತ ಒಲವಿದ್ದ ಈ ಅಸಾಮಾನ್ಯ ಮನುಷ್ಯ ಭಾರತದಲ್ಲಿಯ ಸಾಮಾನ್ಯರ ಪಾಲಿಗೆ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಡ್ಡಾಡುವ ವಿಧಿರಾಯನ ಬಾಯಿಗೆ ಸಿಕ್ಕೆ ಹೋಗಿಬಿಟ್ಟ .ಬದುಕಿನಲ್ಲಿ ಎಂತಹ ಮಾನ ಮರ್ಯಾದೆಗಳನ್ನೂ ಅವರು ಅಪೇಕ್ಷಿಸಲಿಲ್ಲ. ಸಾಯುವಾಗ ಬೇಡಲು ಬರುವದಿಲ್ಲ ಆದರೆ ಯಾರಿಗೂ ಸಿಗಲೂ ಇಲ್ಲ. ಸುರಿಸಿದ ಕಣ್ಣೀರುಗಳು ಮಾತ್ರ ನಿಜವಾಗಿದ್ದವು. ಫಕೀರನಂತೆ ಬದುಕಿದ; ಫಕೀರನಂತೆಯೇ ಸತ್ತ

ಅನ್ಯಾಯದ ವಿರುದ್ಧ ಸಿಡಿದೇಳುವ ವ್ಯಕ್ತಿತ್ವ ಇದು. ಪ್ರಖರವಾಗಿದ್ದುದು ನಿಜ, ಆದರೆ ಈ ವಿಷ್ಣುದಾಸನು ಮೇಣಕ್ಕಿಂತಲೂ ಮಿದುವಾಗಿಯೂ ಆಗುತ್ತಿದ್ದನು, ಪಾರ್ಲಿಮೆಂಟಿನಲ್ಲಿಯ ಲೋಹಿಯಾ ಅವರನ್ನು ನೋಡುವವರಿಗೆ ಈ ಮನಸ್ಸಿನ ಪರಿಚಯವಿರಲಿಲ್ಲ. ಅವರ ಸಹವಾಸದ, ಅವರ ಅಂತರಂಗದಲ್ಲಿ ಇಣುಕಿ ನೋಡುವ ಸುಯೋಗವು ಎಲ್ಲರಿಗೂ ಹೇಗೆ ಲಭಿಸಬೇಕು? ನನ್ನ ಜಾತಕದಲ್ಲಿ ಇಡಲಾಗುವ ನವಿಲುಗರಿಗಳಂತೆ ಆ ಇಣುಕು ನೋಟಗಳನ್ನು ನಾನು ಜತನವಾಗಿಟ್ಟಿದ್ದೇನೆ. ನಾಲವತ್ತೆರಡರಲ್ಲಿಯ , ಅವರು ನನ್ನ ಪೀಳಿಗೆಯ ಹೀರೋ! ಅಚ್ಯುತರಾವ್ ಪಟವರ್ಧನ್, ಲೋಹಿಯಾ, ಜಯಪ್ರಕಾಶ್, ಎಸ್. ಎಮ್, ಮೆಹರ್ ಅಲಿ, ಅರುಣಾ ಅಸಫ್ ಅಲಿ ಇವರು ನಮ್ಮ ದೇವ್ ಆನಂದ್ ಮತ್ತು ಮೀನಾಕುಮಾರಿಗಳಾಗಿದ್ದರು! ಆದರೆ ಆ ವೇಳೆಗೇ ದೂರದಿಂದ ವೇದಿಕೆಯ ಮೇಲೆ ಅವರನ್ನು ನೋಡುವದು ಅವರ ಪರಾಕ್ರಮಗಳನ್ನು ಓದುವುದು, ಒಬ್ಬರಿಗೊಬ್ಬರಿಗೆ ಹೇಳುವದು, ಇಷ್ಟೇ. ಪ್ರತ್ಯಕ್ಷ ಭೆಟ್ಟಿಯ ಯೋಗವು ಮಾತ್ರ ಬಹಳ ತಡವಾಗಿ ಬಂತು,

ನನ್ನ ಸ್ನೇಹಿತನೊಬ್ಬನ ಮನೆಯಲ್ಲಿ ಅವರ ಸಹವಾಸದಲ್ಲಿ ನಿಜವಾಗಿಯೂ 'ಅವಿದಿತಗತಯಾಮಾ ರಾತ್ರಿರೇವ ವ್ಯರಂಸೀತ್' ಅನ್ನುವಂತೆ ಆಯಿತು. ಮುಂಬಯಿಯ ಭಾಷೆಯಲ್ಲಿ ಹೇಳಬೇಕಾದರೆ, ಭಯ್ಯಾ ಬಂದು 'ಬಾಯಿ ದೂಧ್' ಎಂದಾಗ ಅರಿವಾಯಿತು ರಾತ್ರಿ ಮಗಿಯಿತೆಂದು. ಲೋಹಿಯಾ ಅವರೊಂದಿಗೆ ನನ್ನದು ಅದು ಮೊದಲ ಭೆಟ್ಟಿ. ಜಾರ್ಜ ಫರ್ನಾಂಡೀಸ್ ಮುಂತಾದ ಇತರ ಸಂಯುಕ್ತ ಸಮಾಜವಾದಿ ಪಕ್ಷದ ಸ್ನೇಹಿತರಿದ್ದರು. ಹಾಗೆ ನೋಡಿದರೆ. ಅದರಲ್ಲೂ ರಾಜಕೀಯ ಪಕ್ಷವೆಂದರೆ ನನಗೆ ಸೇರದ ವಿಷಯ. ಲೋಹಿಯಾ ಅವರು ಸಮಾಜವಾದ ಎಂಬ ವಿಷಯದ ಮೇಲೆ ನನ್ನ ಮೌಖಿಕ ಪರೀಕ್ಷೆಯನ್ನು ಆರಂಭಿಸಿದರೆ ಏನಾಗಬಹುದು, ದೇವರೇ ಬಲ್ಲ ಎಂದು ಮನಸ್ಸಿನಲ್ಲಿ ಭೀತಿಯನ್ನು ತಾಳಿಯೇ ನಾನು ಆ ಸ್ನೇಹಿತರ ಮನೆಗೆ ಹೋದೆ. ತನ್ನ ಓಣಿಯಲ್ಲಿ ಪ್ರತಿಷ್ಠೆಯನ್ನು ಗಳಿಸಿದ ರಾಜಕೀಯ ಪಕ್ಷದ ಒಬ್ಬ ಪ್ರಾಥಮಿಕ ಕಾರ್ಯಕರ್ತನೂ ಕೂಡ ಯಾವಾಗಲೂ ಒಂದು ಅದೃಶ್ಯವಾದ ವೇದಿಕೆಯ ಮೇಲೆ ನಿಂತಿರುವನೆಂದ ಬಳಿಕ ಲೋಹಿಯಾ ಅವರಂತೂ ಅದೆಷ್ಟು ಹಿರಿಯ ಮನುಷ್ಯ! ನೆಹರೂ ಅವರಿಗೆ ಕೂಡ ಅಂಜದವ.

ಆ ರಾತ್ರಿ ಲೋಹಿಯಾ ಅವರು ನನಗೆ ಪ್ರಚಂಡ ಆಘಾತವನ್ನೇ ಉಂಟು ಮಾಡಿದರು. ಹಚ್ಚೆಂದರೆ ಗ್ಲೊಕೋ ಬಿಸ್ಕತ್ತು, ಅಲ್ಯೂಮಿನಿಯಮ್ ತಟ್ಟೆಯಲ್ಲಿ ಕರಿದ ಅವಲಕ್ಕಿ, ಹಸಿರು ಸಿಪ್ಪೆಯ ಮಾಗದ ಬಾಳೆಯಣ್ಣು ಮತ್ತು ಕೆನೆ ತೇಲುತ್ತಿರುವ ತಣ್ಣಗಿನ ಚಹವಷ್ಟೇ ಸಿಗಬಹುದೆಂಬ ಅಪೇಕ್ಷೆಯಿಂದ ಹೋದರೆ ಮನೆಯ ಯಜಮಾನರು ಮಾತ್ರ ಮೂವತ್ತೆರಡು ಕೋರ್ಸುಗಳ ಚೀನೀ ಭೋಜನವನ್ನು ತಯಾರು ಮಾಡಿಟ್ಟಿದ್ದರೆ ಅಲ್ಲಿ ಹೋಗುವವನ ಸ್ಥಿತಿ ಹೇಗಾಗಬೇಡ? ಆ ರಾತ್ರಿ ನನ್ನ ಸ್ಥಿತಿಯೂ ಥೇಟ್ ಹಾಗೇ ಆಯಿತು.

ಲೋಹಿಯಾಗೆ ಆ ಜಪಾನಿ ಗೇಶಾ 'ನನಗೆ ಈ ವರೆಗೆ ಭೆಟ್ಟಿಯಾದ ಜನರಲ್ಲಿ ನೀವು ನನಗೆ ಎಲ್ಲರಿಗಿಂತ ಅದ್ಭುತವಾಗಿ ಕಂಡಿದ್ದೀರಿ!' ಎಂದು ಅಂದಿದ್ದಳಂತೆ. ಈ ಮಾತನ್ನೆ ನಾನೂ ಇಂದಿಗೂ ಆ ರಾತ್ರಿಯ ನೆನಪಾದೊಡನೆ ಈ ಮನುಷ್ಯನಿಗೆ ಅನ್ನುತ್ತೇನೆ. ಚಿತ್ರ, ಶಿಲ್ಪ, ಸಾಹಿತ್ಯ, ನಾಟ್ಯ, ಇತಿಹಾಸ, ತತ್ವಜ್ಞಾನ –ಲೋಹಿಯಾ ಅವರ ಜೀವನವನ್ನು ಸಮೃದ್ಧಗೊಳಿಸುವ ಅವೆಷ್ಟು ವಿಷಯಗಳು! ಇವೆಲ್ಲವುಗಳ ಜೊತೆ ಅವರ ಮಾತಿನ ಗಾರುಡಿ! ಅವರು ಆ ರಾತ್ರಿಯನ್ನು ತಮ್ಮ ರಸಿಕತೆಯಿಂದ ಬೆಳಗಿಸಿದರು. ಅನುಭವದ ಅಮೃತ ಕುಂಭಗಳು ಬರಿದಾಗುತ್ತಿದ್ದವು. ಅವರು ಪ್ರಶ್ನೆಗಳೆತ್ತಿ ಕೆರಳಿಸುತ್ತಿದ್ದರು. ಗೇಲಿ ಮಾಡುತ್ತಿದ್ದರು. ಒಂದೇ ಕ್ಷಣದಲ್ಲಿ ಅವರು ನನ್ನನ್ನು ನಿಸ್ಸಂಕೋಚ–ನಿರಾಂತಕವನ್ನಾಗಿ ಮಾಡಿಬಿಟ್ಟಿದ್ದರು. ಗಂಟೆ, ಎರಡು ಗಂಟೆಗಳ ನಂತರ ಅಲ್ಲಿಗೆ ಬಂದವರಿಗೆ ನಾವಿಬ್ಬರೂ ಹಿಂದೊಮ್ಮೆ ಒಂದೇ ಓಣಿಯಲ್ಲಿ ಗೋಲಿ ಆಟವಾಡುವ ಗೆಳೆಯರಾಗಿದ್ದಿರಬಹುದೆಂದು ಅನಿಸಿರಲು ಸಾಕು. ಇದು ಲೋಹಿಯಾ ಅವರ ಮಾಟ. ಅವರು ತಾವೇ ಅಂತರವನ್ನು ಕಡಿದು ಹಾಕುತ್ತಾ ನಿಮ್ಮ ಸಮೀಪ ಬರುತ್ತಿದ್ದರು. ದಡಪಟಿಸುವ ಕಷ್ಟವನ್ನು ನಿಮಗೆ ಕೊಡುತ್ತಿರಲಿಲ್ಲ. ಆ ರಾತ್ರಿ ಈ ಹಿರಿದಾದ ಮನುಷ್ಯನ ದರ್ಶನ'ವು ನನಗಾಯಿತು.

ಲೋಹಿಯಾ ಅವರಲ್ಲಿಯ 'ಕವಿ'ಯನ್ನು ನಾನು ಕಂಡೆ. ದೀದಾವರ' ನನ್ನು ಕಂಡೆ. ಈತ ಬಣ್ಣ, ರಸ, ಗಂಧ, ಸ್ಪರ್ಶ, ನಾದಗಳ ಇಷ್ಟು ಲೋಭಿಯಾಗಿರಬಹುದೆಂದು ನನಗೆ ಕಲ್ಪನೆ ಇರಲಿಲ್ಲ. ನಮ್ಮ ರಾಜಕೀಯ ಪುಢಾರಿಗಳ ಅರಸಿಕತ್ವವು ಹೊಗಳುವಂತಹದು. ತಮ್ಮ ಮಂತ್ರಿಪದ ಇಲ್ಲವೆ ಸಾದಾ ಎಂ.ಎಲ್.ಎ ಪದವನ್ನು ಮರೆತು ದೇವರ ದರ್ಶನವನ್ನು ತೆಗೆದುಕೊಳ್ಳುವದು ಕೂಡ ನಮ್ಮ ಎಷ್ಟೋ ರಾಜಕೀಯ ಮುಖಂಡರಿಗೆ ಸಾಧ್ಯವಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷರೆಂದು ಅವರಲ್ಲಿ ಕೆಲ ಜನರು ವೇದಿಕೆಯ ಮೇಲೆ ಕೂತಿದ್ದನ್ನು ನೋಡಿದಾಗ ನನ್ನಲ್ಲಿ ನಮ್ಮ ಮತ್ತು ನಮ್ಮ ಸಂಸ್ಕೃತಿಯ ಬಗೆಗೆ ಕರುಣೆ ಮೂಡುತ್ತದೆ. ಇಲ್ಲಿ ನೋಡಿದರೆ ಗಡಸು, ಅಸಭ್ಯ, ಜಗಳಗಂಟ ಇಂತಹ ದೂಷಣೆಗಳಿಂದ ಅಲಂಕೃತನಾಗಿದ್ದ ಮನುಷ್ಯ ಭಾರತೀಯ ಶಿಲ್ಪದ ಮೇಲೆ ಮಾತಾಡುತ್ತಿದ್ದ. ಯುರೋಪಿಯನ್ ಚಿತ್ರಕಲೆಯ ಸೂಕ್ಷ್ಮ ಅಂಶಗಳನ್ನು ವಿಶದಪಡಿಸುತ್ತಿದ್ದ. ಗಯಟೆಯ ವಾಙ್ಮಯದಲ್ಲಿನ ಹಿರಿತನದಿಂದ ಮೈಮರೆಯುತ್ತಿದ್ದ. ಭಾರತೀಯ ಲೋಕವಾಙ್ಮಯದಲ್ಲಿಯ ಆತ್ಮೀಯತೆಯಿಂದ ಭಾವಪರವಶನಾದಂತೆ ಮಾತಾಡುತ್ತಿದ್ದ. ಇದೆಲ್ಲ ಸ್ನೇಹಭಾವನೆಯಿಂದಲೇ ನಡೆದಿತ್ತು. ಗುರುಶಿಷ್ಯ ಸಂಬಂಧದಲ್ಲಿ ಅಲ್ಲ. ಶಿಕ್ಷಣವು ಕೊಡುವವನ ಮತ್ತು ಸ್ವೀಕರಿಸುವವನ ಗೆಳೆತನದ ಪಾತಳಿಗೆ ಬಂದಾಗಲೇ ಅದು ಈ ಹೃದಯದಿಂದ ಆ ಹೃದಯಕ್ಕೆ ದಾಟುತ್ತದೆ. ಬೌದ್ಧಿಕಗಳು ರೂಕ್ಷ. ಹಾರ್ದಿಕಗಳು ಬೇಕು. ಅವುಗಳಲ್ಲಿ ಜ್ಞಾನವು ದ್ರವಿಸಿ ಮನಸ್ಸಿನಲ್ಲಿ ಇಳಿದು ಬರುತ್ತದೆ. 'ಕಾವ್ಯಶಾಸ್ತ್ರವಿನೋದನಿ' ಎಂಬಲ್ಲಿಯ ವಿನೋದದ ಮಹತ್ವದ ಸ್ಥಾನವು ಇಂತಹ ಸಮಯದಲ್ಲಿ ಅರ್ಥವಾಗುತ್ತದೆ. ಕಾವ್ಯ ಶಾಸ್ತ್ರಗಳು ಹಣೆಗೆ ಗಂಟುಗಳನ್ನಿಟ್ಟು ನಡೆದಾಗ ಆ ಚರ್ಚೆಗಳಿಂದ ಜ್ಞಾನಪ್ರದರ್ಶನದ ಅಹಂಕಾರವು ಹೊರಬರುವದು ಕಾಣುತ್ತದೆ. ಇವೆಲ್ಲ ನಗುನಗುತ್ತ ಸಾಗಿದಾಗಲೇ ಆ ಚರ್ಚೆಗಳು ರುಚಿಕರವಾಗುತ್ತವೆ. ಸುವಾಸಿಕವಾಗುತ್ತವೆ.

ಡಾಕ್ಟರರು ವಿದ್ವಾಂಸರಾಗಿದ್ದರು. ಆದರೆ 'ಭಾರಿ' ಪಂಡಿತರಾಗಿರಲಿಲ್ಲಿ ಭಾರಿತನವು ಮೇದವೃದ್ಧಿಯ ಲಕ್ಷಣ. ಅರಗದ ಅನ್ನದಿಂದ ಮೇದ ಉಂಟಾಗುತ್ತದೆ. ಅರಗದ ವಿದ್ವತ್ತೆಯಿಂದ ಪಾಂಡಿತ್ಯದ ಜಡತ್ವ ಒದಗುತ್ತದೆ.

ಪಾಂಡಿತ್ಯವು ಅರಗಿದಾಗ ಪಂಡಿತನೂ ಕೂಡ ಎಷ್ಟು ಸಹಜವಾಗಿ ವ್ಯವಹರಿಸುತ್ತಾನೆಂಬುದು ಡಾಕ್ಟರ್‌ರಂತಹರೊಡನೆ ಮಾತಾಡಿದಾಗಲೇ ಅರಿವಾಗುತ್ತದೆ. ಸುತ್ತಲಿನ ಸಮುದಾಯವು ಸಣ್ಣದೇ ಇರಲಿ ಅಥವಾ ಪ್ರಚಂಡ ಸಭೆಯೇ ಇರಲಿ ಲೋಹಿಯಾ ಅವರ ಅಲ್ಲಿಯ ನಡೆನುಡಿಗಳಲ್ಲಿಯ ಸಹಜತೆಯು ವಿಲಕ್ಷಣವಾಗಿರುತ್ತಿತ್ತು. ಇನ್ನೊಬ್ಬರು ಹೇಳುವದನ್ನು ಕೇಳುವಾಗ ಅತ್ಯಂತ ಗಂಭೀರತೆಯಿಂದ ಎಲ್ಲ ಶಕ್ತಿಗಳೂ ಶ್ರವಣೇಂದ್ರಿಯದಲ್ಲಿ ಒಂದುಗೂಡಿದಂತೆ ಕೇಳುತ್ತಿದ್ದರು. ಮಾತಾಡಲು ಆರಂಭ ಮಾಡಿದೊಡನೆ ಬಿಚ್ಚು ಬಯಲಾಗುತ್ತಿದ್ದರು.

ದಿಲ್ಲಿಗೆ ನಾನು ನಾಟ್ಯಪ್ರಯೋಗಗಳನ್ನು ಮಾಡಲು ಹೋಗಿದ್ದೆ, ಲೋಹಿಯಾ ಅವರು ಪ್ರಯೋಗಗಳನ್ನು ನೋಡಿದರು. ನನ್ನನ್ನೂ. ನನ್ನ ಎಲ್ಲ ಸಂಗಡಿಗ ಕಲಾವಿದರನ್ನು ತಮ್ಮ ಮನೆಗೆ ಚಹಪಾನಕ್ಕಾಗಿ ಕರೆದರು. ಅಲ್ಲಿ ಹೋದರೆ. ದಿಲ್ಲಿಯಲ್ಲಿಯ ಸಾಹಿತ್ಯ ಮತ್ತು ಕಲಾಕ್ಷೇತ್ರಗಳಲ್ಲಿಯ ನೂರು-ನೂರೈವತ್ತು ಹೆಸರಾದ ಜನರು ಹಾಜರಾಗಿದ್ದರು. ಮನೆಯ ಮುಂದಿನ ಹುಲ್ಲುಮೈದಾನದಲ್ಲಿ ಸಮೂಹ ನೆರೆದಿತ್ತು. ಈ ಸನ್ಯಾಸಿಯ ಮನೆಯಲ್ಲಿಯ, ಗೃಹಸ್ಥಾಶ್ರಮಿಯನ್ನೂ ನಾಚಿಸುವಂತಹ ಅತಿಥ್ಯವನ್ನು ನಾನೆಂದಿಗೂ ಮರೆಯಲಾರೆ. ಆ ಎಲ್ಲ ಬಂಧುಗಳ ಅದರೋಪಚಾರಗಳನ್ನು ಸ್ವತಃ ಮಾಡುತ್ತಿದ್ದರು. ಅಗ್ರಹದಿಂದ ಸಾಹಿತ್ಯ ಮತ್ತು ಇನ್ನಿತರ ಕಲೆಗಳಿಗೆ ಸಂಬಂಧಿಸಿದ ಚರ್ಚೆಗಳು ನಡೆದಿದ್ದವು. ರಾಜಕಾರಣದ ಮೇಲೆ ವಾದವಿವಾದಗಳು ಜರುಗಿದ್ದವು. ವಿವಿಧ ಮತಗಳ ಜನರು ಆ ಸಮಾರಂಭದಲ್ಲಿ ಪಾಲುಗೊಂಡಿದ್ದರು. ಲೋಹಿಯಾ ಅವರ ರಾಜಕೀಯ ಪಕ್ಷದೊಡನೆ ನನಗೆಷ್ಟೂ ಸಂಬಂಧವಿಲ್ಲ. ಅದು ಇರಬೇಕೆಂದು ಅವರು ಎಂದಿಗೂ ತಪ್ಪಿಕೂಡ ಸೂಚಿಸಲಿಲ್ಲ. ಅವರ ಕಲಾಭಿರುಚಿಯು ಉಚ್ಚಮಟ್ಟದ್ದಿತ್ತು. ಆದ್ದರಿಂದ ಕಲಾವಿದರನ್ನು ಪಕ್ಷದ ಪ್ರಚಾರದ ಕಿನ್ನರಿ ಬಾರಿಸಲು ಹಚ್ಚುವ ಕಲಾಹೀನ ವಿಚಾರವು ಅವರ ಮನಸ್ಸಿಗೆ ಸೋಕುವದೂ ಶಕ್ಯವಿರಲಿಲ್ಲ. ಅವರೊಂದಿಗೆ ಆದ ಭೆಟ್ಟಿಯಿಂದಾಗಿ ನನಗೆ ಮೇಲಿಂದ ಮೇಲೆ ಅನಿಸುವುದೇನೆಂದರೆ ಈ ಬಹಿರಂಗದಲ್ಲಿ ಒರಟಾದ ಮನುಷ್ಯನ ಅಂತರ್ಯದಲ್ಲಿಯ ಸೌಂದರ್ಯಾಭಿಜ್ಞತೆಯ ದರ್ಶನವನ್ನು ಅಧಿಕಾಧಿಕ ಜನರಿಗೆ ಮಾಡಿಕೊಡಬಹುದಾದರೂ ಹೇಗೆ? ಈ ಪುಸ್ತಕದ ಮೂಲಕ ಸ್ವಲ್ಪಮಟ್ಟಿಗೆ ಆ ಯೋಗ ಬಂದಿದೆ.. ಆದರೆ ಅದೆಷ್ಟು ತಡವಾಗಿ!

ಉತ್ತಮ ಕಲಾನಂದಕ್ಕಾಗೆ ಹಾತೊರೆಯುವ ಲೋಹಿಯಾ, ಮಾನವತೆಯಿಂದ ತುಂಬಿ ತುಳುಕುವ ಲೋಹಿಯಾ, ತತ್ವಚಿಂತಕ ಲೋಹಿಯಾ, ಬುದ್ಧಿಜೀವಿ ಲೋಹಿಯಾ ಜೀವನಾಸಕ್ತ ಲೋಹಿಯಾ, ಹೀಗೆ ಸರ್ವಸಾಮಾನ್ಯ ಜನರಿಂದ ಮರೆಯಾಗಿದ್ದ ಅವರ ಅಂತರಂಗದ ವಿವಿಧ ರೂಪಗಳೂ ಮುಂದಿನ ಪುಟಗಳಲ್ಲಿ ಕಾಣಬಹುದು. ಈ ಲೇಖನಗಳಿಗೆ ರಾಜಕಾರಣದ ಮಧ್ಯೆ ಬಿಡುವು' ಎಂದು ಅವರು ಪರಿಹಾಸದಿಂದ ಹೇಳಿದ್ದಾರೆ. ಇದು ಅವರ ಭಾಷೆಯಲ್ಲಿ ಒಂದು ಪ್ರಕಾರದ 'ಹುಡುಗಾಟಿಕೆ' ಆಗಿದೆ. ಲೋಹಿಯಾ ಅವರೆಂದಿಗೂ ' ಮುಖವಾಡವನ್ನು ಧರಿಸಲಿಲ್ಲ; ಆದ್ದರಿಂದ ಅದನ್ನಿಳಿಸಿ ಬದಿಗಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವರ ಎಲ್ಲ ಕಾರುಭಾರು ಬಟ್ಟಬಯಲು. ಅವೆಷ್ಟೋ ಪರದೇಶೀಯ ಸಂಸ್ಕಾರಗಳನ್ನು ಅರಗಿಸಿಕೊಂಡ ಈ ಮನುಷ್ಯ ಅಪ್ಪಟ 'ದೇಸಿ'ಯಾಗಿದ್ದನು. ಒಳಗೆ-ಹೊರಗೆ ಬೇರೆಯಾಗಿರಲಿಲ್ಲ. ಮನಸ್ಸಿನಲ್ಲಿ ಬಂದದ್ದು, ಮುಖದಿಂದ ಹೊರಬಿತ್ತು-ಹೀಗಿತ್ತು ಅವರ ರೀತಿ. ಅಂದ ಬಳಿಕ ಆ ಪ್ರಹಾರ ನೆಹರೂ ಅವರ ಮೇಲೆಯೋ, ಇನ್ನುಳಿದ ಬೇರೆ ಯಾರ ಮೇಲೆಯೋ ಎನ್ನುವುದರ ಪರಿವೆ ಅವರಿಗೆ ಇರಲಿಲ್ಲ. ಹಟತೊಟ್ಟು ಪ್ರಿಯವಾಗುವ ಹಂಬಲ ಇರದವನಿಗೆ 'ಅಪ್ರಿಯ'ನಾಗುವ ಭೀತಿ ಏಕೆ?

ಸ್ತ್ರೀಸೌಂದರ್ಯಕ್ಕೆ ಸುಮ್ಮನೆ ಉಚ್ಚ ಉದಾತ್ತತೆಯ ಸುಳ್ಳು ಮಡಿವಸ್ತ್ರವನ್ನು ಉಡಿಸುವ ಪ್ರಯತ್ನವನ್ನು ಅವರೆಂದಿಗೂ ಮಾಡಲಿಲ್ಲ. ಝುಗಝುಗನೆ ಮಿನುಗುವ ಸೌಂದರ್ಯ ಮತ್ತು ಮನೆಯ ಒಳಂಕಣದಲ್ಲಿ ಉರಿಯುಮವ ಮಂದ ದೀಪದ ಬತಿಯಂಥೆ ಮಿಣಮಣಸುವ ಸೌಂದರ್ಯ ಮತ್ತು ಮನೆಯ ಒಳಾಂಕಣದಲ್ಲಿ ಉರಿಯುವ ಮಂದ ದೀಪದ ಬತ್ತಿಯ ಮಿಣಮಿಣಸುವ ಸೌಂದರ್ಯ ಇವುಗಳಲ್ಲಿಯ ವ್ಯತ್ಯಾಸವನ್ನು ಅವರು ಅರಿತವರಾಗಿದ್ದರು. ಅಮೇರಿಕೆಯಲ್ಲಿ ಒಂದು ಭಾಷಣದ ಪ್ರಸಂಗದಲ್ಲಿ ಆ ಅಮೇರಿಕನ್ ಹೆಂಗಸರಿಗೆ, ಅಮೇರಿಕನ್ ಹೆಣ್ಣು ಹೇಗೆ ರಾಜಕನ್ಯೆಯಂತೆ ಥಳಥಳಿಸುತ್ತಾಳೆ ಎಂದು ಹೇಳಿದರು. ಮತ್ತು ಆ ಸಂದಣಿಯಲ್ಲಿ ನಟರಾಜ ವಶೀ ಅವರ ಪತ್ನಿ ಅವರ ಕಣ್ಣಿಗೆ ಬಿದ್ದಳು. ರಾಜಕನ್ಯೆಯರ ಆ ಬೆಡಗಿನ ಸಮಾರಂಭದಲ್ಲಿ ಸೌಮ್ಯ, ಶೀತಲವಾದ ಸೌಂದರ್ಯವು ಅವರಿಗೆ ಕಂಡಿತು. ಆಗ ಒಮ್ಮೆಲೇ ಅವರು ಆ ಅಮೇರಿಕನ್ ಹೆಂಗಸರನ್ನುದ್ದೇಶಿಸಿ, "ನೀವು ರಾಜಕನ್ಯೆಯರು ನಿಜ. ಆದರೆ ನಮ್ಮ ಭಾರತೀಯ ಸ್ತ್ರೀಯರು ದೇವಕನ್ಯೆಯವರಂತೆ ಸುಂದರವಾಗಿರುತ್ತಾರೆ." ಎಂದರು. ನಮ್ಮ ಹೊಲಗದ್ದೆಗಳಲ್ಲಿ ಕಷ್ಟಪಡುವ 'ವಲ್ಕಲೇನಾಪಿ ತನ್ವೀ' ಎಂಬಂತೆ ಕಾಣುವ ನೂರಾರು ಕೃಷಿಕನ್ಯೆಯರು, ಗಿರಿಜಾ, ಮತ್ಸಗಂಧಾ ಇವರೆಲ್ಲರೂ ಯಾರ ಕಣ್ಮುಂದಿನಿಂದ ಥಟ್ಟನೆ ಹಾಯ್ದು ಹೋಗಬಹುದೋ ಅಂತಹವರಿಗೆ ಮಾತ್ರ ಡಾಕ್ಟರರ ಈ ಸೌಂದರ್ಯ ಚಿಕಿತ್ಸೆಯ ಮರ್ಮವು ಸಹಜವಾಗಿ ತಿಳಿಯಬಹುದು.

ಅಸಾಮಾನ್ಯ ಅನುಭೂತಿಗಳ ಅಪಾರ ಆಕರ್ಷಣೆ ಇದ್ದ ಮನುಷ್ಯ ಈತ ಅಮೇರಿಕೆಗೆ ಹೋಗುವಾಗ ಗ್ರೇಟಾ ಗಾರ್ಬೋ ಮತ್ತು ಐನ್‌ಸ್ಟೀನ್ ಅವರನ್ನು ಭೆಟ್ಟಿಯಾಗುವ ತೀವ್ರ ಇಚ್ಛೆಯನ್ನು ಮನಸ್ಸಿನಲ್ಲಿಟ್ಟು ಹೋಗಿದ್ದ. ಎಲ್ಲ ಬದಿಗಳಿಂದಲೂ ತನ್ನ ಬಾಳನ್ನು ಪರಿಪೂರ್ಣವನ್ನಾಗಿ ಮಾಡಬೇಕುನ್ನುವ ಹಠದ ಬೇರೆ ಇನ್ನಾವ ಉದಾಹರಣೆ ಬೇಕು? 'ಉತ್ಕಟ ಭವ್ಯವೆಲ್ಲವನ್ನೂ ಸ್ವೀಕರಿಸಬೇಕು, ಸಪ್ಪೆಯಾದುದನೆಲ್ಲ ತ್ಯಜಿಸಬೇಕು' ಎಂಬ ಸಮರ್ಥ ರಾಮದಾಸರ ಈ ಮಾತುಗಳಲ್ಲಿಯೇ ಅವರ ವ್ಯಕ್ತಿಮತ್ವದ ಸಾರವಿದೆ. ಖಾಸಗಿ ಇಲ್ಲವೆ ಸಾರ್ವಜನಿಕ ಜೀವನದಲ್ಲಿಯ ನಿಸ್ಸತ್ವತೆಯಿಂದ ಅವರು ಕೆರಳುತ್ತಿದ್ದರು. ದೇವರು ಮತ್ತು ದೈವ, ಎರಡೂ ದುರ್ಬಲರಿಗೆ ಘಾತಕವಾಗಿರುತ್ತವೆ. ರಾಜಕಾರಣದ ಅರ್ಥವನ್ನು ಈಗ ಕೇವಲ 'ಮುಚ್ಚುಮರೆಸುವ'ದರಲ್ಲೇ ಕಂಡುಕೊಳ್ಳುವ ಇಂದಿನ ಕಾಂಗ್ರೆಸ್‌ದೊಂದಿಗೆ ಇಂತಹ ಮನುಷ್ಯನು ಹೇಗೆ ಸರಿಹೊಂದುವವನು? ಲೋಹಿಯಾ ಅವರ ಸ್ವಭಾವಕ್ಕೆ ಹೊಸ ಸಾಮಾಜಿಕ ಪರಿವರ್ತನೆಗಳು ಹಿತಕರವಾಗುವಂತಹವು. ಆದರೆ ಮೂಲಧಾರ ಮಾತ್ರ ಸಂಪೂರ್ಣ ಭಾರತೀಯ. "ರಾಮ, ಕೃಷ್ಣ ಮತ್ತು ಶಿವ ಎಂದರೆ ಭಾರತೀಯರಿಗೆ ಬಿದ್ದ ಪರಿಪೂರ್ಣತೆಯ ಕನಸುಗಳು." ಇಂತಹ ಸೂತ್ರಮಯ ವಾಕ್ಯವು ಅಕಾರಣವಾಗಿ ಬರುವುದಿಲ್ಲ. ಈ ಲೇಖನದ ಕೊನೆಗಿರುವ ಅವರ ಪ್ರಾರ್ಥನೆಯಂತೂ ಸರಿಯಾಗಿ ವಿವೇಕಾನಂದರ ಸ್ಮರಣೆಯನ್ನು ತಂದುಕೊಡುತ್ತದೆ. ಬಾಲಕನೊಬ್ಬ ಭಾರತ ಮಾತೆಯ ಕಡೆಯಿಂದ ಆರ್ತತೆಯಿಂದ ಕೊಡುಗೆಯನ್ನು ಬೇಡುವ ವ್ಯಾಕುಲ ಲೋಹಿಯಾರವರ ದರ್ಶನವು ಅಲ್ಲಿ ಆಗುತ್ತದೆ.

"ತಾಯಿ ಭಾರತಿಯೇ ನಮಗೆ ಶಿವನ ಮತಿಯನ್ನು ಕೊಡು ಕೃಷ್ಣನ ಅಂತಃಕರಣವನ್ನು ಕೊಡು, ರಾಮನ ಕೃತಿಶಕ್ತಿಯನ್ನು ಕೊಡು. ಅಪರಿಮಿನ ಮನಸ್ಸನ್ನೂ ಕೊಟ್ಟು ನಮ್ಮನ್ನೂ ರೂಪಿಸು. ಉನ್ಮೇಷಶಾಲಿಯಾದ ಹೃದಯವನ್ನು ಕೊಡು. ಆದರೆ ಬದುಕಿನಲ್ಲಿ ಮಾತ್ರ ತಾಳ್ಮೆ-ಮಿತಿಗಳನ್ನು ದಯಪಾಲಿಸು." ಉಪನಿಷತ್ ಕಾಲದಲ್ಲಿನ ಋಷಿಗಳಾದರೂ ಬೇರೆಯ ಏನನ್ನು ಬೇಡಿದ್ದರು? ಈ ಕಳವಳ ಸಂತರದು, ರಾಜಕೀಯ ಮುಖಂಡನದಲ್ಲ. ಭಾರತೀಯರ ಸಾಂಸ್ಕೃತಿಕ ಪರಂಪರೆಯು ರಾಮ, ಕೃಷ್ಣ ಮತ್ತು ಶಿವ ಇವರಿಂದ ಬಂದುದು ಎಂದು ಹೇಳುವಾಗ ಲೋಹಿಯಾ ಅವರಿಗೆ ಸಮಾಜವಾದ ಅಡ್ಡಬರುವುದಿಲ್ಲ. ಏಕೆಂದರೆ ಅವರಿಗೆ ರಾಮ, ಕೃಷ್ಣ ಮತ್ತು ಶಿವ ಈ ಜೀವನದ ಬಗೆಗಿರುವ ಮೂರು ದೃಷ್ಟಿಕೋನಗಳಲ್ಲಿನ ವಿಶ್ವಾತ್ಮಕತೆಯು ಕಂಡುಬರುತ್ತದೆ. ಹಸಿ ಸೆಕ್ಯೂಲರ್ ಜನರಿಗೆ ಇವು ಹಿಂದು ದೇಶದ ಹೆಸರುಗಳೆಂದು ಅನಿಸಬಹುದು. ಅವುಗಳನ್ನು ಹೀಗೆ ಜಾಹೀರು ರೀತಿಯಿಂದ ಉಚ್ಚರಿಸುವದೇ? ಶಿವ ಶಿವಾ, ರಾಮ ಗೋವಿಂದಾ!

ಲೋಹಿಯಾ ಅವರು ಭಾರತೀಯ ತತ್ವಜ್ಞಾನದಲ್ಲಿಯ ಕರ್ಮಯೋಗವನ್ನು ಆಚರಿಸಿ ತೋರಿಸಿದರು. ಕಬೀರನ ಒಂದು ಪದ್ಯದಲ್ಲಿ ಅವನು. "ತನ್ನ ಮನೆಯನ್ನು ಸುಟ್ಟು, ಅದರ ವಿಭೂತಿಯನ್ನು



ತಮ್ಮ ಪ್ರಿಯ ಶಿಷ್ಯ
ಕಿಷನ್ ಪಟ್ನಾಯಕ್‌ರೊಂದಿಗೆ

ಬಳಿದು ತಯಾರಾಗಿದ್ದವನೇ ನನ್ನ ಬೆನ್ನ ಹಿಂದೆ ಬರಬೇಕು" ಎಂದು ಘೋಷಿಸಿದ್ದನು. ಮಹಾತ್ಮ ಗಾಂಧಿಯವರ ಹಿಂದೆ ಆ ಕಾಲದಲ್ಲಿ ಅಸಂಖ್ಯ ಉಗ್ರತಪಸ್ವಿಗಳು ಹೊರಟರು. ಸತ್ತೆಯ ಮೇನಕೆ–ಊರ್ವಶಿಯರು ಅವುಗಳಲ್ಲಿಯ ಅನೇಕರ ತಪೋಭಂಗವನ್ನು ಮಾಡಿದರು. ವಿನೋಬಾ, ಜಯಪ್ರಕಾಶ, ಸಾಣೆ ಗರೂಜಿ, ಯುಸುಫ್ ಮಹೆರ ಅಲಿ, ಅಣ್ಣಾಸಾಹೇಬ ಸಹಸ್ರಬುದ್ಧೇ ಇವರಂತಹ ಅಪವಾದ ಸ್ವರೂಪ ತಪಸ್ವಿಗಳು ತಮ್ಮ ವ್ರತದಿಂದ ದೂರ ಸರಿಯಲಿಲ್ಲ. "ಸಾಧನಾನಾಮ್ ಅನೇಕತಾ" ಇರಬಹುದು; ಆದರೆ ತಪಸ್ಸು ಮುಂದುವರೆಯಿತು.

ಲೋಹಿಯಾ ಅವರು ಇಂತಹ ಯಾತ್ರೆಯಲ್ಲಿಯ ಪಥಿಕರು. ಭಯವಿರಹಿತ ಚಿತ್ತ ಸ್ವತಂತ್ರವಾಯಿತು. ಗೋವೆಯ ಸಂಕಟ ಚುಚ್ಚುತ್ತಿತ್ತು. ಆ ಪಾಶವಿ ಸತ್ತೆಯ ವಿರುದ್ಧ ಈ ಒಬ್ಬನೇ ಒಬ್ಬ ಮನುಷ್ಯನು ತೋಳನ್ನು ತಟ್ಟಿ ಎದುರಾದನು. ಗೋವೆಯ ಚಿಕ್ಕಪುಟ್ಟ ಮಕ್ಕಳೆಲ್ಲರೂ ಬಾಕಿಬಾಬ ಬೋರಕರ್‌ರ ಹಾಡನ್ನು ಹಾಡುತ್ತಾ ಸಿಟಿದು ನಂತರು, "ಗೋಯಾಂತ್ ಲೋಹಿಯಾ ಆಯ್ಲೋರೇ" (ಗೋವೆಗೆ ಲೋಹಿಯಾ ಬಂದರೋ ಬಂದರು!) "ಗೋವಿಂದಾ ಬಂದನೋ ಬಂದಾ, ಗೋಕುಲದಲ್ಲಿ ಆಯ್ತು ಆನಂದಾ " ಭೀತಿಯು ತೊಲಗದಿದ್ದರೆ ಆನಂದವಾಗುಬುದಿಲ್ಲ. ಹೊಟ್ಟೆಯ ಪಾತ್ರೆಯಲ್ಲಿ ಭೀತಿ ಇದ್ದರೆ ಆನಂದವು ಹುಳಿತಾಗುತ್ತದೆ. ಕಂಸನ ಭಯ ಹೋದಾಗಲೇ ಗೋಕುಲದಲ್ಲಿ ಆನಂದವಾಯಿತು. ಪೋರ್ಚುಗೀಸರ ಭಯ ಕಳೆದೊಡನೆ ಗೋವೆಯಲ್ಲಿ ಆನಂದವಾಯಿತು. ಇಂದಿಗೆ ಪಣಜಿಯ ಬಂದರದ ಮೇಲೆ ಸಿಂಧುಸಾಗರದತ್ತ ದೃಷ್ಟಿಯನ್ನಿಟ್ಟ ವಿಗ್ರಹವನ್ನು ಸ್ಥಾಪಿಸಬೇಕು, ಈ ಅಭಯಕಾರಿ ರಾಮಮನೋಹರ ಲೋಹಿಯಾ ಅವರದು! ಆದರೆ ಈ ಕೆಲಸವನ್ನು ಮಾಡುವವರು ಯಾರು? ಸಾರ್ವಜನಿಕ ಸ್ಮೃತಿಯ ಅತ್ಯಂತ ಹೆಳವಾಗಿರುತ್ತದೆ! ಲೋಹಿಯಾ ಅವರು ಭಯವಿಹೀನ, ವಾಸನಾರಹಿತ ಮತ್ತು ನೈರಾಶ್ಯವಿರದ ಮನಸ್ಸೇ ಯೋಗ್ಯ ವಿಚಾರ ಮಾಡುತ್ತದೆ ಎನ್ನುತ್ತಾರೆ. ಸತ್ಯದ ಉಪಾಸಕನ ಸಾಧನತ್ರಯಿ ಇದು. ಲೋಹಿಯಾ ಅವರ ಕಣ್ಣುಗಳಲ್ಲಿ ಈ ತರದ ನಿರ್ಭಯತೆ ಇತ್ತು. ಈ ಅಸಂಗ್ರಹ ವೃತ್ತಿಯ ಮನುಷ್ಯನು ಬಿಟ್ಟು ಹೋದ ಆಸ್ತಿ ಏನಾಗಿತ್ತು? ಐದೇಳು ಟ್ರಂಕುಗಳ ತುಂಬ ಪುಸ್ತಕಗಳು ಮತ್ತು ಅಸಂಖ್ಯ ಗೆಳೆಯರುಃ. ಸಂಗ್ರಹವೇ ಇರದೆಡೆಯಲ್ಲಿ ಅಪಹರಣದ ಭೀತಿ ಹೇಗರಲು ಸಾಧ್ಯ?. ಆದ್ದರಿಂದಲೇ ದಿಲ್ಲಿಯಲ್ಲಿಯ ಸತ್ತೆಗಾಗಿ ಮತ್ತು ಶ್ರೀಮಂತಿಕೆಗಾಗಿ ಹಾತೊರೆಯುವ ಸಂಧಿಸಾಧುಗಳು ಐತಿಹಾಸಿಕ ಕಾಲದಿಂದಲೂ ಇಂದಿನವರೆಗೆ ನಡೆದು ಬಂದ ಹೇಸಿಕೆ ಹುಟ್ಟಿಸುವ ಲೀಲೆಗಳನ್ನು ನೋಡಿ ಅವರೆಂದಿದ್ದಾರೆಃ "ಈ ನಗರಭವಾನಿ (ನಾಯಕಸಾನಿಯು ಗೆದ್ದವರ ಮುಂದೆ ತನ್ನ ಸ್ತನಗಳನ್ನು ಎಂದೆಂದಿಗೂ ಒಡ್ಡಿರುತ್ತಾಳೆ." ಭಿಕ್ಷಾಪಾತ್ರೆಯಲ್ಲಿ ಅನ್ನಧಾನ್ಯಗಳನ್ನು ಚೆಲ್ಲುವ ಪರದೇಶಿ ಚೆಲುವರ ಮುಂದೆ ಸಿಂಗರಿಸಿಕೊಳ್ಳಲಿಕ್ಕೆ ಈಕೆ ತನಗಾಗಿ ನೀರಿನಂತೆ ಹಣವನ್ನು ಸೂರೆ ಮಾಡುತ್ತಾಳೆ. ಆದರೆ ಲಕ್ಷಾವಧಿ ಭಾರತೀಯ ನಾಗರೀಕರು ಒಂದುಗೂಡುವ ತೀರ್ಥಕ್ಷೇತ್ರಗಳಲ್ಲಿ ಆಧುನಿಕ ಕಕ್ಕಸುಗಳ ಸೌಲಭ್ಯವೂ ಇಲ್ಲ. ಒಳ್ಳೆಯ ರಸ್ತೆಗಳೂ ಇಲ್ಲ. ದಿಲ್ಲಿಯಲ್ಲಿಯ ಚಾಣಕ್ಯಪುರಿ ಥಳಥಳನೆ ಹೊಳೆಯುತ್ತದೆ. ಆದರೆ ಈ ಸಾಕ್ಷಾತ್ ದೇವಪುರಿಗಳಲ್ಲಿ ಮಾತ್ರ ಉತ್ತಮ ಫ್ಲಶಿಂಗ್‌ದ ವ್ಯವಸ್ಥೆ ಮಾಡಬೇಕು, ಉಳಿಯಲಿಕ್ಕೆ ಭವ್ಯ ಹೋಟೆಲುಗಳನ್ನು ಕಟ್ಟಬೇಕು, ಆಧುನಿಕ ಸೌಕರ್ಯಗಳ ಲಾಭವು ನಮ್ಮ ಬಡ ಜನತೆಗೂ ಸಿಗಬೇಕು ಎಂಬ ಚಿಂತೆ, ಕರಿ ಶೇಠಜಿಗಳನ್ನು ರಮಿಸುವ ವಾರಾಂಗನಾ ಸಂಸ್ಕೃತಿಯ ಜೋಪಾಸನೆಯನ್ನು ಮಾಡುತ್ತಿರುವ ದಿಲ್ಲಿಗೆ ಕಾಡುವುದಿಲ್ಲ. ಕಾರಣವೇನೆಂದರೆ ದಿಲ್ಲಿಯು ಇಂದಿಗೂ ಮೊಗಲ್‌ಕಾಲದ್ದೇ ರಾಜಧಾನಿಯಾಗಿದೆ. ಅದು ಲೋಕಧಾನಿಯಾಗಿಲ್ಲ. ರಾಷ್ಟ್ರಪತಿಗಳ ಕೈಯ್ಯಿಂದ ಶಾಲನ್ನು ತೊಡಿಸಿ ಶಾಲೆಯ ಮಾಸ್ತರರ ಸತ್ಕಾರವಾಗುತ್ತದೆ, ಆದರೆ ಅವರಿಗೆ ಉಳಿದುಕೊಳ್ಳಲು 'ಅಶೋಕ್ ಹೋಟೆಲ್' ಸರಕಾರಿಯಾಗಿದ್ದರೂ ಸಿಗುವುದಿಲ್ಲ. 'ಗುರು ಬ್ರಹ್ಮ'ರನ್ನು ಚಳಿಮಳೆಯಲ್ಲಿಯೂ ಹರಕಲು ಗುಡಾರಗಳಲ್ಲಿರಿಸಿ ಕಳಿಸಲಾಗುತ್ತದೆ. ಗೌರವರ್ಣದ ಅತಿಥಿಗಳ ಸುವ್ಯವಸ್ಥೆ ಮಾತ್ರ ಅಶೋಕ್ ಹೋಟೆಲಿನಲ್ಲಿ! ಏಕೆಂದರೆ ಅವರು ಖುಷಿಯಿಂದ ಕೊಡುವ ಬಕ್ಷೀಸು ಡಾಲರ್ಸ್ ಇಲ್ಲವೇ ರೂಬಲ್ಸ್‌ನಲ್ಲಿ. ಅಲ್ಲದೆ, ತೀರ್ಥಕ್ಷೇತ್ರಗಳಲ್ಲಿ ಲಕ್ಷಾವಧಿ ಭಾರತೀಯರು ಒಂದುಗೂಡಿದರೂ ಅವರೆಲ್ಲರೂ ಮುಖ್ಯವಾಗಿ ಹಿಂದೂ ಅಲ್ಲವೆ? ಸೆಕ್ಯೂಲರ್ ದೇಸದಲ್ಲಿಅವರಿಗಾಗಿ ಸೌಲಭ್ಯಗಳನ್ನು ಕಲ್ಪಿಸಿದರೆ ಕುಲಕ್ಕೆ ಕಳಂಕ ಹತ್ತೀತು! ಮಿಶನರಿ ಶಾಲೆಗಳಲ್ಲಿ ಆಧುನಿಕತೆಯ ಹೆಸರಿನಲ್ಲಿ ಪರೋಕ್ಷವಾಗಿ ರಾಷ್ಟ್ರದ್ರೋಹಿ ಪಾಠಗಳನ್ನು ಕಲಿಸುವ ಬಗ್ಗೆ ಬರೆಯಲು ಅವರು ಹಿಂಜರಿಯಲಿಲ್ಲ. ಜನರಲ್ಲಿಯ ಜಾತಿಭೇದದ ಬಗೆಗೆ ಅವರಿಗಿರುವ ಜಿಗುಪ್ಸೆಯನ್ನು ಅವರು ನಿಸ್ಸಂದಿಗ್ಧ ಶಬ್ದಗಳಲ್ಲಿ ವ್ಯಕ್ತಮಾಡಿದ್ದಾರೆ. ಸತ್ಯ ಹೇಳುವ ಮುಜುಗರವನ್ನು ಅವರೆಂದೂ ಅನುಭವಿಸಲಿಲ್ಲ. ಕಾರಾಗೃಹದ ಕಷ್ಟಗಳನ್ನು ಸಹಿಸುತ್ತಾ ಅವರಿಗೆ ಯೋಗಸಾಧನೆ ಅವಗತವಾಗಿತ್ತು. "ಶುಚಿನಾಂ ಶ್ರೀಮತಾಂ ಗೇಹೆ ಯೋಗ ಭ್ರಷ್ಟೋಭಿಜಾಯತೇ" ಎಂಬ ಗೀತೆಯಲ್ಲಿಯ ವಚನವು ಇಲ್ಲಿ ನೆನಪಾಗುತ್ತದೆ. ಶಂಕರಾಚಾರ್ಯ, ರಾಮಕೃಷ್ಣ, ಇವರಂತಹ ಪವಿತ್ರ ಮತ್ತು ಶ್ರೀಮದ್ ವಿಭೂತಿಗಳ ಮನೆಯಾಗಿದ್ದುದು ನಮ್ಮ ದೇಶ. ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ – ಹೀಗೆ ನಾಲ್ಕು ದಿಕ್ಕಗಳು ಒಂದೇ ಅದ್ವೈತ ತತ್ವಜ್ಞಾನದಿಂದ ಪ್ರಭಾವಿತಗೊಂಡ ಖಂಡಪ್ರಾಯವಾದ ಈ ಅಖಂಡ ಭಾರತ ಭೂಮಿಯಿಂದು, "ಯಮುನೆಯ ದಡದಲ್ಲಿ ಹುಟ್ಟಿದ ಕೃಷ್ಣನ ಅಂತ್ಯವು ದ್ವಾರಕಾನಗರಿಯ ಸಮುದ್ರದಂಡೆಯಲ್ಲಾದರೆ ಆ ಸಮುದ್ರ ತೀರದ ಮೇಲೆ ಜನ್ಮ ತಾಳಿದ ಮೋಹನದಾಸನ ದೇಹಾಂತವು ಯಮುನೆಯ ಅಂಚಿನಲ್ಲಿ" ಎನ್ನುವಂತಹ ಯೋಗವು ಪೂರ್ವ ಪಶ್ಚಿಮಗಳನ್ನು ಸಂಧಿಸಿಬಿಡುತ್ತದೆ. ಕೇರಳದಲ್ಲಿಯ ಕಾಲಡಿಯ ಒಬ್ಬ ಮಹಾನ್ ನಂಬುದ್ರಿ ಕಾಶ್ಮೀರದ ಶ್ರೀನಗರದಲ್ಲಿ ಶಂಕರನಿಗೆ ಸ್ತೋತ್ರಾಭಿಷೇಕವನ್ನು ಮಾಡಿ ಉತ್ತರ ದಕ್ಷಿಣಗಳನ್ನು ಜೋಡಿಸುತ್ತಾನೆ. ಇಂತಹ ಈ ದೇಶದ ಅಖಂಡತ್ವವನ್ನು ರಾಮ, ಕೃಷ್ಣ, ಶಿವ ಇವರ ಸಮನ್ವಯದ ತತ್ವಜ್ಞಾನದಿಂದ ಸಂಘಟಿಸಬೇಕಲ್ಲದೆ ಮತ್ತಾವುದರಿಂದ? ಮನಸ್ಸು ಒಂದಾಗಬೇಕಾಗುತ್ತದೆ ಮತ್ತು ಮನಸ್ಸನ್ನು ಒಂದುಗೂಡಿಸಬೇಕಾದರೆ ತತ್ವಜ್ಞಾನಕ್ಕಿಂತ ಬೇರೆ ಸಿಮೆಂಟಿಲ್ಲ. ಇದನ್ನು ಕಂಡು ಕೊಂಡವರ ಬದುಕು ನಿಜವಾದ ಅರ್ಥದಲ್ಲಿ ಶ್ರೀಮಂತವಾಗುತ್ತದೆ. ಎಲ್ಲ ಭಾರತೀಯರ ಜಡಯೆಯನ್ನು ಝಾಡಿಸಿ ಅವರನ್ನು ಒಂದೆಡೆಗೆ ತರುವ ಶಿವರಾಯನನ್ನು ಸಮರ್ಥರು ಶ್ರೀಮಾನ್ ಯೋಗಿ ಎಂದಿದ್ದರೆ; ಅದು ಈ ಅರ್ಥದಿಂದಲೇ.

ಇಂತಹ ಆಧ್ಯಾತ್ಮಿಕ ಮತ್ತು ಸೌಂದರ್ಯಸಂಚಯ ಮಾಡುವ ಶ್ರೀಮಂತಿಕೆಯ ಅಸಂಖ್ಯ ಪ್ರಮಾಣಗಳೂ ಮುಂದಿನ ಪುಟಗಳಲ್ಲಿ ಅಡಿಗಡಿಗೆ ಹರಡಿವೆ. ಶ್ರೀಪಾದರಾವ್ ಕೇಳಕರ್ ಮತ್ತು ಅವರ ಸಹಧರ್ಮಿಣಿ ಸೌ. ಇಂದೂತಾಯಿ ಕೇಳಕರ್ ಇವರು ಲೋಹಿಯಾ ಅವರ ಈ ವಿಚಾರಧನವನ್ನು ಮರಾಠಿಯಲ್ಲಿ ತಂದಿದ್ದಾರೆ. ಇಂಗ್ಲಿಷ್ ತಿಳಿಯದ ಮರಾಠಿ ವಾಚಕರಿಗೆ ಅವರು ಉಪಕಾರ ಮಾಡಿದ್ದಾರೆ. ಈ ಲೇಖನಗಳನ್ನು ನಾನು ಮೊದಲು ಇಂಗ್ಲಿಷ್‌ನಲ್ಲಿ ಓದಿದ್ದೆನು. ಡಾಕ್ಟರರ ಇಂಗ್ಲಿಷ್ ಶೈಲಿಯು ವಿಲಕ್ಷಣ ಆಕರ್ಷಕವಾಗಿದೆ. ಲೇಖನಗಳನ್ನೋದುವಾಗ ತಮ್ಮ ಭೇದಕ ಕಣ್ಣುಗಳಿಂದ, ತುಟಿಗಳನ್ನು ತುಂಟತನದಿಂದ ತಿರುಚುತ್ತ, ಆ ದಪ್ಪ ಹುಬ್ಬುಗಳನ್ನು ಬಗ್ಗಿಸುತ್ತ, ಹಿಗ್ಗಿಸುತ್ತ


ಮಾತಾಡುವ ಲೋಹಿಯಾ ಅವರು ಸತತವಾಗಿ ನನ್ನ ಕಣ್ಮುಂದೆ ಬರುತ್ತಿದ್ದರು. ಅತ್ಯಂತ ಪಾರದರ್ಶಕವಾದ ಅವರ ಲೇಖನ ಇದು.

ದಿಲ್ಲಿಯಲ್ಲಿ ಅವರೊಂದಿಗೆ ಆದ ನನ್ನ ಕೊನೆಯ ಭೇಟಿಯಲ್ಲಿ ಅವರು ನನ್ನ ಮನೆಗೆ ಬರುವ ವಚನ ನೀಡಿದ್ದರು. ಅವರು ಹೀಗೆ ಕೇವಲ ಪುಸ್ತಕದ ಬೀರಿನಲ್ಲಿ ಬಂದು ವಾಸಿಸಬಹುದು ಮತ್ತು ಬರಿಯೆ ಪುಟಗಳ ಹಿಂದಿನಿಂದಲೇ ಮಾತಾಡುತ್ತ ಇರಬಹುದೆಂಬುದು ನನ್ನ ಕನಸಿನಲ್ಲಿಯೂ ಬಂದಿರಲಿಲ್ಲ. ಈಗ ಅವರ ಸಹವಾಸದಲ್ಲಿ ರಾತ್ರಿಯನ್ನು ಕಳೆಯುವದೆಂದರೆ ಅವರ ಪುಸ್ತಕಗಳನ್ನು ತೆರೆದು ಕೂತುಕೊಳ್ಳುವದು, ಮಾನಸಪೂಜೆಯಂತೆ ಮಾನಸಭೆಟ್ಟಿಯನ್ನು ಪಡೆಯುವದು, ಎಂದಿಷ್ಟೇ ಉಳಿದಿದೆ. ಅವರ ನಿಧನದ ಬಗ್ಗೆ ಶೋಕ ಮಾಡುವದು ನಮ್ಮ ಧರ್ಮಶಾಸ್ತ್ರಗಳ ವಿರುದ್ದವಾಗುತ್ತದೆ. ಸಂನ್ಯಾಸಿಯ ಮೃತ್ಯುವಿಗಾಗಿ ಶೋಕ ಮಾಡಲಾಗದು. ಅವರ ಅವರತ್ವವನ್ನು ಅಲ್ಲಗಳೆದಂತಾಗುತ್ತದೆ. ಕಾಲಪುರುಷನಿಗೆ ಎಂದಿಗೂ ಅಳುಕದ, ಅಷ್ಟೇ ಏಕೆ, ನನ್ನದೂ ನಿನ್ನದೂ ಒಂದು ಸಣ್ಣ ಭೆಟ್ಟಿಯಾದಂತಾಯಿತು ಬಿಡು ಎಂದು ಅವನನ್ನುದ್ದೇಶಿಸಿ ಹೇಳುವ, ಯೋಗಿಯ ಅಲಿಪ್ತತನವನ್ನು ಬಾಳಿನಲ್ಲಿ ಮೆರೆಯುವ ಈ ಮನುಷ್ಯನನ್ನು ಮರಣದ ದಾರಿಯಲ್ಲಿ ಒಯ್ಯುವ ಅವಸರ ಆ ಕಾಲಪುರುಷನಿಗೆ ಇಷ್ಟೇಕೆ ಆಗಿತ್ತು? ಅಂತೂ ಕಾಲವು ಇಂತಹದೇನನ್ನಾದರೂ ವಿಪರೀತ ಮಾಡದಿದ್ದರೆ " ಕಾಲಯ ತಸ್ಮೈ ನಮಃ" ಎಂದು ಅವನಿಗೆ ಕಡ್ಡಾಯದ ನಮಸ್ಕಾರವನ್ನಾದರೂ ಯಾರು ಮಾಡುವರು? ಸತ್ತಾಧೀಶರ ಕೆಟ್ಟ ಚಾಳಿಗಳು ಅವನಿಗೂ ಅಂಟಿವೆ.

**(ಕನ್ನಡಕ್ಕೆ: ಆನಂದ ವರ್ಟಿ/ಡಿಎಸ್ಸೆನ್)**

# ಲೋಹಿಯಾರವರ ಪ್ರಜಾಸತ್ತಾತ್ಮಕ ದೃಷ್ಟಿ: ಒಂದು ಚಿಂತನೆ

**–ಡಾ. ರಾಜಾರಾಂ ತೋಳ್ಪಾಡಿ**



ಇಂದು ಜಗತ್ತಿನಾದ್ಯಂತ ಪ್ರಜಾಪ್ರಭುತ್ವದ ಕುರಿತು ಹೊಸರೀತಿಯ ಚಿಂತನೆಗಳು ಮೇಲೆದ್ದು ಬರುತ್ತಿವೆ. ಇದರಿಂದ ಪ್ರಜಾಪ್ರಭುತ್ವದ ಅರ್ಥ ಹಾಗೂ ವ್ಯಾಪ್ತಿಗಳು ಪುನರ್ ವ್ಯಾಖ್ಯಾನಗೊಳ್ಳುತ್ತಿವೆ. ಪ್ರಜಾಪ್ರಭುತ್ವದ ಬಗೆಗಿನ ನಮ್ಮ ದೃಷ್ಟಿಕೋನದ ಈ ಮಹಾನ್ ಪಲ್ಲಟಗಳ ನಡುವೆ ಬಿರುಕುಬಿಟ್ಟ ಜಗತ್ತಿನ ಬೇರೆ ಬೇರೆ ಸಮಾಜಗಳು ಪ್ರಜಾಪ್ರಭುತ್ವದ ಬಗೆಗೆ ತಮ್ಮದೇ ಆದ ನಿರ್ದಿಷ್ಟ ಮತ್ತು ವಿಭಿನ್ನ ನಿರೂಪಣೆಗಳನ್ನು ಮುಂದಿಡುತ್ತಿವೆ. ಪ್ರಜಾಪ್ರಭುತ್ವದ ಬಗೆಗಿನ ಈ ಹೊಸ ಉತ್ಕರ್ಷದ ನೆಲೆಯಲ್ಲಿ ಭಾರತದ ಚಿಂತಕರು ಹಾಗೂ ಜನಸಮುದಾಯಗಳು ಹೇಗೆ ತಮ್ಮ ಸೆಣಸಾಟಗಳನ್ನು ನಡೆಸಿದರು ಮತ್ತು ನಡೆಸುತ್ತಿದ್ದಾರೆ ಎನ್ನುವುದು ಬಹುಮುಖ್ಯವಾದ ಸಂಗತಿಯಾಗಿದೆ. ಈ ಹಿನ್ನಲೆಯಲ್ಲಿ ಆಧುನಿಕ ಭಾರತದ ಕ್ರಿಯಾಶೀಲ ಚಿಂತಕರಲ್ಲಿ ಒಬ್ಬರಾದ ರಾಮಮನೋಹರ ಲೋಹಿಯಾ ಪ್ರಜಾಪ್ರಭುತ್ವದ ಜೊತೆಗೆ ಯಾವ ರೀತಿಯ ಸೆಣಸಾಟವನ್ನು ನಡೆಸಿದ್ದಾರೆ, ಈ ಸೆಣಸಾಟ ಪ್ರಜಾಪ್ರಭುತ್ವದ ಬಗೆಗೆ ಯಾವ ರೀತಿಯ ದೃಷ್ಟಿಕೋನವನ್ನು ಮುಂದಿಡುತ್ತದೆ ಮತ್ತು ಈ ದೃಷ್ಟಿ ಕೋನ ಇಂದಿನ ಪ್ರಜಾಪ್ರಭುತ್ವದ ನಮ್ಮ ಅರಿವಿಗೆ ಏನನ್ನು ಕೊಡುತ್ತದೆ ಎನ್ನುವುದರ ಕುರಿತು ಚಿಂತಿಸುವುದು ನನ್ನ ಆದ್ಯತೆ.

ನಮಗೆಲ್ಲರಿಗೂ ತಿಳಿದಿರುವಂತೆ ಪ್ರಜಾಪ್ರಭುತ್ವವೆನ್ನುವುದು, ಒಂದು ಕಲ್ಪನೆಯಾಗಿ ಹಾಗೂ ಒಂದು ರಾಜಕೀಯ ಕ್ರಿಯಾಚರಣೆಯ ಮಾರ್ಗವಾಗಿ ಪಾಶ್ಚಿಮಾತ್ಯ ನಾಗರಿಕತೆಯ ಒಂದು ಅಸಾಧಾರಣ ಕೊಡುಗೆ. ಪಾಶ್ಚಿಮಾತ್ಯ ಜಗತ್ತು ವಿಶೇಷವಾಗಿ ಪಶ್ಚಿಮ ಯುರೋಪ್ ಸುಮಾರು ಐದು ಶತಮಾನಗಳ ಕಾಲಾವಧಿಯಲ್ಲಿ ವಿಭಿನ್ನ ಬಗೆಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಆತಂಕ ಮತ್ತು ಒತ್ತಾಯಗಳ ನಡುವೆ ರೂಪಿಸಿಕೊಂಡ ಹಾಗೂ ರೂಢಿಸಿಕೊಂಡ ವಿಶಿಷ್ಟವಾದ ವಿದ್ಯಮಾನವನ್ನು ನಾವು ಪ್ರಜಾಪ್ರಭುತ್ವ ಎಂದು ಕರೆಯುತ್ತೇವೆ. ತತ್ವಶಾಸ್ತ್ರೀಯ ಪರಿಭಾಷೆಯಲ್ಲಿ ಹೇಳುವುದಾದರೆ, ಇದು ಸಮಾಲೋಚನೆ ಮತ್ತು ಸಹಮತಗಳ ಆಧಾರದಲ್ಲಿ ಎಲ್ಲರ ಒಳಿತನ್ನು ಸಾಧಿಸಬಹುದು ಎಂದು ಪ್ರತಿಪಾದಿಸುವ ಸಿದ್ದಾಂತವಾಗಿದೆ. ಸಾಮಾಜಿಕ ಹಾಗೂ ರಾಜಕೀಯ ನೆಲೆಯಲ್ಲಿ ಪ್ರಜಾಪ್ರಭುತ್ವವು ಅನೇಕಾನೇಕ ಸಂಘ–ಸಂಸ್ಥೆ–ವೇದಿಕೆಗಳನ್ನು, ನೀತಿನಿಯಮಗಳನ್ನು ಮತ್ತು ಪ್ರಕ್ರಿಯೆಗಳನ್ನು ರೂಢಿಸಿಕೊಂಡು ಅಭಿಮತಗಳನ್ನು ಸಹಮತಗಳಾಗಿ ಪರಿವರ್ತಿಸಿ ಒಂದು ನಾಜೂಕಾದ ರಾಜಕೀಯ ವ್ಯವಸ್ಥೆಯನ್ನು ಮಂಡಿಸುತ್ತದೆ. ತನ್ನ ಚಾರಿತ್ರಿಕ ವಿಕಾಸದಲ್ಲಿ ಅದು ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವಗಳಂತಹ ಕಲ್ಪನೆಗಳನ್ನು ತನ್ನದಾಗಿಸಿಕೊಂಡು ಹಕ್ಕುಗಳು ಎನ್ನುವ ದಾವೆಗಳ ನೆಲೆಯಲ್ಲಿ ತನ್ನನ್ನು ನಿರ್ವಹಿಸಿಕೊಂಡು ಬಂದಿದೆ. ಅಂತೆಯೇ, ರಾಷ್ಟ್ರೀಯತೆ ಮತ್ತು ಪಂಥ ನಿರಪೇಕ್ಷತೆ(*ಸೆಕ್ಯುಲರಿಸಂ*)ಗಳಂತಹ ಸೈದ್ಧಾಂತಿಕ ವಿದ್ಯಮಾನಗಳೊಂದಿಗೂ ಅದು ತನ್ನ ಬಂಧುತ್ವವನ್ನು ಏರ್ಪಡಿಸಿಕೊಂಡಿದೆ. ಹೀಗೆ ಚಾರಿತ್ರಿಕವಾಗಿ ತನ್ನ ರೂಪುರೇಷೆಗಳನ್ನು ಪಡೆದುಕೊಂಡ ಪ್ರಜಾಪ್ರಭುತ್ವ ಬಹಳಷ್ಟು ಕಾಲದ ತನಕ, ಎಲ್ಲ ಅಡ್ಡಿ–ಆತಂಕಗಳ ನಡುವೆಯೂ, ಯುರೋಪಿನ ಅನೇಕ ಸಮಾಜಗಳನ್ನು ನಿಭಾಯಿಸಿಕೊಂಡು ಬಂದ ಸೈದ್ಧಾಂತಿಕ ರಾಜಕೀಯ ವಿದ್ಯಮಾನವಾಗಿದೆ.

ಪ್ರಜಾಪ್ರಭುತ್ವವೆನ್ನುವುದು ಜಗತ್ತಿಗೆ ಯುರೋಪ್ ನೀಡಿರುವ ಒಂದು ಅಪರೂಪದ ಕಾಣಿಕೆಯೆಂಬುದು ನಿಜ. ಆದರೆ ಪರಿಕಲ್ಪನೆ ಹಾಗೂ ಕ್ರಿಯಾಚರಣೆಯ ನೆಲೆಯಲ್ಲಿ ಅದು ಪ್ರತಿಪಾದಿಸುವ ನಿಲುವುಗಳು ಮತ್ತು ಪ್ರತಿನಿಧಿಸುವ ದೃಷ್ಟಿಕೋನಗಳು ಅನೇಕ ಬಾರಿ ವಸಾಹತುಶಾಹಿಯಿಂದ ಘಾಸಿಗೊಂಡ ಐರೋಪ್ಯೇತರ ಸಮಾಜಗಳ ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಸ್ಮಿತೆಗಳಿಗೆ ಪರಕೀಯವಾಗಿ ಉಳಿದುಬಿಟ್ಟಿದೆ. ಎಷ್ಟೋ ಸಂದರ್ಭಗಳಲ್ಲಿ ಪ್ರಜಾಪ್ರಭುತ್ವದ ಆಂತರಿಕ ರಚನೆಯಲ್ಲಿ ಹುದುಗಿರುವ ಐರೋಪ್ಯ ಕೇಂದ್ರಿತ ಸಾಂಸ್ಕೃತಿಕ ಪೂರ್ವಗ್ರಹಗಳು ಹಾಗೂ ಪೂವಾನ್ನಿಸಿಕೆಗಳು ವಸಹಾತೋತ್ತರ ಸಮಾಜಗಳ ಸ್ವಾಯತ್ತತೆಯನ್ನು ಅಲ್ಲಗಳೆಯುತ್ತವೆ. ಹಾಗಾಗೀ, ವಸಾಹತುಶಾಹಿಯ ವಿರುದ್ಧದ ತಮ್ಮ ಹೋರಾಟದ ಸಂದರ್ಭದಲ್ಲಿ ಅನೇಕ ವಸಾಹತೋತ್ತರ ಸಮಾಜಗಳ ಚಿಂತಕರು ಒಂದು ವಿಶಾಲವಾದ ಅರ್ಥದಲ್ಲಿ ಪ್ರಜಾಪ್ರಭುತ್ವದ ಕಲ್ಪನೆಯನ್ನು ಒಪ್ಪಿಕೊಂಡರೂ ಆಂತರಿಕವಾಗಿ ಅದರೊಳಗೆ ಹುದುಗಿಕೊಂಡಿರುವ ಪಾಶ್ಚಿಮಾತ್ಯ ಪೂರ್ವಾಗ್ರಹಗಳನ್ನು ನಿರಾಕರಿಸುವ ಮತ್ತು ಮೂಲ ತಾತ್ವಿಕ ನೆಲೆಯಲ್ಲಿ ಪ್ರಜಾಪ್ರಭುತ್ವವನ್ನು ಪುನರ್‌ಸಂಘಟಿಸುವ ಮಹತ್ವದ ಸಾಹಸಗಳನ್ನು ನಡೆಸಿದರು. ಹೀಗೆ ಪ್ರಜಾಪ್ರಭುತ್ವವನ್ನು ಮೂಲಜಿಜ್ಞಾಸಿಕವಾಗಿ ಪುನರ್ ಸಂಘಟಿಸುವ ಹಾಗೂ ಅದರ ಪಾಶ್ಚಿಮಾತ್ಯ ತತ್ವಮೀಮಾಂಸೆಯನ್ನು ಧಿಕ್ಕರಿಸುವ ಧೀಮಂತ ಚಿಂತಕರ ಒಂದು ಗಣನೀಯ ಪಟ್ಟಿಯೇ ಇದೆ. ಈ ಪಟ್ಟಿಯಲ್ಲಿ ಫ್ರಾನ್ಸ್ ಫೆನಾನ್, ಗಾಂಧೀಜಿ, ಮೊದಲಾದವರ ಹೆಸರುಗಳು ಗಮನಾರ್ಹವಾಗಿ ಕಾಣಸಿಗುತ್ತವೆ.

ಭಾರತದಲ್ಲಿ ವಸಾಹತುಶಾಹಿಯ ವಿರುದ್ಧದ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಪ್ರಜಾಪ್ರಭುತ್ವವನ್ನು ಅದರ ಪಾಶ್ಚಿಮಾತ್ಯ ಅರ್ಥನಿರೂಪಣೆಗಳಿಂದ ಬೇರೆಯಾಗಿ ಅದನ್ನು ಭಾರತೀಯ ಸಮಾಜದ ಸಾಂಸ್ಕೃತಿಕ ಸನ್ನಿವೇಶದಲ್ಲಿ ಮರುನಿರೂಪಿಸುವ ಪ್ರಯತ್ನಗಳು ಕ್ಷೀಣವಾಗಿಯಾದರೂ ಕಾಣಲಿಕ್ಕೆ ಸಿಗುತ್ತವೆ. ಅಂತಹ, ವಿರಳ

ಪ್ರಯತ್ನಗಳಲ್ಲಿ ರಾಮಮನೋಹರ ಲೋಹಿಯಾ ಪ್ರಜಾಪ್ರಭುತ್ವದ ಬಗೆಗೆ ನಡೆಸಿದ ಚಿಂತನೆಗಳನ್ನು ಒಂದೆಂದು ಉದಾಹರಿಸಬಹುದು.

ಸಾಧಾರಣವಾಗಿ ಭಾರತದ ಸೈದ್ಧಾಂತಿಕ ರಾಜಕೀಯ ಇತಿಹಾಸದಲ್ಲಿ ಲೋಹಿಯಾರನ್ನು ಭಾರತದ ಸಮಾಜವಾದಿ ಆಂದೋಲನದ ಮುಖಂಡರೆಂದು ಅಥವಾ ಚಿಂತಕರೆಂದು ಗುರುತಿಸಲಾಗಿದೆ. ಸಮಾಜವಾದವನ್ನು ಅವರು ಎದುರಿಸಿದ ರೀತಿ ಹಾಗೂ ಅದರ ತಾತ್ವಿಕತೆ ಮತ್ತು ಕ್ರಿಯಾವಿಧಾನಗಳನ್ನು ಅವರು ಮರುನಿರೂಪಿಸಿದ ಕ್ರಮ ಶ್ಲಾಘನೀಯವಾದದ್ದೇ. ತನ್ನನ್ನು ಮೂಲತ: ಸಮಾಜವಾದಿಯೆಂದು ಗುರುತಿಸಿಕೊಳ್ಳುವ ಲೋಹಿಯಾ, ಸಮಾಜವಾದಿ ಸಿದ್ಧಾಂತವನ್ನು ಅದರ ಐರೋಪ್ಯ ಕೇಂದ್ರಿತ ತತ್ವಮೀಮಾಂಸೆಯಿಂದ ಮುಕ್ತಗೊಳಿಸಿ ನಿಜವಾದ ಅರ್ಥದಲ್ಲಿ ಅದನ್ನು ವಿಶ್ವಾತ್ಮಕಗೊಳಿಸುವ ಪ್ರಯತ್ನವನ್ನು ನಡೆಸಿದರು. ಹಾಗಿದ್ದು, ಒಂದು ಪ್ರಖರವಾದ ಪ್ರಜಾಪ್ರಭುತ್ವದ ಕಲ್ಪನೆ ಅವರ ಸಮಾಜವಾದಿ ಚಿಂತನೆಯಲ್ಲಿ ಸದಾ ಜಾಗೃತವಾಗಿತ್ತು ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತದಲ್ಲಿ ಪ್ರಜಾಪ್ರಭುತ್ವದ ತಾತ್ವಿಕತೆಯನ್ನು ವಿಮರ್ಶೆಗೆ ಒಳಪಡಿಸಿದ ಕೆಲವೇ ಕೆಲವು ಚಿಂತಕರಲ್ಲಿ ಲೋಹಿಯಾ ಒಬ್ಬರು.

ಲೋಹಿಯಾ ತಮ್ಮ ರಾಜಕೀಯ ಜೀವನದ ಆರಂಭಿಕ ಕಾಲಘಟ್ಟದಿಂದಲೇ ಪ್ರಜಾಪ್ರಭುತ್ವದ ಕುರಿತು ಆಳವಾದ ಚಿಂತನೆಯನ್ನು ನಡೆಸಿದವರು. ೧೯೩೦ರ ವೇಳೆಗೆ ಸಮಾಜವಾದಿ ಚಿಂತಕರಾಗಿ ಭಾರತದ ರಾಷ್ಟ್ರೀಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾರಂಭಿಸಿದ ಲೋಹಿಯಾ, ಅಲ್ಲಿಂದೀಚೆಗೆ ನಿರಂತರವಾಗಿ ಪ್ರಜಾಪ್ರಭುತ್ವದ ಅನೇಕಾನೇಕ ತಾತ್ವಿಕ ಹಾಗೂ ಕಾರ್ಯಾಚರಣೆಯ ಪ್ರಶ್ನೆಗಳನ್ನು ಬೇರೆ ಬೇರೆ ಕಾಲಘಟ್ಟಗಳಲ್ಲಿ ಮತ್ತು ವಿಭಿನ್ನ ಸನ್ನಿವೇಶಗಳಲ್ಲಿ ಕ್ರಿಯಾತ್ಮಕವಾಗಿ ಎದುರುಗೊಂಡರು. ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಸಮಾಜವಾದಿ ಆಂದೋಲನದ ಮುಖವಾಣಿ ಪತ್ರಿಕೆಯಾದ 'ಕಾಂಗ್ರೆಸ್ ಸೋಶಿಯಲಿಸ್ಟ್'ಗೆ ಬರೆದ ಲೋಹಿಯಾರ ಅನೇಕ ಲೇಖನಗಳು ಪ್ರಜಾಪ್ರಭುತ್ವದ ಬಗೆಗಿನ ಅವರ ವಿಭಿನ್ನ ಹಾಗೂ ವಿಚಿಕಿತ್ಸಕ ದೃಷ್ಟಿಕೋನವನ್ನು ಬಿಂಬಿಸುತ್ತವೆ. ಪ್ರಜಾಪ್ರಭುತ್ವದ ಬಗೆಗಿನ ಅವರ ಚಿಂತನೆ ಯಾವತ್ತು ಜಾಗತಿಕ ವಿದ್ಯಮಾನಗಳ ಸಂದರ್ಭದಲ್ಲಿ ಅವುಗಳಿಗೆ ಪ್ರತಿಸ್ಪಂದನವಾಗಿ ಹೊರಹೊಮ್ಮುತ್ತಿತ್ತು. ಆದ್ದರಿಂದಲೇ, ಸಾಮ್ರಾಜ್ಯಶಾಹಿ, ವಸಾಹತುಶಾಹಿ, ಯುದ್ಧ, ಭೀತಿ, ಶಾಂತಿ, ರಷ್ಯಾದಲ್ಲಿ ನಡೆದ ಮಾನವ ಅತಿರೇಕಗಳು, ಆಫ್ರಿಕಾದ ಕ್ಷಾಮ, ಜಗತ್ತಿನಾದ್ಯಂತ ಅಟ್ಟಹಾಸಗೈಯುತ್ತಿದ್ದ ಅಸಮತೆ ಹಾಗೂ ಬಡತನಗಳು ಅವರ ಪ್ರಜಾಪ್ರಭುತ್ವದ ಕಲ್ಪನೆಯನ್ನು ರೂಪಿಸುತ್ತಿದ್ದವು. ಈ ಅರ್ಥದಲ್ಲಿ ಲೋಹಿಯಾ ಭಾರತದ ಪ್ರಜಾತಾಂತ್ರಿಕ ತಾತ್ವಿಕತೆಯ ಮೊದಲ ಶ್ರೇಣಿಯ ಚಿಂತಕರೆಂದು ನಿರ್ವಿವಾದವಾಗಿ ಹೇಳಬಹುದು.

ಲೋಹಿಯಾರವರ ಪ್ರಜಾತಾಂತ್ರಿಕ ಚಿಂತನೆ ತನ್ನ ಚುರುಕು ಹಾಗೂ ಮೊನಚನ್ನು ಪಡೆದುಕೊಂಡದ್ದು ಐದು ವರ್ಷಗಳ ಅವರ ಜರ್ಮನಿಯ ವಿದ್ಯಾರ್ಜನೆಯ ಕಾಲಾವಧಿಯಲ್ಲಿ. ತಮ್ಮ ಸ್ನಾತಕೋತ್ತರ ಹಾಗೂ ಡಾಕ್ಟೋರಲ್ ಪದವಿಗಾಗಿ ಹಂಬಾಲ್ಟ್ ವಿಶ್ವವಿದ್ಯಾನಿಲಯದಲ್ಲಿ ಸುಮಾರು ಐದು ವರ್ಷಗಳ ಕಾಲ ನೆಲೆ ನಿಂತ ಲೋಹಿಯಾ ಈ ಕಾಲಾವಧಿಯಲ್ಲಿ ಜರ್ಮನಿಯಲ್ಲಿ ಹಿಟ್ಲರ್‌ನ ಉನ್ನತಿ ಹಾಗೂ ಪ್ರವರ್ಧಮಾನವನ್ನು ಕಂಡರು. ಜರ್ಮನಿಯ ಸಮಾಜವೇ ಇಡಿಯಾಗಿ ನಾಜ್ಸಿವಾದದ ಬೆಡಗು ಬಿನ್ನಾಣಗಳಿಗೆ ಮಾರುಹೋದ ರೀತಿ ಅವರನ್ನು ದಂಗು ಬಡಿಸಿತು. ನಾಜ್ಸಿವಾದ ಜರ್ಮನ್ ಸಮಾಜದ ಮುಂದೆ ಇರಿಸಿದ ಉಜ್ವಲ ಭವಿಷ್ಯದ ಭರವಸೆ ಹೇಗೆ ಅಲ್ಪ ಸಂಖ್ಯಾಕ ಸಮುದಾಯಗಳಿಗೆ ಭೀಕರವಾಗಿ ಕಾಣಿಸಿಕೊಂಡಿತು ಹಾಗೂ ಬಹು ಸಂಖ್ಯಾತತೆಯ ಜಯದ್ರಥ ನಡಿಗೆಯಲ್ಲಿ ಹೇಗೆ ಅಲ್ಪ ಸಂಖ್ಯಾತತೆ ಅನಾಥವಾಗಿ ಬಿಡುತ್ತದೆ ಎನ್ನುವ ಅರಿವು ಅವರಿಗೆ ಪ್ರಜಾಪ್ರಭುತ್ವದ ತಾತ್ವಿಕತೆಯನ್ನು ಅದರ ಮೂಲ ಮೀಮಾಂಸೆಯ ನೆಲೆಯಲ್ಲಿ ಪುನರ್‌ಪರಿಶೀಲಿಸುವಂತೆ ಒತ್ತಾಯಿಸಿತು.

ಜರ್ಮನಿಯ ಅವರ ಶೈಕ್ಷಣಿಕ ಕಾಲಾವಧಿಯಲ್ಲಿ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳ ನಾಗರಿಕ ಸ್ವಾತಂತ್ರ್ಯದ ಕಲ್ಪನೆ ಲೋಹಿಯಾಗೆ ಅಪ್ಯಾಯಮಾನವಾಗಿ ಕಾಣಿಸಿತಾದರೂ, ಜರ್ಮನಿಯಲ್ಲಿ ಮೇಲೆದ್ದು ಬರುತ್ತಿದ್ದ ನಾಜ್ಸಿವಾದದ ಎದುರು ಸಾಮಾಜಿಕ ಪ್ರಜಾಪ್ರಭುತ್ವವಾದಿಗಳು ರಾಜಕೀಯವಾಗಿ ನಿಸ್ತೇಜರಾಗಿಬಿಟ್ಟದ್ದು ಅವರನ್ನು ಕಸಿವಿಸಿಗೊಳಿಸಿತು. ಹಾಗಾಗೀ, ನಾಗರಿಕ ಸ್ವಾತಂತ್ರ್ಯದ ಪ್ರಶ್ನೆಯನ್ನು ಲೋಹಿಯಾ ಬಹಳ ವಿಮರ್ಶಾತ್ಮಕ ದೃಷ್ಟಿಯಿಂದಲೇ ತಮ್ಮ ಪ್ರಜಾಪ್ರಭುತ್ವದ ದೃಷ್ಟಿಕೋನದೊಳಕ್ಕೆ ತಂದರು ಎನ್ನಬಹುದು. ಅದೇನೇ ಇದ್ದರೂ, ಜರ್ಮನಿಯಲ್ಲಿ ಲೋಹಿಯಾ ಎದುರಿಸಿದ ದಟ್ಟವಾದ ಸೈದ್ಧಾಂತಿಕ ರಾಜಕೀಯ ಸನ್ನಿವೇಶಗಳು ಅವರನ್ನು ಓರ್ವ ಮೂಲಜಿಜ್ಞಾಸಿಕ ಪ್ರಜಾಪ್ರಭುತ್ವವಾದಿಯಾಗಿ ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತು ಎನ್ನಬಹುದು. ಜರ್ಮನ್ ಅನುಭವದಲ್ಲಿ ರೂಪುಗೊಂಡ ಅವರ ನಾಗರಿಕ ಸ್ವಾತಂತ್ರ್ಯದ ಕಲ್ಪನೆ ಮುಂದೆ ವಿಕಸಿತಗೊಂಡು ಅವರ ಪ್ರಜಾಸತಾತ್ಮಕ ಸಮಾಜವಾದಿ ಕಾರ್ಯಕ್ರಮ ಪಟ್ಟಿಯ ಒಂದು ಬಹು ಮುಖ್ಯವಾದ ಭಾಗವಾಯಿತು. ತಮ್ಮ ಸಪ್ತ ಕ್ರಾಂತಿ ಎನ್ನುವ ವಿಶ್ವದೃಷ್ಟಿಯಲ್ಲಿ ಅವರು ಮಾನವನ ಆಂತರಿಕ ಸಾಂಸ್ಕೃತಿಕ ಅಸ್ತಿತ್ವದ ಮೇಲಿನ ದಾಳಿಯ ವಿರುದ್ಧದ ಹೋರಾಟವನ್ನು ಬಹುಮುಖ್ಯ ಭಾಗವಾಗಿ ಪರಿಭಾವಿಸಿದರು. ಬಹುಶ: ಇಂದಿನ ಭಾರತದ ಅಭಿವೃದ್ಧಿ ರಾಜಕೀಯದ ವಿರುದ್ಧ ನಡೆದಿರುವ ಅನೇಕಾನೇಕ ಹೋರಾಟಗಳಲ್ಲಿ ಲೋಹಿಯಾರ ಪ್ರಜಾಸತ್ತಾತ್ಮಕ ದೃಷ್ಟಿ ಅವ್ಯಕ್ತವಾಗಿಯಾದರೂ ಕಾಣಿಸುತ್ತದೆ.

ಓರ್ವ ಸಮಾಜವಾದಿ ಚಿಂತಕರಾಗಿ ಮೊದಲಿನಿಂದಲೂ ಅವರಿಗೆ ಸಮಾಜವಾದದ ತತ್ವವನ್ನು ಪ್ರಜಾಪ್ರಭುತ್ವದ ತತ್ವದೊಂದಿಗೆ ಸಮನ್ವಯಗೊಳಿಸುವ ಪ್ರಶ್ನೆ ಬಹಳ ಮುಖ್ಯವಾಗಿತ್ತು.. ತಮ್ಮ ಮೊದಲಿನ 'ಸಮಾಜವಾದ ಮತ್ತು ಪ್ರಜಾಪ್ರಭುತ್ವ' ಎನ್ನುವ ಲೇಖನವೊಂದರಲ್ಲಿ ಅವರು ಈ ಕುರಿತು ಮಾರ್ಮಿಕವಾಗಿ ಬರೆದಿದ್ದಾರೆ. ಭಾರತದಲ್ಲಿ ತಮ್ಮ ರಾಜಕೀಯ ಜೀವನದ ಕಾಲಾವಧಿಯಲ್ಲಿ ಅವರು ವಸಾಹತೋತ್ತರ ಕಾಲಘಟ್ಟದಲ್ಲಿ ಭಾರತದಂತಹ ಅಸಮಾನ ಸಮಾಜಗಳು ತಮ್ಮ ನಿರ್ದಿಷ್ಟ ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪರಿಪ್ರೇಕ್ಷದಲ್ಲಿ ರೂಪಿಸಿಕೊಳ್ಳಬೇಕಾದ ಪ್ರಜಾಸತಾತ್ಮಕ ವ್ಯವಸ್ಥೆ ಯಾವ ರೀತಿಯದಾಗಿರಬೇಕು ಎಂದು ಚಿಂತಿಸಿದರು ಹಾಗೂ ಈ ದಿಸೆಯಲ್ಲಿ ಅನೇಕ ಕ್ರಿಯಾತ್ಮಕ ಮಧ್ಯಪ್ರವೇಶಗಳನ್ನು ನಡೆಸಿದರು. ಈ ದಿಸೆಯಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಕುರಿತು ಅವರು ನಡೆಸಿದ ವಿಮರ್ಶಾತ್ಮಕ ಚಿಂತನೆ ಭಾರತೀಯ ಪಕ್ಷ ಪದ್ಧತಿ ಹಾಗೂ ಪಕ್ಷ ಸಂಘಟನೆಯ ಬಗ್ಗೆ ಅವರು ಮುಂದಿಟ್ಟ ವಿಚಾರಗಳು, ಹೋರಾಟವನ್ನು ರಾಜಕೀಯ ಕ್ರಿಯಾಚರಣೆಯ ಮಾಧ್ಯಮವಾಗಿ ಅವರು ಪರಿಕಲ್ಪಿಸಿದ ರೀತಿ ಹಾಗೂ ಸಾಮಾಜಿಕ ನ್ಯಾಯದ ಪ್ರಶ್ನೆಯನ್ನು ಭಾರತದ ಪ್ರಜಾಪ್ರಭುತ್ವದ ಪ್ರಧಾನ ಪ್ರಶ್ನೆಯನ್ನಾಗಿ ಮುಂದಿರಿಸಿದ ಅವರ ಬೌದ್ಧಿಕ ರಾಜಕೀಯ ಕ್ರಿಯಾಚರಣೆ ಲೋಹಿಯಾರನ್ನು ಭಾರತದ ಪ್ರಜಾಪ್ರಭುತ್ವದ ಅತ್ಯಂತ ಪ್ರಮುಖ ತಾತ್ವಿಕ ಚಿಂತಕರನ್ನಾಗಿ ಮಾಡುತ್ತದೆ.

ಬಹುಶ: ಲೋಹಿಯಾರ ಪ್ರಜಾಸತ್ತಾತ್ಮಕ ಚಿಂತನೆ ಅತ್ಯಂತ ಪ್ರಖರವಾಗಿ ಮಾರ್ದನಿಗೊಳ್ಳುವುದು ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಭಾರತೀಯ ಭಾಷೆಗಳಿಗಾಗಿ ಅವರು ನಡೆಸಿದ ಹೋರಾಟಗಳಲ್ಲಿ 'ಅಂಗ್ರೇಜಿ ಹಟಾವೋ'( ಇಂಗ್ಲೀಷ್ ತೊಲಗಿಸಿ) ಎನ್ನುವ ಘೋಷಣೆಯ ಅಡಿಯಲ್ಲಿ ಅವರ ನಾಯಕತ್ವದಲ್ಲಿ ಸಮಾಜವಾದಿ ಪಕ್ಷ ಭಾರತೀಯ ಭಾಷೆಗಳ ಪುನರುಜ್ಜೀವನಕ್ಕಾಗಿ ನಡೆಸಿದ ಹೋರಾಟ ಅವರನ್ನು ಓರ್ವ ವಿಶಿಷ್ಟ ಹಾಗೂ ಪ್ರಖರ ಪ್ರಜಾಸತ್ತಾತ್ಮಕವಾದಿಯನ್ನಾಗಿ ಮಾಡಿದೆ. ಭಾರತೀಯ ಭಾಷೆಗಳ ಪುನರುಜ್ಜೀವನಕ್ಕಾಗಿ ಅವರು ನಡೆಸಿದ ಈ ಹೋರಾಟ ಇಂಗ್ಲೀಷ್ ವಿರುದ್ಧವಾದದ್ದು ಅಥವಾ ಹಿಂದಿ ಪರವಾದದ್ದು ಆಗಿರಲಿಲ್ಲ. ಬದಲಾಗಿ ಅದು ಭಾರತೀಯ ಭಾಷೆಗಳನ್ನು ಪ್ರಾದೇಶಿಕ ಸಂಕೋಲೆಗಳಿಂದ ಮುಕ್ತಗೊಳಿಸುವ, ಅವುಗಳು ಪರಸ್ಪರ ಸಂವಾದಿಸುವಂತೆ ಮಾಡುವ ಮತ್ತು ಅವುಗಳನ್ನು ಪ್ರಜಾಸತ್ತಾತ್ಮಕಗೊಳಿಸುವ ಒಂದು ದಿಟ್ಟ ಪ್ರಯತ್ನವಾಗಿತ್ತು.

**ಸಾಹಿತ್ಯ-ಸಂಸ್ಕೃತಿ ಇತ್ಯಾದಿ...**

# ಮಹಿಳಾ ಸಾಹಿತ್ಯ : ಈ ಉಪೇಕ್ಷೆ ಏಕೆ

ಇತ್ತೀಚೆಗೆ ತೇಜಸ್ವಿ, ಅನಂತಮೂರ್ತಿ ಹಾಗೂ ಮಹದೇವ ಅವರ ಹೊಸ ಪುಸ್ತಕಗಳು ಹೊರಬಂದಿವೆ. ಇವುಗಳ ಬಗ್ಗೆ ಎಲ್ಲರೂ ಉಘೇ ಉಘೇ ಎನ್ನುತ್ತಿದ್ದಾರೆ. ಅದೆಲ್ಲ ಸರಿ. ಆದರೆ ಇದೇ ಸಮಯದಲ್ಲಿ ಮಾರುಕಟ್ಟೆಗೆ ಬಂದಿರುವ ಮೂವ್ವರು ಮಹಿಳೆಯರ ಮೂರು ಮಹತ್ವದ ಸಾಹಿತ್ಯ ಸಂಪುಟ/ಕೃತಿಗಳ ಬಗ್ಗೆ ನಮ್ಮ ಸಾಹಿತ್ಯ ಲೋಕದಲ್ಲಿ(ಪತ್ರಿಕಾ ಪ್ರಚಾರ-ವಿಮರ್ಶೆ, ಸೇರಿದಂತೆ) ಸಂಭ್ರಮವಿರಲಿ, ಸುದ್ದಿಯೂ ಇಲ್ಲ! ಇದು ನನ್ನಲ್ಲಿ ವಿಷಾದ-ಜಿಗುಪ್ಸೆಗಳನ್ನು ಹುಟ್ಟಿಸುತ್ತಿದೆ.

ಅಂದು ಸಾವಿತ್ರಿಬಾಯಿ ಫುಲೆ (ಜ್ಯೋತಿಬಾ ಫುಲೆಯವರ ಹೆಂಡತಿ) ನಾಕು ಅಕ್ಷರ ಕಲಿಯಲೋಸುಗ ಶಾಲೆಗೆ ಹೊರಟಾಗ ಸಾಂಪ್ರದಾಯಿಕ ಸಮಾಜದಿಂದ ಅನುಭವಿಸಿದ ಅವಮಾನ-ಸಂಕಷ್ಟಗಳ ಫಲ ಇಂದು ನಾವು ಹೆಮ್ಮೆಪಡುವಂತಹ ಫಲಗಳನ್ನು ನೀಡುತ್ತಿವೆ. ಇತ್ತೀಚೆಗಷ್ಟೇ ಹೊರಬಂದಿರುವ ಎಚ್.ವಿ. ಸಾವಿತ್ರಮ್ಮ, ಕಮಲಾ ಹಂಪನಾ, ಲತಾ ರಾಜಶೇಖರ್ ಮುಂತಾದವರ ಕೃತಿಗಳ ಮೂಲಕ ಅದು ಇಂದು ಮಾಗಿ ಘಮಘಮಿಸುತ್ತಿದೆ ಎಂದೇ ಹೇಳಬೇಕು. ಈ ಮೂವ್ವರು ಮಹಿಳೆಯರು ಈಗ ಆನೆ ಗಾತ್ರದ ಪುಸ್ತಕಗಳನ್ನು ಹೊರತಂದಿದ್ದಾರೆ ಎಂದು, ಕೆಲವರು ಉದ್ದೇಶಪೂರ್ವಕ ವ್ಯಂಗ್ಯದಿಂದ ಹೇಳುವಂತೆ ಅಲ್ಲ; ನಾನು ಹೆಮ್ಮೆಯಿಂದ ಹೇಳಬಯಸುವೆ.

ಎಚ್. ವಿ. ಸಾವಿತ್ರಮ್ಮ ಈಗ ನಮ್ಮೊಂದಿಗಿಲ್ಲ. 'ಅಭಿನವ'ದ ನ. ರವಿಕುಮಾರ್ ಅವರು ಸಾವಿತ್ರಮ್ಮನವರ ೫೨ ಕಥೆಗಳನ್ನು ಈಗ ಸಮಗ್ರ ಸಂಪುಟವಾಗಿ ಪ್ರಕಟಿಸಿದ್ದಾರೆ. ಹಾಗೇ ಅವರ ಅಪ್ರಕಟಿತ ಕಥೆಗಳನ್ನೂ. ಸಾವಿತ್ರಮ್ಮನವರ ಜೀವಿತ ಕಾಲದಲ್ಲೂ ಅವರ ದಿಟ್ಟ ಮತ್ತು ಬಹು ವಿಶಿಷ್ಟವಾದ ಕಥನ ಕಲೆಯನ್ನು ನಮ್ಮ ಸಾಹಿತ್ಯ ವಿಮರ್ಶಾಲೋಕ ಗಂಭೀರವಾಗಿ ಪರಿಗಣಿಸಿದ ದಾಖಲೆಯೇನೂ ಇಲ್ಲ. ಈಗ?

ಇನ್ನು ಕಮಲಾ ಹಂಪನಾ ಕಾವ್ಯ, ಕಥನ, ಸಂಶೋಧನೆ, ವ್ಯಕ್ತಿಚಿತ್ರ, ಪ್ರಬಂಧ, ಮಹಿಳಾ ಸಂವೇದನೆ ಮುಂತಾದ ಹದಿಮೂರು ಪ್ರಕಾರಗಳಲ್ಲಿ ಬರೆದ ಸಾಹಿತ್ಯವನ್ನು ಈಗ 'ಸ್ವಪ್ನ ಬುಕ್ ಹೌಸ್'ನವರು 'ಭೂಮಿಕಾ', 'ಬತೇರಿ', 'ಬತ್ತಳಿಕೆ', 'ಬೆರಗು', 'ಭರಣಿ', 'ಬಹುಳ', 'ಬಹುಧಾ, 'ಬೇರು-ಬೆಂಕಿ-ಬಿಳಲು' ಎಂಬ ಎಂಟು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ನನ್ನದೇ ಮಿತಿಗಳಿಂದಾಗಿ ಇವೆಲ್ಲ ಸಂಪುಟಗಳ ಗುಣಮಟ್ಟದ ಬಗ್ಗೆ ಮಾತನಾಡಲಾರೆನಾದರೂ, ಒಬ್ಬ ಮಹಿಳೆ, ಅದೂ ತಳವರ್ಗವೊಂದರಿಂದ ಬಂದು ಅಕ್ಷರ ಕಲಿತ ಮಹಿಳೆ ಜಾತಿ ಮೀರಿ





**ಎಚ್.ವಿ.ಸಾವಿತ್ರಮ್ಮ ಕಮಲಾ ಹಂಪನಾ ಲತಾ ರಾಜಶೇಖರ್**

ಸಂಗಾತಿಯನ್ನು ಆರಿಸಿಕೊಂಡು ಐವತ್ತು ವರ್ಷಗಳ ಹಿಂದೆಯೇ ಬರೆಯತೊಡಗಿ ಸುಮಾರು ನಾಲ್ಕು ಸಾವಿರ ಪುಟಗಳ ವೈವಿಧ್ಯಮಯ ಸಾಹಿತ್ಯವನ್ನು ರಚಿಸಿದ್ದಾರೆಂಬುದೇ ಯಾರೇ ಆದರೂ ಬಾಯಿ ಮೇಲೆ ಬೆರಳಿಟ್ಟುಕೊಳ್ಳುವಂತಹ ಸಂಗತಿಯಾಗಿದೆ. ಆದರೆ?

ಕವಯತ್ರಿ ಲತಾ ರಾಜಶೇಖರ್ ಅವರದ್ದಂತೂ ಒಂದು ಸಾಹಿತ್ಯ ವಿಕ್ರಮವೆನ್ನಬಹುದಾದ ಸಾಧನೆಯೇ ಸರಿ. ಮಲ್ಲಿಕಾ ಕಡಿದಾಳು ಮತ್ತು ಎಂ.ಪಿ. ಉಮಾದೇವಿಯವರು ಕ್ರಮವಾಗಿ 'ವಿವೇಕಾನಂದ ವಿಜಯಂ' ಮತ್ತು 'ಶೈವ ವಾತ್ಸಲ್ಯ' ಎಂಬ ಒಂದೊಂದು ಮಹಾಕಾವ್ಯ ರಚಿಸಿದ್ದರೆ, ಲತಾ 'ಬುದ್ಧ ಮಹಾ ದರ್ಶನ', 'ಬಸವ ಮಹಾದರ್ಶನ', 'ಯೇಸು ಮಹಾದರ್ಶನ' ಎಂಬ ಮಹಾಕಾವ್ಯಗಳನ್ನು ರಚಿಸಿದ್ದು, 'ಮಹಾವೀರ ದರ್ಶನ' ಅಚ್ಚಿನಲ್ಲಿದೆ. 'ಶ್ರೀರಾಮ ದರ್ಶನ' ಮಹಾಕಾವ್ಯದ ಬೀಜವೂ ಇವರೆದೆಯಲ್ಲಿ ಮೊಳಕೆಯೊಡುತ್ತಿದೆಯೆಂದು ಅವರು ಹೇಳುತ್ತಾರೆ. ಈ ಮಹಾಕಾವ್ಯಗಳಲ್ಲದೆ ಇವರು ಇನ್ನೂ ವಿವಿಧ ಪ್ರಕಾರಗಳ ಇಪ್ಪತ್ತು ಕೃತಿಗಳನ್ನೂ ರಚಿಸಿದ್ದಾರೆ. ಲತಾ ಅವರು ಪಂಚ ಮಹಾಕಾವ್ಯಗಳನ್ನು ರಚಿಸಿದ್ದೇ ಆದರೆ ಅದೊಂದು ವಿಶ್ವ ದಾಖಲೆಯೇ ಆಗಬಹುದು!

ಆದರೇನು, ನಮ್ಮ ಸಾಹಿತ್ಯ ಚಿಂತನ ಲೋಕಕ್ಕೆ ಇತ್ತ ಗಮನವೇ ಇಲ್ಲ! ಇದಕ್ಕೆ ಏನು ಕಾರಣ? ಸುಮ್ಮನೆ ಸರಳವಾಗಿ ಯೋಚಿಸಿದರೆ, ಇದು ಇಂದಿನ ನಮ್ಮ ಸಾಹಿತ್ಯ ಸಂವೇದನಾಶೀಲತೆಗೆ ತಗುಲಿರುವ ಪಾರ್ಶ್ವವಾಯುವಲ್ಲದೆ ಮತ್ತೇನಲ್ಲ ಎಂದು ನನಗನ್ನಿಸುತ್ತದೆ. ಇದು ಗಂಭೀರವಾಗಿ ಯೋಚಿಸಬೇಕಾದ ಸಂಗತಿ ಎಂದು ಭಾವಿಸುವವರಾದರೂ ಈ ಕೃತಿಗಳನ್ನು ಓದಿ ಈ ಮುವ್ವರನ್ನೂ ಅವರ ಸಾಹಸ-ಪರಿಶ್ರಮ-ಪ್ರತಿಭೆಗಳಿಗಾಗಿ ಅಭಿನಂದಿಸಬೇಕಿದೆ.


**-ಸವಿತಾ ನಾಗಭೂಷಣ**

---

**ಪುಸ್ತಕಾವಲೋಕನ**

# ಮುಳ್ಳು ಹಾವುಗೆ ಮೇಲೆ ನಿಂತ ಸಮಾಜವಾದ!

ಪುಸ್ತಕ: ಕಂಡದ್ದು ಕಾಡಿದ್ದು (ಸಮಾಜವಾದಿ ಸಂಕಥನಗಳು-೫)
ಲೇ: ಡಿ.ಎಸ್. ನಾಗಭೂಷಣ ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ ಪು:೧೨+೩೦೦ ಬೆಲೆ:ರೂ.೨೨೦/-




ಇದು ಡಿ.ಎಸ್. ನಾಗಭೂಷಣರು ಬರೆದ ಲೇಖನಗಳು, ಅನುವಾದಗಳು, ಪತ್ರಗಳು, ಟಿಪ್ಪಣಿಗಳು ಇವೆಲ್ಲವೂ ಸೇರಿಕೊಂಡಂಥ ಒಂದು ವಿಶಿಷ್ಟವಾದ ಕೃತಿ. ಹೀಗೆ ವಿವಿಧ ಬಗೆಯ ಬರಹಗಳನ್ನು ಸಂಗ್ರಹಿಸಿದ್ದಕ್ಕೆ ಸಮರ್ಥನೆ ನಾಗಭೂಷಣರ ವ್ಯಕ್ತಿತ್ವದಲ್ಲಿದೆ. ಬರಹ, ಬದುಕು, ಜಗಳ, ಚರ್ಚೆ ಇವುಗಳನ್ನು ವಿವಿಧ ಭಾಗಗಳಲ್ಲಿ ಹಂಚುವುದನ್ನು, ಖಾಸಗಿ ಮತ್ತು ಸಾರ್ವಜನಿಕ ವ್ಯಕ್ತಿತ್ವಗಳನ್ನು ಭಿನ್ನವಾಗಿ ಕಟ್ಟಿಕೊಳ್ಳುವುದನ್ನು ಮೊದಲಿನಿಂದಲೂ ಅವರು ಉಗ್ರವಾದ ನೈತಿಕ ಆಕ್ರೋಶದಿಂದ ವಿರೋಧಿಸಿಕೊಂಡು ಬಂದಿದ್ದಾರೆ. ಈ ಕೃತಿಯಲ್ಲಿರುವ ಬರಹಗಳ ಉದ್ದಕ್ಕೂ ಈ ಆಕ್ರೋಶದ ದನಿಯಿದೆ. ಎರಡನೇಯದಾಗಿ ನಾಗಭೂಷಣರು ಯಾವುದನ್ನೂ ಲಘುವಾಗಿ ತೆಗೆದುಕೊಂಡು trivialise ಮಾಡುವುದಿಲ್ಲ. ನಮ್ಮಂಥ ಸಮಾಜದಲ್ಲಿ ಯಾವುದೇ ರೂಪದಲ್ಲಿ ಪ್ರತಿಕ್ರಿಯಿಸುವುದು ಒಂದು ಜವಾಬ್ದಾರಿಯ ಕೆಲಸವೆಂದು ಅವರು ನಂಬುತ್ತಾರೆ. ಇದುವರೆಗೂ ಅವರು 'ದೇಶಾವರಿ'ಯಾಗಿ ಮಾತಾಡಿದ್ದು, ಬರೆದದ್ದು ಇಲ್ಲವೇ ಇಲ್ಲ. ಈ ಕಾರಣಗಳಿಂದಾಗಿ ಈ ಕೃತಿಯಲ್ಲಿರುವ ಪತ್ರಿಕಾ ಸಂಪಾದಕರುಗಳಿಗೆ ಬರೆದ ಪತ್ರಗಳು ಮತ್ತು ವಿದ್ವತ್‌ಪೂರ್ಣವಾದ ಬರಹಗಳ ಹಿಂದೆ ಒಂದು ಅರ್ಥಪೂರ್ಣವಾದ ಸೂತ್ರ ಹಾಗೂ ಸಂಬಂಧವಿದೆ. ಮುಖ್ಯವಾಗಿ ಈ ಎಲ್ಲಾ ಬರಹಗಳಲ್ಲಿ ಮಿಡಿಯುವ ಪ್ರಾಮಾಣಿಕತೆ ಮತ್ತು ತೀವ್ರತೆ ಈ ಬರಹಗಳನ್ನು ದೈನಿಕ ಟಿಪ್ಪಣಿಗಳಾಗದಂತೆ ಕಾಪಾಡಿವೆ.

ಇವು ಒಂದು ಅರ್ಥದಲ್ಲಿ ಅತ್ಯಂತ ವೈಯಕ್ತಿಕ. ಅವುಗಳ ಹಿಂದೆ ಸುಳ್ಳು ಅಪ್ರಾಮಾಣಿಕತೆಯಿಂದ ಕೆರಳುವ, ನಮ್ಮೆಲ್ಲ ಸಾಮುದಾಯಿಕ ಅವನತಿಯಿಂದ ಖಿನ್ನಗೊಳ್ಳುವ ಮನುಷ್ಯಪರವಾದದ್ದನ್ನು ಕಂಡಾಗ ಮೃದುವಾಗುವ, ಜಗಳಗಳಿಂದ ಸಂಗಾತಿಗಳನ್ನು ಎಚ್ಚರದಲ್ಲಿಡಲು ಪ್ರಯತ್ನಿಸುವ ಸೂಕ್ಷ್ಮ ಮನಸ್ಸಿನ ವ್ಯಕ್ತಿಯೊಬ್ಬನಿದ್ದಾನೆ.

ಅದೇ ಹೊತ್ತಿಗೆ ಈ ಬರಹಗಳು ಅತ್ಯಂತ ಸಾರ್ವಜನಿಕವೂ ಹೌದು. ಅವು ಸಾರ್ವಜನಿಕವಾದ ಅವಕಾಶ(space)ವೊಂದರಲ್ಲಿ ಭಾಗವಹಿಸುತ್ತ, ಸಾರ್ವಜನಿಕ ಜೀವನದಿಂದ, ವಲಯದಿಂದ ಕ್ರಿಯೆ ಪ್ರತಿಕ್ರಿಯೆಗಳನ್ನು ಆಹ್ವಾನಿಸುತ್ತವೆ ಕೂಡ. ನಮ್ಮ ಸಂದರ್ಭದಲ್ಲಿ ಸಾರ್ವಜನಿಕವಾಗುವುದು ಅಂದರೆ ಪೋಜು ಕೊಡುವುದು ಅಥವಾ ನಿರ್ಜೀವವಾದ ಸಂಗತಿಗಳನ್ನು ಅಂಥದ್ದೇ ಮಾತುಗಳಲ್ಲಿ ಹೇಳುವುದು ಆಗಿರುವುದರಿಂದ ನಾಗಭೂಷಣರ ಬರಹಗಳ ವೈಯಕ್ತಿಕ ಘಾಟು ಅಪ್ಯಾಯಮಾನವಾಗಿ ಕಾಣುತ್ತದೆ. ಅದೂ ನಮ್ಮ ಯುವಬರಹಗಾರರು ಅತ್ಯಂತ 'ಸಜ್ಜನ ಸಂಭಾವಿತ'ರಾಗುತ್ತಿರುವ ದುರಂತ ಸನ್ನಿವೇಶದಲ್ಲಿ angry old man ಆಗುವುದರಲ್ಲಿ ಪ್ರಯೋಜನವಿದೆ. (ನಾಗಭೂಷಣರಿಗೆ ಹೇಳಿಕೊಳ್ಳುವಂಥ ವಯಸ್ಸಾಗಿಲ್ಲವೆನ್ನುವುದು ಬೇರೆ ವಿಷಯ). ಈ ಪತ್ರಿಕ್ರಿಯಿಸುವ ಕೆಲಸದ ಬುನಾದಿಯಲ್ಲಿರುವುದು ಒಂದು ನಾಗರೀಕ ಸಮಾಜವು ಸಾಮುದಾಯಿಕವಾಗಿ ತನ್ನ ನೈತಿಕ ಎಚ್ಚರವನ್ನು ಉಳಿಸಿಕೊಂಡು ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತದೆ ಎನ್ನುವ ನಂಬಿಕೆ. ಈ ಬುನಾದಿಯ ಬಗ್ಗೆಯೇ ನಂಬಿಕೆ ಕಳಚಿಹೋಗುವಂಥ ಇಂದಿನ ಸಂದರ್ಭದಲ್ಲಿ ಅದನ್ನು ನಂಬಿಕೊಂಡು ನಾಗಭೂಷಣರು ಬರೆಯುತ್ತಿರುವುದು ಅವರ ಆರೋಗ್ಯಕರ ಹೋರಾಟಗಾರ ಮನೋಭಾವದ ಲಕ್ಷಣವಾಗಿದೆ.

ಈ ಬರಹಗಳಲ್ಲಿ ತೀವ್ರತೆಯೊಂದಿಗೆ ಪುನರಾವರ್ತನೆಯಾಗುವ ಪ್ರಮುಖ ಕಾಳಜಿಗಳೆಂದರೆ ಜಾಗತೀಕರಣವು ನಮ್ಮ ಸಾಮಾಜಿಕ ಬದುಕನ್ನೂ, ಪ್ರಜ್ಞೆಯನ್ನು ಹೋಳು ಮಾಡಿ ಸಮಗ್ರವಾಗಿ ನಮ್ಮ ಕಾಲದ ಸಂಕಟಗಳನ್ನು ನಾವು ಅರ್ಥಮಾಡಿಕೊಳ್ಳಲಾಗದ ವಿದ್ಯಮಾನ; ಕನ್ನಡವನ್ನು ಸ್ವಾಯತ್ತ ಜ್ಞಾನ-ಅನುಭವ ಪ್ರಪಂಚವನ್ನಾಗಿ ಒಪ್ಪಲು ಅಸಮರ್ಥರಾಗಿರುವುದರಿಂದ ಕನ್ನಡ-ಇಂಗ್ಲಿಷ್‌ಗಳ ಬಗೆಗಿನ ಗೊಂದಲಗಳು, ಕೆಳಜಾತಿ ರಾಜಕಾರಣದ ಅಪಾಯಗಳು (ನನಗೆ ಗೊತ್ತಿದ್ದ ಹಾಗೆ ನಾಗಭೂಷಣರು ಮಾತ್ರ ಇದರ ಬಗ್ಗೆ ಖಚಿತವಾಗಿ ಮಾತನಾಡಿದ್ದಾರೆ.), ಲೋಹಿಯಾ ಮತ್ತು ಅಣ್ಣಾ ಹಜಾರೆಯವರ ಚಳುವಳಿಗಳು. ಈ ಕಾಳಜಿಗಳಿಗೆ ಸಂಬಂಧಿಸಿದ ಅನೇಕ ತಕ್ಷಣದ ಪ್ರತಿಕ್ರಿಯೆಗಳು ಈ ಕೃತಿಯಲ್ಲಿವೆ. ಇವೆಲ್ಲವುಗಳು ಇತ್ತೀಚಿನ ದಶಕಗಳು ನಮ್ಮ ಬದುಕಿನಲ್ಲಿ ತಂದಿರುವ ಆಳವಾದ, ತಬ್ಬಿಬ್ಬುಗೊಳಿಸುವ ಬದಲಾವಣೆಗಳ ಕಾರಣದಿಂದಾಗಿ ಅನಿವಾರ್ಯ ಆಗಿರುವಂಥವು. ಸಮಸ್ಯೆಯೆಂದರೆ ಮಾಧ್ಯಮಗಳಿಂದಾಗಿ ಇವು ಸಾರ್ವಜನಕ ವಲಯದಲ್ಲಿ ಬಹುಬೇಗನೆ ಪರಿಚಿತವಾಗುತ್ತವೆ, ಚರ್ಚಿತವಾಗುತ್ತವೆ. ಆದರೆ ಇಂಥ ಚರ್ಚೆಗಳು ಆಳವಾದ ನಂಬುಗೆಯಲ್ಲಿ ಅಥವಾ ವೈಯಕ್ತಿಕ ಜವಾಬ್ದಾರಿಯ ಆತಂಕಗಳಲ್ಲಿ ಹುಟ್ಟುವುದಿಲ್ಲ. ನಾಗಭೂಷಣರ ಬರಹಗಳು ಇಂಥ ನಿರೀಕ್ಷಿತ ಪ್ರತಿಕ್ರಿಯೆಗಳ ಜಡತೆಯನ್ನು, ಬೋಳೇತನವನ್ನು ಒಡೆದುಹಾಕುವಷ್ಟು ಸೂಕ್ಷ್ಮವಾಗಿವೆ. ಅಲ್ಲದೇ ವೈಚಾರಿಕ ವಿಸ್ತಾರವನ್ನೂ ಹೊಂದಿವೆ. ಈ ಮಾತನ್ನು ಒತ್ತಿ ಹೇಳುವುದಕ್ಕೆ ಕಾರಣವೆಂದರೆ ಮಾಧ್ಯಮಗಳಿಂದಾಗಿ ಈಗ "politically correct" ಆಗಿರುವುದು ಸುಲಭವಾಗಿಬಿಟ್ಟಿದೆ. ಯಾವ ಬಗೆಯ ಪ್ರತಿಕ್ರಿಯೆ ಸ್ವೀಕೃತವಾಗುತ್ತದೆ ಎನ್ನುವುದರ ಬಗ್ಗೆ ಈಗ ಎಲ್ಲರೂ ಬಹಳ ಜಾಣರಾಗುತ್ತಿದ್ದಾರೆ. ಇಂಥ ವೈಚಾರಿಕ ವಾಚಾಳಿತನದ ಮಧ್ಯೆ ನಾಗಭೂಷಣರ ಲೋಕವಿರೋಧಿ ನಿಲುವುಗಳಿಗೆ ನೈತಿಕವಾದ ಬೆಲೆಯಿದೆ.

*"ಹಾಗಾಗಿ ನಮಗೆ ಉಳಿದಿರುವುದು ಒಂದೇ ದಾರಿ. ನಮ್ಮ ಒಳಗಿನ ದನಿಯನ್ನು ಕಾಪಿಟ್ಟುಕೊಂಡು, ಅದರ ಮಾತು ಕೇಳುವಷ್ಟು ಗರಿಷ್ಠ ಎಚ್ಚರ ಮತ್ತು ಕನಿಷ್ಠ ಸಂಯಮಗಳನ್ನು ನಾವು ರೂಢಿಸಿಕೊಳ್ಳುವುದು"* (ಪುಟ ೧೪೩)

ಈ ಕೆಲಸವನ್ನು ನಾಗಭೂಷಣರ ಬರಹಗಳು ಸಮರ್ಥವಾಗಿ ಮಾಡುತ್ತವೆ. ನಿಷ್ಠುರವಾಗಿ ಸತ್ಯವನ್ನು ಅಧಿಕಾರಕ್ಕಷ್ಟೇ ಅಲ್ಲ, ಅಧಿಕಾರ ವಿರೋಧಿಗಳಿಗೂ ಮತ್ತು ನಮಗೂ ಹೇಳಿಕೊಳ್ಳುವ ಅವಶ್ಯಕತೆ ಇದೆ. ಆದರೆ, ಅನೇಕ ಸಂದರ್ಭದಲ್ಲಿ ಕನಿಷ್ಠ ಸಂಯಮವನ್ನು ನಾಗಭೂಷಣರು ಪ್ರತಿಕ್ರಿಯೆಯ ಪ್ರಾಮಾಣಿಕತೆಯ ತೀವ್ರತೆಯಲ್ಲಿ ಕಳೆದುಕೊಳ್ಳುತ್ತಾರೆ. ಎಲ್ಲರೂ ಕಡ್ಡಾಯವಾಗಿ ತಮ್ಮ ಪ್ರಾಮಾಣಿಕತೆ ಹಾಗೂ ಬದ್ಧತೆಗಳನ್ನು ನಿರಂತರವಾಗಿ ಸಾಬೀತುಗೊಳಿಸುತ್ತಲೇ ಇರಬೇಕು ಎಂದು ಹಠ ಮಾಡುತ್ತಾರೆ. ನನ್ನ ಗ್ರಹಿಕೆ ತಪ್ಪಿರಬಹುದು. ಆದರೆ, ಸಮಾಜವಾದವೆಂದರೆ ಮುಳ್ಳು ಹಾವುಗೆಯ ಮೇಲೆ ನಿಂತುಕೊಂಡು ಇತರರನ್ನು ಪರೀಕ್ಷೆ ಮಾಡುವ ಕಠೋರ ವ್ರತ ಮಾತ್ರವೆನ್ನುವ ತಪ್ಪುಕಲ್ಪನೆ ಅಲ್ಲಲ್ಲಿ ಈ ಬರಹಗಳಿಂದ ಬರಬಹುದಾಗಿದೆ. ಆದರೆ, ನಾನು ಯಾವಾಗಲೂ ಅಂದುಕೊಳ್ಳುವುದು, ಸಮಾಜವಾದವು ಜೀವಂತವಾಗಿರುವುದು ಮನುಷ್ಯರ ಬಗೆಗಿನ ನಿತಾಂತವಾದ ಪ್ರೀತಿಯಲ್ಲಿ. ಮತ್ತು ಈ ಪ್ರೀತಿ ಎಲ್ಲರಲ್ಲಿ ಕನಿಷ್ಠ ನಂಬುಗೆಯನ್ನು ಆಶ್ರಯಿಸುತ್ತದೆ. ಇದರ ಹೊಳಹುಗಳು ನಾಗಭೂಷಣರ ಬರಹಗಳಲ್ಲಿ ತುಂಬ ಕಡಿಮೆ. ಗಾಂಧಿ ಮಗುವಿನ ಹಾಗೆ ನಗುತ್ತಿದ್ದರು. ಬಾಬಾ ಸಾಹೇಬ ತಮ್ಮ ಆತ್ಮೀಯರೊಂದಿಗೆ ಇದ್ದಾಗ ಮೈತುಂಬ ಗಹಗಹಿಸಿ ನಗುತ್ತಿದ್ದರು ಎಂದು ಎಲ್ಲಿಯೋ ಓದಿದ್ದೇನೆ. ಇದು ಸಾಮಾಜಿಕ ಬೇಜವಾಬ್ದಾರಿಯ ದ್ಯೋತಕವೆಂದು ನಾಗಭೂಷಣರು ಬರೆದು ಬಿಡಬಹುದೆನ್ನುವ ಹೆದರಿಕೆ ನನಗಿದೆ!

ಸಾಹಿತ್ಯ ಹಾಗೂ ವಿಮರ್ಶೆಗೆ ಸಂಬಂಧಿಸಿದ ಎರಡು ದೀರ್ಘ ಲೇಖನಗಳಲ್ಲಿ ಬರುವ ವಾಗ್ವಾದಗಳನ್ನು ಬೆಳೆಸಿಕೊಂಡು ಹೋಗುವ ಅವಶ್ಯಕತೆ ಇದೆ. 'ದೇಶ-ಕಾಲ' ವಿಶೇಷಾಂಕದ ಕುರಿತು ನಡೆದ ವಾಗ್ವಾದವನ್ನು ವಿಮರ್ಶಿಸುತ್ತ ನಾಗಭೂಷಣ ಎರಡು ಸಂಗತಿಗಳ ಬಗ್ಗೆ ಗಮನ ಸೆಳೆಯುತ್ತಾರೆ. ಒಂದು ನವ್ಯ ವಿಮರ್ಶೆಯು ತನ್ನ ಸೀಮಿತವಾದ ಶ್ರೇಷ್ಠತೆಯ ಪರಿಕಲ್ಪನೆಯನ್ನು ಸಾಂಸ್ಕೃತಿಕ ರಾಜಕಾರಣಕ್ಕಾಗಿ ಬಳಸಿಕೊಂಡಿದ್ದು. ಇನ್ನೊಂದು, ಇದನ್ನು ವಿರೋಧಿಸಿಕೊಂಡು ಬಂದ ಬಂಡಾಯವು ಸಾಹಿತ್ಯದ ಅನನ್ಯತೆಯ ಬದಲಾಗಿ ಸಾಮಾಜಿಕ ನ್ಯಾಯದ ಆಕೃತಿಯನ್ನು ಒತ್ತಾಯಿಸಿತು. ಇದರ ತೊಂದರೆಯೆಂದರೆ ಇದನ್ನು ಯಾವುದೇ ಅತಿಗೆ ಕೊಂಡೊಯ್ಯಬಹುದು. ಸಾಹಿತ್ಯ, ಸಂಸ್ಕೃತಿಗಳಲ್ಲಿಯೂ ಅಧಿಕಾರ ರಚನೆ ಇದ್ದೇ ಇರುತ್ತದೆ. ನಮ್ಮ ಸಂದರ್ಭದಲ್ಲಿ ಇದು ಜಾತಿ ವ್ಯವಸ್ಥೆಗೆ ಅನಿವಾರ್ಯವಾಗಿಯೇ ತಳಕು ಹಾಕಿಕೊಂಡಿರುತ್ತದೆ. ಇದನ್ನು ವಿರೋಧಿಸುವಾಗ ಎಲ್ಲಾ ಸಾಹಿತಿ, ಸಾಹಿತ್ಯಗಳನ್ನು ಗುಮಾನಿಯಿಂದ ನೋಡತೊಡಗಿದರೆ ಅದು ಅಂತಿಮವಾಗಿ ಕೆಳಜಾತಿ ರಾಜಕೀಯಕ್ಕೆ ತಲುಪುತ್ತದೆ. ಈ ಸಂದಿಗ್ಧದಿಂದ ನಮ್ಮ ಚರ್ಚೆಗಳು ಹೊರಬರಬೇಕಿದೆ ಎಂಬುದು ನಾಗಭೂಷಣರ ಸೂಚನೆ.

ಇನ್ನೊಂದು ಲೇಖನ ದಶಕದ ಸಾಹಿತ್ಯ ವಿಮರ್ಶೆಯ ಬಗೆಗಿದೆ. ಇದರ ಬುನಾದಿಯಲ್ಲಿರುವುದು ಒಂದು ತೇಜಸ್ವಿಯವರು ಕನ್ನಡ ಸಂಸ್ಕೃತಿಯ ಬಗ್ಗೆ ಮಂಡಿಸಿದ ಪ್ರಸ್ತಾಪ. ಇನ್ನೊಂದು ಡಿ.ಆರ್.ನಾಗರಾಜರ ಸಂಕೀರ್ಣ ಹುಡುಕಾಟದ ಆಕೃತಿಯ ಬಗ್ಗೆ. ನಾಗಭೂಷಣರು ಇಂದಿನ ವಿಮರ್ಶೆಯನ್ನು ಈ ಹುಡುಕಾಟದ ಮುಂದುವರಿಕೆಯಾಗಿ ಕಾಣುತ್ತಾರೆ. ಇವೆರಡೂ ವಿಚಾರಗಳ ಬಗ್ಗೆ ಸುದೀರ್ಘವಾದ ಚರ್ಚೆಯ ಅವಶ್ಯಕತೆ ಇದೆ. ಅದೇ ರೀತಿ ಮನು ದೇವದೇವನ್‌ರ ಹೇಳಿಕೆಗಳು ವಿಸ್ತಾರವಾದ substantiation ಬಯಸುತ್ತವೆ. ಸದ್ಯದ ರೂಪದಲ್ಲಿ ಅವು ಬೀಸು ಹೇಳಿಕೆಗಳಾಗಿ ಕಾಣುತ್ತವೆ. ಅಂದರೆ ಮನು ಅವರ ತೀರ್ಮಾನಗಳು ಸಮರ್ಪಕವೇ ಇರಬಹುದು; ಆದರೆ ಅವುಗಳಿಗೆ ಆಧಾರವಾದ ಸಂಶೋಧನೆಯನ್ನು ಸಮಗ್ರವಾಗಿ ನೋಡುವವರೆಗೆ ಅವುಗಳನ್ನು ಒಪ್ಪಲಾಗದು. ನಾಗಭೂಷಣರು ಒಪ್ಪಿಕೊಂಡಂತೆ ಕಾಣುತ್ತದೆ.

ಈ ಕೃತಿ ನಮ್ಮ ಸದ್ಯದ ಅತ್ಯಂತ ಉಪಯುಕ್ತ ದಾಖಲೆಯೂ ಆಗಿದೆ.

**-ರಾಜೇಂದ್ರ ಚೆನ್ನಿ**

ಪತ್ರಿಕೆಗೆ ಶುಭವನ್ನು ಕೋರುವ,

**ಕರ್ನಾಟಕ ಬ್ಯಾಂಕ್,**
**ಸಾಗರ**

**ನಿಮ್ಮ ಕುಟುಂಬದ ಬ್ಯಾಂಕ್**
**ಭಾರತದಾದ್ಯಂತ!**

‘ಹೊಸ ಮನುಷ್ಯ’ನಿಗೆ

ಹಾರ್ದಿಕ ಶುಭಾಶಯಗಳು!

**–ಎಂ .ಎಸ್. ರುದ್ರೇಶ್ವರಸ್ವಾಮಿ**
**ಎನ್.ಜಿ. ವನಜಾಕ್ಷಿ**
**ಬೆಂಗಳೂರು**

## 'ಹೊಸ ಮನುಷ್ಯ'ನಿಗೆ

# ಹಾರ್ದಿಕ ಶುಭಾಶಯಗಳು

### ಹಾಸನ ಜಿಲ್ಲೆಯ ಹೆಮ್ಮೆಯ ಕನ್ನಡ ದಿನಪತ್ರಿಕೆ

# 'ಜನತಾ ಮಾಧ್ಯಮ'

* ಪತ್ರಿಕೋದ್ಯಮದಲ್ಲಿ ದಿಟ್ಟ ಹೆಸರು * ೩೫ ವರ್ಷಗಳ ಅವಿಸ್ಮರಣೀಯ ಸೇವೆ

* ತಾಜಾ ಸುದ್ದಿ–ಜನಪರ ನಿಲುವು * ಜಾಹಿರಾತಿಗೆ ಉತ್ತಮ ಮಾಧ್ಯಮ

ಎಸ್.ಎನ್.ಮಂಜುನಾಥದತ್ತ
ಪ್ರಕಾಶಕರು
೯೪೪೮೦–೬೮೪೯೪

ಆರ್.ಪಿ.ವೆಂಕಟೇಶಮೂರ್ತಿ
ಸಂಪಾದಕರು
೯೪೪೮೪–೦೭೫೬೧

Email : Jm_hsn@yahoo.com


**HOSA MANUSHYA, a kannada monthly solely owned edited, and published by D. S. Nagabhushana, Indian by Nationality at HIG-5, Kallahally Extn., Vinobanagara, SHIVAMOGGA-577204. Printed at Ila Printers, No.36, 40 ft. Road, Raghava Nagara, New Timberyard Lay out, Bengaluru-26 Ph. No: 26757159**


## ತಿಂಗಳ ಸಾಲುಗಳು...

"ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ. ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಹಾಗೆ ಮಾಡುವವನೇ ನಿಜವಾದ ನಾಸ್ತಿಕನು. ಮೌಢ್ಯವೇ ಈಶ್ವರ ನಿಂದೆ."

–ಕುವೆಂಪು

ಪತ್ರಿಕೆಗೆ ಶುಭವನ್ನು ಕೋರುವ...

**–ಬಿ. ಸುರೇಶ**
**ಡಾ॥ ವಿಜಯಾ**


**RNI No. KARKAN/2012/47568**
**Reg. No: KA/SK/SMG-1209/2013-15**

**Regd. News paper**

ಇವರಿಗೆ \ To

If undelivered, please return to D.S. nagabhushana, Editor,
'Hosa anushya, 'HIG-5, 'Nudi', Kallahalli Extesion.
Vinoba Nagara, Shivamogga - 577204 (Karnataka)